ಮಹಾಪ್ರಸ್ಥಾನ

ಪು. ತಿ. ನರಸಿಂಹಾಚಾರ್

ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಮೈಸೂರು

ಕನ್ನಡ ಕವಿಕಾವ್ಯಮಾಲೆ—೫೧

ಮಹಾಪ್ರಸ್ಥಾನ

ಪು. ತಿ. ನರಸಿಂಹಾಚಾರ್

ಶಾರದಾ ಮಂದಿರ
ರಾಮಯ್ಯರ್ ರಸ್ತೆ, ಮೈಸೂರು

ಮೊದಲನೆಯ ಮುದ್ರಣ : ೧೯೫೮

Editor and Publisher:
H. M. SHANKAR NARAYAN RAO, M.A.
Asst. Professor and Head of the Department of Kannada
Sharada Vilas College, Mysore.

ಬೆಲೆ: ಸಾಧಾರಣ ಪ್ರತಿ ೧-೫೦
ಕ್ಯಾಲಿಕೋ ಪ್ರತಿ ೩-೦೦

ಮುದ್ರಕರು :
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್
ಕೃಷ್ಣಮೂರ್ತಿಪುರಂ, ಮೈಸೂರು

ಮೊದಲ ಮಾತು

ಈ "ಮಹಾಪ್ರಸ್ಥಾನ"ದ ಮೊದಲೆರಡು ಪ್ರಕರಣಗಳು "ಜೀವನ" ಪತ್ರಿಕೆಯಲ್ಲಿ ಪೂಜ್ಯ ಸಂಪಾದಕರ ಕೃಪೆಯಿಂದ ಈ ಹಿಂದೆ ಅಚ್ಚಾಗಿದ್ದುವು. ಅವು ಸ್ವಲ್ಪ ತಿದ್ದುಪಾಡುಗಳೊಡನೆ ಇಲ್ಲಿ ಪುನಃ ಮುದ್ರಿತವಾಗಿವೆ. ಅವು ಗಳನ್ನು ಓದಿದ ರಸಿಕಮಿತ್ರರ ಪ್ರಶಂಸೆ ಈ ಕೆಲಸವನ್ನು ಈ ಪುಸ್ತಕದವರೆಗೆ ಮುಂದುವರಿಸುವಂತೆ ನನ್ನನ್ನು ಪ್ರೇರಿಸಿತು. ಆ ಪ್ರೇರಣೆಯನ್ನು ಅನುಸರಿಸಿ ಈ ಭಾಷಾಂತರವನ್ನು ನಿರ್ವಹಿಸುವುದರಲ್ಲಿ ನಾನು ಪಡೆದ ತುಷ್ಟಿ ಅಷ್ಟಿಷ್ಟಲ್ಲ. ಏಕೆಂದರೆ ಮೂಲದ ಪ್ರಭಾವ ಅಂಥದು. ನಾವು ಅತ್ಯುತ್ಕೃಷ್ಟವೆಂದು ಪರಿ ಭಾವಿಸುವ ಕಾವ್ಯರಾಶಿಯೆಲ್ಲವೂ ಈ ಮುನಿಪ್ರಣೀತಗಳ ಮುಂದೆ ಹಗಲಿನಲ್ಲಿನ ಹಗಲುಬತ್ತಿಯಂತಲ್ಲದೆ ಮತ್ತೇನೆನಿಸುತ್ತದೆ, ಮೂಲವನ್ನು ಮನನ ಮಾಡು ತ್ತಿರುವಾಗ. ನಮ್ಮ ಜನ ಇಂಥ ಉತ್ಕೃಷ್ಟಕೃತಿಗಳ ಸಂಪರ್ಕದಿಂದ ದೂರ ವಿರಬಾರದು; ನಮ್ಮ ನೆಲ ರಸಪಥಕ್ಕೆಸೆದಿರುವ ಈ ಮನೋಗೋಳಗಳನ್ನು, ಆತ್ಮವಲಯಗಳನ್ನು ನಿರೀಕ್ಷಿಸಿ ಬೆರಗುಪಡುವುದು ನಮ್ಮ ಶ್ರೇಯೋಭಿ ವೃದ್ಧಿಗೆ ಆವಶ್ಯಕ—ಈ ಹಂಬಲಿನಲ್ಲಿ ಈ ಅನುವಾದ ನಡೆದಿದೆ. ನ್ಯೂನಾತಿ ರಿಕ್ತಗಳಿಲ್ಲದಂತೆ ಮೂಲಕ್ಕೆ ಆದಷ್ಟು ಸಮೀಪವಾಗಿ ಸರಳ ಕನ್ನಡದಲ್ಲಿ ಕಥೆಯ ಓಟಕ್ಕೆ ತಕ್ಕ ಛಂದೋಬಂಧ–ಛಂದೋಗಂಧಿಗಳಲ್ಲಿ ಈ ಅನುವಾದ ಗಳನ್ನು ಮಾಡಬೇಕೆಂಬ ನನ್ನ ಪ್ರಯತ್ನ ಎಷ್ಟರಮಟ್ಟಿಗೆ ಸಫಲವಾಗಿದೆಯೋ ಅರಿಯೆ. ಈ ಭಾಷಾಂತರದ ಗುಣಾವಗುಣಗಳನ್ನು ನಿಂತು ಲೆಕ್ಕಿಸುವಷ್ಟು ವ್ಯವಧಾನವನ್ನೂ ಕೊಡದೆ ಓದುಗರ ಮನಸ್ಸನ್ನು ನಿಲುಗಡೆಗೆ ಈ ಕಥಾ ಸರಣಿಗಳು ಕೊಂಡೊಯ್ದರೆ ಆಗ ನನ್ನ ಯತ್ನಕ್ಕೆ ಸಿದ್ಧಿ ದೊರೆತಂತೆಯೇ ಸರಿ. ಇಲ್ಲಿ ಕಾಣಬರಬಹುದಾದ ಅವಜ್ಞತೆಗಳಿಂದ ಮೂಲದ ಮಹಿಮೆಗೆ ಕುಂದೆಣಿಸದಿರಲೆಂಬುದೇ ಸಹೃದಯರಲ್ಲಿ ನನ್ನ ಪ್ರಾರ್ಥನೆ.

"ಮಹಾಪ್ರಸ್ಥಾನ" ದಲ್ಲಿನ ಪ್ರಸಂಗಗಳು ಓದುಗರಿಗೆ ಹೊಸವಲ್ಲ. ದೃಪ್ತರೆಲ್ಲರೂ ಭೂಭಾರರು; ಅಂಥವರನ್ನು ಪರಿಶಮಿಸುವುದೇ ದೇವಾಂಶ ಸಂಭೂತರ ಸಂಕಲ್ಪ. ಸ್ವಜನರ ವಿಷಯದಲ್ಲೂ ಹೇಗೆ ಈ ದೈವಶಕ್ತಿ ನಿಷ್ಪಕ್ಷ

ಪಾತವಾಗಿ ಪ್ರವರ್ತಿಸಿ ಅವರನ್ನು ನಿರ್ಮೂಲನಮಾಡಿ ತನ್ನ ನೆಲೆಯನ್ನು ಸೇರಿತು ಎಂಬ ವಿಷಯ "ದೇಹೋತ್ಸರ್ಗ"ದಲ್ಲಿ ಉದಾಹೃತವಾಗಿದೆ. ಅಲ್ಲದೆ ಅಪ್ರಮೇಯಮಹಿಮನೂ ಅನನುಮೇಯಚರಿತನೂ ಗುಹ್ಯನೂ ಗಭೀರನೂ ಆದ ಶ್ರೀಕೃಷ್ಣನ ಚರಮಚೇಷ್ಟಿತದ ಮನೋಹರವಾದ ವರ್ಣನೆ ನಮಗಿಲ್ಲಿ ದೊರೆಯುತ್ತದೆ. "ಅರ್ಜುನ ಪರಾಭವ" ಅತ್ಯುತ್ಕೃಷ್ಟ ವಾದ ಕಾವ್ಯ. ಲೋಕನಿರ್ವಾಹ ಯಾವೊಬ್ಬ ವ್ಯಕ್ತಿಯ ಮೇಲೂ ನಿಂತಿಲ್ಲ, ಆಯಾ ಕಾಲ ಆಯಾ ಕಾಲಕ್ಕೆ ತಕ್ಕ ವ್ಯಕ್ತಿಯನ್ನು ಪ್ರಭಾವಶಾಲಿಯನ್ನಾಗಿ ಮಾಡಿಕೊಳ್ಳುತ್ತದೆ. ಒಬ್ಬನ ಬಲ ಪೌರುಷ ಪರಾಕ್ರಮ ಕೀರ್ತಿ ಇವುಗಳು ಆಯಾ ಕಾಲ ದೇಶ ಸಮಾಜ ಸಂದರ್ಭಗಳನ್ನು ಅವಲಂಬಿಸಿವೆಯೇ ಹೊರತು ಆತನಿಗೆ ಸ್ವಂತದ್ದೆಂದು ಗರ್ವಪಡಬಹುದಾದುದೇನೂ ಇಲ್ಲ ಎಂಬ ತತ್ತ್ವದ ಭವ್ಯವೂ ಮನೋಜ್ಞವೂ ಆದ ನಿರೂಪಣೆ ವಿಷ್ಣುಪುರಾಣದ ಈ ಅಧ್ಯಾಯ ದಲ್ಲಿದೆ. ಅದನ್ನು ಓದುವುದರಿಂದ ನಮಗೊದಗುವ ಮನಃಪ್ರಸಾದ ವನ್ನು ಅನುಭವದಿಂದ ತಿಳಿಯಬೇಕಷ್ಟೆ. "ಪಾಂಡವಪ್ರಸ್ಥಾನ"ದ ಮೂಲದ ಕಾವ್ಯಗುಣವನ್ನು ವರ್ಣಿಸಹೊರಟರೆ ಮಾತು ತೊದಲುತ್ತದೆ. ಮಹಾ ಭಾರತದ ಕಥಾನಾಯಕನಾರೆಂಬ ವಿಷಯದಲ್ಲಿ ಸಂದೇಹವುಳ್ಳವರು "ಮಹಾ ಪ್ರಸ್ಥಾನಿಕ ಮತ್ತು ಸ್ವರ್ಗಾರೋಹಣ" ಪರ್ವಗಳನ್ನು ಅವಶ್ಯ ಓದಬೇಕು; ಆಗ ಅವರಿಗೆ ಮುಂದಟ್ಟಾಗುತ್ತದೆ, ಧರ್ಮರಾಜನೇ ಕಥಾನಾಯಕನೆಂದು. ಆತನ ವ್ಯಕ್ತಿಮೆ ಇಲ್ಲಿ ಪ್ರಜ್ವಲಿಸುವಷ್ಟು ಮಿಕ್ಕೆಡೆಯಲ್ಲಿ ಇಲ್ಲ. ಯಕ್ಷಪ್ರಶ್ನೆ ಯಲ್ಲಿ ಈ ಪ್ರಖರ ದೀಪ್ತಿಯ ಒಂದು ಹೊಳಹೆಲ್ಲೋ ಸ್ವಲ್ಪ ಹೊತ್ತು ಬೆಳಗಿ ಮರೆಗೊಳ್ಳುತ್ತದೆ; ಮಿಕ್ಕೆಡೆಯಲ್ಲಿ ಆತ, ನಮ್ಮ ತಿರಸ್ಕಾರಕ್ಕೂ ಪಾತ್ರವಾಗು ವಷ್ಟು ಮಟ್ಟಿಗೆ, ಬರಿ ಸಹನಶೀಲ; ಅಷ್ಟೆ. ಇಲ್ಲೋ ಆತನ ಬಗೆ ಬೇರೆ. ಭೀಮಾರ್ಜುನ, ಕರ್ಣದುರ್ಯೋಧನ, ಕೃಷ್ಣ, ಭೀಷ್ಮ, ಪಾಂಚಾಲಿ, ಕುಂತಿ ಇತ್ಯಾದಿ ಮಹಾವ್ಯಕ್ತಿಗಳ ಮರೆಯಲ್ಲಿ ಈ ದಿವ್ಯ ತೇಜಸ್ಸು ಅವಕುಂಠಿತ ವಾಗುತ್ತದೆ ಅಲ್ಲಿ; ಇಲ್ಲೋ ಈ ತೇಜಸ್ಸಿಗೆ ಯಾವ ಮರೆಯೂ ಇಲ್ಲ. ಸ್ವರ್ಗ ದಲ್ಲಾಗಲಿ ಭೂಮಿಯಲ್ಲಾಗಲಿ ಇದರ ಕಾಂತಿಗೆ ಎಣೆಯೇ ಇಲ್ಲದಷ್ಟು ಮೋಹಕವಾಗಿದೆ ಈ ಬೆಳಕು. ಆ ಸ್ಥೈರ್ಯ, ಆ ಧೈರ್ಯ, ಸ್ವಜನದೋಷ ವಿಷಯದಲ್ಲಿ ಆ ಪ್ರಜ್ಞೆ, ಆಶ್ರಿತರಲ್ಲಿ ಆ ಅನುಕಂಪೆ, ಧರ್ಮರಿಕ್ತವೂ ಬಂಧು

ದುರ್ಲಭವೂ ಆದ ಭೋಗದಲ್ಲಿ ಆ ನಿರಾಸಕ್ತಿ, ದೀನರಲ್ಲಿ ಆ ಮರುಕ ಧರ್ಮರಾಯನಲ್ಲಿ ಅಲ್ಲದೆ ಮಿಕ್ಕಾವನಲ್ಲಿ ನಾವು ಕಾಣಲಾಪೆವು? ದ್ರೌಪದಿ ಯಲ್ಲಿ ಆತನ ವ್ಯಾಮೋಹವೆಷ್ಟು—(ಅರ್ಜುನನಲ್ಲಿ ಆಕೆಗೆ ಹೆಚ್ಚು ವಿಶ್ವಾಸ ವಿತ್ತೆಂಬುದನ್ನು ಗುರಿತಿಸುವಷ್ಟು ಸೂಕ್ಷ್ಮಸಂವೇದನೆಯನ್ನು ಆ ಅನುರಾಗ ವಿತ್ತಿತ್ತು ಆತನಿಗೆ. ವಿಶೇಷಣಗಳಿಲ್ಲದೆ ಆಕೆಯ ಮಾತನ್ನೆತ್ತಲಾರ ಆತ. ಆತನ ಅಂತಸ್ಸತ್ತ್ವದ ಗುಟ್ಟು ಇಲ್ಲಿದೆ, ಈ ಅನುರಾಗಶಾಲಿತ್ವದಲ್ಲಿ.) ಈ ಭವವಿಕಾರಗಳಲ್ಲಿ ಎಂಥ ನಿರ್ವಿಕೃತಮನಸ್ಸು ಆತನದು! ಧರ್ಮರಾಯ ಬರಿ ಧರ್ಮಗೊಡ್ಡಲ್ಲ—ಮಾನುಷ್ಯದೊಂದಿಗೆ ದೇವತ್ವಸಿದ್ಧಿ ಆತನೊಬ್ಬ ನಿಗೆಯೇ ಲಭ್ಯ; ಅಂಥ ಸತ್ವಶಾಲಿ ಆತ. ಅದನ್ನೇ ಸಶರೀರ ಸ್ವರ್ಗಗಮನ ವೆಂದು ಬಹು ಮನೋಜ್ಞವಾದ ಮಾತಿನಲ್ಲಿ ಋಷಿಗಳು ವರ್ಣಿಸಿದ್ದಾರೆ. ಪಾಂಡವ ಪ್ರಸ್ಥಾನದಲ್ಲಿ ಈ ಮಹೋಜ್ವಲನ, ಅತ್ಯಂತ ಸ್ಥಿರನ ದರ್ಶನದಿಂದ ನಾವು ಕಲಿಯಬೇಕಾದ ಪಾಠಗಳು ಅನೇಕವಿವೆ. ಅವುಗಳಲ್ಲಿ ಮುಖ್ಯವಾದು ದು, ನಮ್ಮನ್ನು ಬಿಡದೆ ಅನುವರ್ತಿಸಿ ಬರುವ ಭಾರತೀಯತ್ವವೆಂಬ ನಾಯನ್ನು ನಾವೆಂದಿಗೂ ಬಿಡದಿರುವಿಕೆ; ಯಾವ ಭೋಗಾಭಿಲಾಷೆಗೂ ನಮ್ಮ ಸಂಸ್ಕೃತಿ ಮತ್ತು ಸದಾಚಾರಗಳನ್ನುತಿರಸ್ಕರಿಸದೆ ಎತ್ತಿ ಹಿಡಿಯುವಿಕೆ; ನಮ್ಮ ದಾರ್ಶ ನಿಕ ಮೌಲ್ಯಗಳ ವಿಷಯದಲ್ಲಿ ಆನೃಶಂಸ್ಯ.

ಇನ್ನು ಮುಂದೆ ರಾಮಾಯಣದತ್ತ ತೆರಳೋಣ. ಉತ್ತರಕಾಂಡದ ಕೊನೆಯಲ್ಲಿ ಬರುವ ಈ ಪ್ರಕರಣಗಳು ವಾಲ್ಮೀಕಿಪ್ರಣೀತಗಳಲ್ಲವೆಂದು ಹೇಳಿದರೂ ತಿರಸ್ಕಾರಯೋಗ್ಯವಲ್ಲ. ಅವುಗಳ ಕಾವ್ಯಗುಣವನ್ನು ನೋಡಿದರೆ, ವಾಲ್ಮೀಕಿಯಲ್ಲದಿದ್ದರೆ ವಾಲ್ಮೀಕಿಯಂಥ ಮತ್ತೊಬ್ಬ ಮುನಿ ಇವುಗಳನ್ನು ನಿರೂಪಿಸಿರಬೇಕು ಎನ್ನಿಸುತ್ತದೆ. ರಾಮಾಯಣದ ಪೂರ್ವಕಾಂಡಗಳಲ್ಲಿ ಸೀತೆ ನಮ್ಮ ಮರುಕಕ್ಕೆ ಪಾತ್ರಳಾದರೆ, ಇಲ್ಲಾದರೋ ರಾಮನೇ ನಮ್ಮ ಕರುಣೆಗೀಡಾಗುತ್ತಾನೆ. ಸಾಮಾಜಿಕ ಹಿತವೇ ಸ್ವಹಿತವೆಂದೆಣಿಸುವ ವ್ಯಕ್ತಿಗೆ ಎಂಥ ವಿಪತ್ಪರಂಪರೆಗಳು ಒದಗುತ್ತವೆ ಎಂಬುದನ್ನು ತಿಳಿಯಬೇಕಾದರೆ ರಾಮಾಯಣವನ್ನೂ ಉತ್ತರಕಾಂಡದ ಈ ಭಾಗವನ್ನೂ ಬಿಡದೆ ಸಹೃದ ಯರು ಓದಬೇಕು. ರಾಮ ಸೀತೆಯನ್ನು ಮರೆಯಲಾರ. ಆಕೆಯಿಲ್ಲದೆ ಆತನ ಬಾಳು ಆನಂದರಹಿತವಾದುದು. ಆಕೆಯನ್ನು ಪಡೆಯಬೇಕೆಂಬಾಸೆಗೆ

ಜನದ ಪೂರ್ವಗ್ರಸ್ತಮನಸ್ಸು ಅಡ್ಡಿ ಬರುತ್ತದೆ. ಅದನ್ನು ಪರಿಹರಿಸುವ ಬಗೆ ಹೇಗೆ? ಪುನಃ ಆಕೆಯನ್ನು ಜನದೊಡ್ಡಿನ ಮುಂದೆ ನಿಲ್ಲಿಸುವುದು, ಅವರ ಮನಸ್ಸು ಕರಗುವಂತೆ ಶಪಥವನ್ನು ನಿರ್ವಹಿಸಿ ಶುದ್ಧಳಾಗೆಂದು ಆಕೆಗೆ ನಿಯಮಿಸುವುದು. ಆದರೆ ಈ ಮೂರನೆಯ ಯತ್ನ ಸೀತೆಯ ಸಹನೆಗೆ ಮೀರಿದುದಾಯಿತು. ಆಕೆಯ ಭೂಪ್ರವೇಶ ರಾಮನನ್ನು ಹುಚ್ಚನನ್ನಾಗಿ ಮಾಡುತ್ತದೆ. ತಾನೂ ಇನ್ನಿರಬಾರದು ಎನ್ನಿಸಿರಬೇಕು ಆತನಿಗೆ. ಇದಾದ ಮೇಲೆ ಲಕ್ಷ್ಮಣನನ್ನು ತ್ಯಜಿಸುವ ದಾರುಣ ಪ್ರಸಂಗವನ್ನು ನಿಷ್ಕರುಣಿ ಕಾಲ ಆ ಮಹಾತ್ಮನಿಗೆ ತಂದೊಡ್ಡುತ್ತದೆ. ತನ್ನ ಪ್ರಸ್ಥಾನಕ್ಕೆ ಲಕ್ಷ್ಮಣನ ವಿಯೋಗವೂ ಸೂಚನೆಯಿತ್ತಿತು. ಅನಿವಾರ್ಯರಾದ ಭರತಶತ್ರುಘ್ನ ಸುಗ್ರೀವಾದಿಗಳೊಡನೆ—ಆಂಜನೇಯ ವಿಭೀಷಣರನ್ನುಳಿದು—ರಾಮ ಅಯೋಧ್ಯಾವಾಸಿಗಳೆಲ್ಲರ ಸಮೇತ ಸರಯೂ ನದಿಯಲ್ಲಿ ಮುಳುಗಿ ಮೇಲೇಳುತ್ತಾನೆ, ತನ್ನ ದಿವ್ಯನೆಲೆಯತ್ತ ಸರಿಯಲು. ಹೀಗೆ ಮುಗಿಯುತ್ತದೆ ರಾಮಾಯಣ. "ಅಕಸ್ಮಾದಾಗತಂ ಭೂತಂ ಅಕಸ್ಮಾದೇವ ಗಚ್ಛತಿ" ಎಂಬ ಋಷಿವಾಕ್ಯ ಇಂಥ ಮಹಾತ್ಮರಲ್ಲಿ ಮಾತ್ರ ವ್ಯರ್ಥವಾಗುತ್ತದೆ. ನಿರ್ದಿಷ್ಟಾರ್ಥಕ್ಕಾಗಿ ಭೂಮಿಗಿಳಿದು ಕೃತಕೃತ್ಯರಾದೊಡನೆ ಸ್ವೇಚ್ಛೆಯಿಂದ ಮರಳುವ ಈ ಮಹಾಪುರುಷರ ಉದಯದಂತೆ ಪ್ರಸ್ಥಾನವೂ ವಿಲಕ್ಷಣವಾದುದು, ಲೋಕಮೋಹಕವಾದುದು.

ಈ ಕಾವ್ಯಖಂಡಗಳನ್ನು ಓದುವುದರಿಂದ ನಮಗಾಗುವ ಪ್ರಯೋಜನವಾದರೂ ಏನು? ಇಲ್ಲಿ ನಮಗೆ ಸನ್ಮನಸ್ಸಂಗ ಲಭಿಸುತ್ತದೆ; ಅದರ ಫಲ ಮನಶ್ಶಾಂತಿ, ಚಿತ್ತಪುಷ್ಟಿ, ಆತ್ಮತುಷ್ಟಿ; ಮಾನುಷ್ಯವನ್ನು ತೊರೆಯದೆ ದೇವತ್ವವನ್ನು ಪಡೆಯುವ ಕೌಶಲದ ಲಾಭ ನಮಗಿಲ್ಲಿ; ಈ ಪಾಂಚಭೌತಿಕಶರೀರದಲ್ಲಿದ್ದುಕೊಂಡೇ ಸ್ವರ್ಗಸುಖಪ್ರಾಪ್ತಿ—ಒಂದು ಮಾತಿನಲ್ಲಿ, "ರಸಸ್ಥಿತಿ"ಯಲ್ಲಿ ನಾವು ಚಿರಕಾಲವಿರುವಿಕೆ. ಭವವಿಕಾರಗಳಲ್ಲಿ ನಿರ್ವಿಕೃತಮನಸ್ಸನ್ನು ಪಡೆಯುವದಕ್ಕಿಂತ ಮಿಕ್ಕಿನ ಲಾಭ ಯಾವುದು? ಅಂಥ ಲಾಭವನ್ನು ಪಡೆಯಬಯಸುವವರಿಗೆ ಇಂಥ ಋಷಿವಾಣಿಗಳು ಅಮೃತವನಿಧಿ.

ಈ ಪುಸ್ತಕವನ್ನು ಹೊರತರಲು ಉತ್ಸಾಹಗೊಂಡಿರುವ ಮಿತ್ರ

ಪ್ರೊಫೆಸರ್ ಎಚ್. ಎಂ. ಶಂಕರನಾರಾಯಣರಾಯರಿಗೂ, ಕರಡಚ್ಚಿನ ಹಲವು ಪುಟಗಳನ್ನು ಪರಿಷ್ಕರಿಸಲು ಸಹಾಯಕರಾಗಿ ಸಲಹೆಗಳನ್ನಿತ್ತು ಉಪಕರಿಸಿದ ತರುಣ ಮಿತ್ರ ಶ್ರೀ ಹೆರಕಲ್ ಪ್ರಹ್ಲಾದಾಚಾರ್ಯರಿಗೂ ನಾನು ಕೃತಜ್ಞನಾಗಿದೇನೆ.

ಮೇಲುಕೋಟೆ
೨೯-೭-೫೮

ಪು. ತಿ. ನರಸಿಂಹಾಚಾರ್

ವಿಷಯಾನುಕ್ರಮಣಿಕೆ

ಮಹಾಪ್ರಸ್ಥಾನ

ದೇಹೋತ್ಸರ್ಗ

ಪರಾಶರ

ಬೆಂಬಲಕೆ ಬಲದೇವನಿರೆ ಕೃಷ್ಣ ದೈತ್ಯರನು
ಕೊಂದನೀ ಜಗದ ಸಲುವಾಗಿ ; ದುಷ್ಟಭೂಪರ
ತೀರಿಸಿದ; ಅಕ್ಷೌಹಿಣೀಗಣಗಳೆಲ್ಲವನು
ಅರ್ಜುನನ ಜತೆಗೂಡಿಯಳಿಸಿದನು ; ಭೂಭಾರ
ವಿಳಿಸಿದನು. ಇಂತು ನೃಪರೆಲ್ಲರನು ತೀರಿಸುತ
ತಿರೆಯ ಭಾರವನಿಳುಹಿ, ವಿಪ್ರಶಾಪದ ನೆವದಿ
ಕುಲವನುಪಶಮಿಸಿದನು ; ದ್ವಾರಕೆಯ ತ್ಯಜಿಸಿದನು ;
ತನ್ನ ಮಾನುಷ್ಯವನು ತೊರೆಯುತಂಶಗಳೊಡನೆ
ವಿಷ್ಣುಮಯದಾ ನಿಜಾವಾಸವನು ಹೊಕ್ಕನೈ.

ಮೈತ್ರೇಯ

ಎಂತು ಸಂಹರಿಸಿದನು ತನ್ನ ಕುಲವನೆ ಆತ
ವಿಪ್ರಶಾಪದ ನೆವದಿ ? ಆ ಜನಾರ್ದನ ತನ್ನ
ಮಾನುಷ್ಯದೇಹವನು ತೊರೆದನೇಪರಿಯೊಳಗೆ ?

ಪರಾಶರ

ಯದುಕುಮಾರಕರು ಮಹಾತೀರ್ಥಪಿಂಡಾರಕದಿ
ಕಣ್ವ ವಿಶ್ವಾಮಿತ್ರ ನಾರದಮಹರ್ಷಿಗಳ
ಕಂಡರೊಮ್ಮೆಗೆ. ಬಳಿಕ ಯೌವನೋನ್ಮಾದದಿಂ,
ಭವಿತವ್ಯ ಪ್ರೇರಿಸಲು, ಜಾಂಬವತಿಯೌರಸನ
ಸಾಂಬನೆಂಬಾತನನು ಹೆಣ್ಣಿನೊಲು ಸಿಂಗರಿಸಿ

ಮುಂದೆರಗಿ ಪೈಕುಗ್ಗಿ ನಿಲ್ಲುತಾ ಮುನಿಗಳಿಗೆ
ಈ ತೆರದೊಳೊರೆದರ್ಪ್ಯ " ಈ ಹೆಣ್ಣು ಮಕ್ಕಳನು
ಬಯಸಿಹಳು ; ಹೆರುವಳಾವುದ ಹೇಳಿ ?"— ಇಂತೆನೆ
ಅಲೌಕಿಕ ಜ್ಞಾನದಿಂದೊಡಗೂಡಿದಾ ಮುನಿಗಳ್
ಆ ಕುಮಾರರ ವಂಚನೆಯನರಿತು ಕೋಪಗೊಂ-
ಡಿಂತೆಂದರ್ : " ಈಕೆ ಯಾದವರನೆಲ್ಲರನು ಸಾ-
ಬಡಿವ ಲೋಕೋತ್ತರದ ಒನಕೆಯೊಂದನು ಹೆರುವಳ್.
ಅದರಿಂದ ಯಾದವರ ಸರ್ವಕುಲ ಪಿಳ್ಳೆಯುಳಿ-
ಯದ ತೆರದಿ 'ನಾಶವಪ್ಪುದು " ಎಂದು. ಕೇಳುತಿದ
ಆ ಕುಮಾರಕರುಗ್ರಸೇನಂಗೆ ನಡೆದಂತೆ
ನುಡಿದರ್ಪ್ಯ. ಇತ್ತಲಾ ಸಾಂಬನೊನಕೆಯ ಹೆತ್ತ.
ಆ ಉಕ್ಕಿನೊನಕೆಯನು ಪುಡಿಮಾಡಿ ಕಡಲೊಳಗೆ
ಚೆಲ್ಲಿಸಿದನುಗ್ರಸೇನಂ. ಅಲ್ಲಿ ಆ ಚೂರ್ಣ
ಏರಕದ ಜೊಂಡಾಗಿ ಹುಟ್ಟಿತ್ತೈ. ಈ ತೆರದಿ
ಯಾದವರು ಪುಡಿಮಾಡಿದುಕ್ಕಿನೊನಕೆಯ ಕೊನೆಯ
ಚೂರೊಂದು ತೋಮರಾಕೃತಿಯಾಗಿ ಮಿಗಲದನು
ಕಡಲಿಗಿಡೆ ಮೀನೊಂದು ನುಂಗಲದು ಬಲೆಗಾಗೆ
ಜರನೆಂಬ ಬೇಡನದರ ಹೊಟ್ಟೆಯ ಸೀಳಿ
ಕೊಂಡನಾ ತೋಮರವ. ಇದರ ಪರಮಾರ್ಥವನು
ತಿಳಿದರೂ ಭಗವಂತ ಮಧುಸೂದನನು ವಿಧಿಯ
ಕಟ್ಟಳೆಯ ಬದಲಿಸಲು ಬಯಕೆಗೊಳದಿದ್ದನೈ.
ದೇವರ್ಕಳೂ ಕೂಡ ವಾಯುದೂತನನಟ್ಟಿ
ಕೇಶವನ ಕಂಡೆರಗಿ ಗುಟ್ಟೊಳಿಂತೊರೆದನವ :
" ಭಗವಂತ, ದೂತ ನಾ. ಸುರರು ಕಳುಹಿದರೆನ್ನ.
ವಸ್ವಶ್ವಿಮರುತರಾದಿತ್ಯಸಾಧ್ಯರು ರುದ್ರ-
ರೊಡಗೂಡುತಿಂದ್ರನೀ ತೆರದಿ ಬಿನ್ನವಿಸುವಂ
ಆಲಿಸಿದ, ಓ ವಿಭೂ, ' ದೇವರ್ಕಳೆರೆಯೆ ನೀ

ಬುವಿಯ ಭಾರವನಿಳುಹಲೀ ತಳದೊಳವತರಿಸಿ
ನೂರರೆಣಿಕೆಗು ಮಿಕ್ಕ ವತ್ಸರಗಳಾದವು.
ನಡೆಗೆಟ್ಟ ದೈತರನು ಕೊಂದುದಾಯಿತ್ತು ; ಇಳೆಯ
ಭಾರವನು ಕಳೆದಾಯ್ತು. ಇನ್ನು ನಿನ್ನನು ಕೂಡಿ
ಸನಾಥರಾಗಲಿ ಸುರರು ಸ್ವರ್ಗದೊಳು ಸರ್ವದಾ.
ನೂರಿಗೂ ಹೆಚ್ಚಾಗಿ ಸಂದಿಹವು ವತ್ಸರಗ-
ಳದರಿಂದ ದಿವಕಿನ್ನು ಹಿಂತಿರುಗೆ ಮನವ ಗೈ
ನಿನಗಿದಭಿಮತವಾಗೆ ; ಅಲ್ಲದನುಜೀವಿಗಳ
ಸಂಗಡದೊಳಿಲ್ಲಿಯೇ ನಿಲ್ಲೆ ನೀ ಬಯಸುವೊಡೆ
ಕಾಲ ತೀರುವ ತನಕ, ದೇವ, ನಿಲ್ಲಿಲ್ಲಿಯೇ'
ಎಂದು ಬಿನ್ನವಿಸುವರು ದೇವತೆಗಳೆಂದೆನ್ನೆ—

ಭಗವಂತ

ಏನನೊರೆದೆಯೊ, ದೂತ ನಾನದನು ಬಲ್ಲೆನೈ.
ಯಾದವರ ನಾಶಕ್ಕೆ ಮೊದಲನಿಟ್ಟಹೆನಿದೊ.
ಭೂಭಾರವಿಳಿದಿಲ್ಲ ಯಾದವರು ಬದುಕಿರಲು.
ಇನ್ನೇಳು ರಾತ್ರಿಯೊಳಗದನು ನಾನಿಳುಹುವೆನು.
ಕಡಲಿನಿಂದೆತ್ತಿದೀ ದ್ವಾರಕೆಯ ನೆಲಗಟ್ಟ
ಕಡಲಿಗೇ ಮರಳಿಸುತ ಯಾದವರ ಸಂಹರಿಸಿ
ತ್ರಿದಶಾಲಯವ ಹೊಗುವೆ. ಮನುಜದೇಹವ ತೊರೆದು
ಸಂಕರ್ಷಣನ ಜತೆಗೆ ಬಂದೆನೆಂದೇ ಬಗೆಯ-
ಲಿಂದ್ರನೂ ಅಮರರೂ. ಭೂಭಾರರಿವರೆಂದು
ಜರಾಸಂಧಾದಿಗಳನೆಂತು ಕೊಂದೆನೊ ಅಂತೆ
ಯದುಪಿಳ್ಳೆಯೂ ಕೂಡ ಕೊರೆಯಿಲ್ಲವವರಿಗೆನೆ
ಕೊಲ್ಲುವೆನು. ಇಂತುಟೀ ತಿರೆಯ ಬಲು ಹೊರೆಯನ್ನು
ಕಳೆದು ನಾ ಬಂದಪೆನು ಸುರಲೋಕವನು ಹೊರೆಯೆ
ಇಂತು ಹೇಳವರಿಗೆನೆ—

ಪರಾಶರ

ಆ ಮಾತಕೊಳ್ಳುತಾ
ದೇವದೂತನು ದಿವ್ಯಗಮನದಲಿ ಗಮಿಸಿದನು
ವಾಸುದೇವಂಗೆರಗಿ ದೇವೇಂದ್ರಸನ್ನಿಧಿಗೆ.
ಇತ್ತ ಭಗವಂತನೂ ಹಗಲಿರುಳು ಕಂಡನೈ
ಬಾನಿನೊಳು ಬುವಿಯೊಳಗೆ ಅಂತರಿಕ್ಷದೊಳೊಗೆವ
ನಾಶದುತ್ಪಾತಗಳನಾ ದ್ವಾರಕಾಪುರದಿ.
ಕಾಣುತಿವ ಯಾದವರಿಗಿಂತೆಂದ : " ನೋಡಿರೈ
ಬಲು ಕೇಡಿನೀ ಮಹೋತ್ಪಾತಗಳ. ತಡಮಾಡ
ದಿವನು ತಂಪನುಗೊಳಿಸೆ ಹೋಗುವ ಪ್ರಭಾಸಕ್ಕೆ."

ಪರಾಶರ

ಕೃಷ್ಣನೀಪರಿಯೊರೆಯೆ, ಹರಿಗಡ್ಡಬೀಳುತ್ತ
ಯಾದವಪ್ರವರನುದ್ಧವ ಮಹಾಭಾಗವತ-
ನಿಂತೆಂದ : " ಭಗವಂತ, ಕಜ್ಜವೇನೆನಗೀಗ?
ಈ ಕುಲವನೆಲ್ಲ ಸಂಹರಿಸುವನು ಭಗವಂತ-
ನೆಂದೆ ನಾ ಬಗೆವೆನು ; ಈ ನಿಮಿತ್ತಗಳೆಲ್ಲ
ಕುಲದ ನಾಶದ ಕುರುಹು."

ಭಗವಂತ

ನನ್ನ ಕರುಣೆಯೊಳಾದ
ದಿವ್ಯ ಗತಿಯಿಂ ಗಮಿಸು ಗಂಧಮಾದನ ಗಿರಿಯ
ಪುಣ್ಯ ನರನಾರಾಯಣಸ್ಥಾನ ಬದರಿಕಾ-
ಶ್ರಮದೆಡೆಗೆ. ಬುವಿಯೊಳು ಪವಿತ್ರವದು. ಅಲ್ಲಿ ಮ-
ನ್ಮನನಾಗಿ ನನ್ನನುಗ್ರಹದಿಂದ ಸಿದ್ಧಿಯನು
ಪಡವೆ ನೀ. ಕುಲವನುಪಸಂಹರಿಸಿ ಸ್ವರ್ಗಕೈ-
ದುವೆ ನಾನು. ನಾ ಬಿಟ್ಟ ದ್ವಾರಕೆಯ ಕಡಲು ಕೊ-

ಳ್ಳುವುದೊಳಗೆ, ನನ್ನೊಂದು ಮಾಡವನು ನನ್ನ ಭಯ-
ದಿಂ ಬಿಟ್ಟು. ಅಲ್ಲಿ ನಾ ಸನ್ನಿಹಿತನಾಗಿರುವೆ
ಭಕ್ತಹಿತವನೆ ಬಯಸಿ.

ಪರಾಶರ

ಇಂತೆನ್ನೆ, ಪ್ರಣಮಿಸುತ
ಕೇಶವನ ಸಮ್ಮತಿಯ ಕೊಂಡು ಹೊರಟನು ತಪೋ-
ವನಕೆ ನರನಾರಾಯಣ ಸ್ಥಲಕೆ ಬೇಗದೊಳು.
ಬಳಿಕ ಯಾದವರೆಲ್ಲ ರಾಮಕೃಷ್ಣರ ಕೂಡಿ
ವೇಗದೊಳು ಧಾವಿಸುವ ತೇರುಗಳನೇರುತ್ತ
ನಡೆದರು ಪ್ರಭಾಸಕ್ಕೆ. ಈ ತೆರದಿ ಪ್ರಭಾಸವನು
ಸೇರಿ ಆ ತಾಣದೊಳು ಕುಕರ ಅಂಧಕ ವೃಷ್ಣಿ-
ಗಳು ಮಹಾಪಾನವಂ ಗೈದರೈ, ಉಬ್ಬಿಸಲು
ವಾಸುದೇವಂ. ಬಳಿಕ ಕುಡಿದಮಲಿನೊಳಗೊಬ್ಬ-
ರೊಬ್ಬರನು ತಾಗುತಿರೆ ಅವರ ನಡುವೆದ್ದಿತೈ
ಕ್ಷಯದ ತಹ ಅತಿವಾದದಿಂಧನದ ಕಲಹಾಗ್ನಿ.

ಮೈತ್ರೇಯ

ತಮ್ಮತಮ್ಮದನುಂಡು ತಣಿಯುತಿರುವವರೊಳಗೆ
ಕಲಹವೇತರಿನಾಯ್ತು ; ಹೋರುವೆಯದೇತಕ್ಕೆ ?

ಪರಾಶರ

‘ ನನ್ನನ್ನ ಮೃಷ್ಟವಿದು, ನಿನ್ನದೊ ಅಮೃಷ್ಟವದು ’
ಎಂಬ ಮೃಷ್ಟಾಮೃಷ್ಟ ಕಥನದಿಂದೀ ಕಲಹ
ಹುಟ್ಟಿ ಸಂವರ್ಧಿಸಿತು. ಬಳಿಕವರು ಕೋಪದಿಂ
ಕಂಗಳೊಳು ಕೆಂಡಗಳ ಕಾರುತ್ತಲೊಬ್ಬರೊ-
ಬ್ಬರು ತಾಗಿ ಶಸ್ತ್ರಗಳ ಕೊಂಡು ಬಡಿದಾಡಿದರು

ದೈವವೆ ಬಲಾತ್ಕಾರಿಸೆ. ಶಸ್ತ್ರಗಳು ತೀರಿಬರೆ
ಬಳಿಯೊಳೇ ಬೆಳೆದಿರುವ ಜೊಂಡ ಕಿತ್ತೆತ್ತಿದರು.
ಕೈಗೆ ಬಂದಾ ಜೊಂಡು ವಜ್ರದೊಲೆ ತೋರಿತು.
ಆಗದನೆ ಹಿಡಿದು ಹೊಡೆದಾಡಿದರು ಪ್ರದ್ಯುಮ್ನ
ಸಾಂಬರೇ ಮುಂದಾಗೆ ಕೃತವರ್ಮ ಸಾತ್ಯಕಿ
ಅನಿರುದ್ಧ ಬಳಿಕ ಪೃಥು ವಿಪೃಥು ಚಾರುಕ ಚಾರು-
ವರ್ಮ ಅಂತೆ ಅಕ್ರೂರ ಇಂತಿವರು ಮೊದಲಾಗಿ
ಏರಕದ ರೂಪಾದ ವಜ್ರದಿಂದಲೆ ಹೊಡೆದ-
ರೊಬ್ಬೊಬ್ಬರನಂದು. ಇವರ ತಡೆಯಲು ಬಂದ
ಕೇಶವನ ಯಾದವರು ಹಗೆಗಿವನು ನೆರವೆಂದೆ
ಬಗೆದು ಬಡಿದಾಡಿದರು. ಕೃಷ್ಣನೂ ಕೋಪಿಸುತ
ತಾನವರ ಕೊಲೆ ಬಯಸಿ ಜೊಂಡ ಹಿಡಿಯೊಳು ಕೊಂಡ.
ಅದು ಲೋಹದೊನಕೆಯಾಯ್ತದರಿಂದ ತಂತಮ್ಮ-
ನೇ ಸದೆವ ಯಾದವರ ನಿಶ್ಶೇಷರಾಗುವೊಲು
ಸದೆದನವ. ಬಳಿಕವರು ಥಟ್ಟನೆಯೆ ಮೇಲೆರಗಿ
ಮಿಕ್ಕವರು ಮೇಲ್ವಾಯ್ದು ಹೊಯ್ದಾಡಿ ಕೆಡೆದರು.
ಆಗಳಾ ದಾರುಕನು ನೋಡುವಂತೈದಿತ್ತೈ
ಸಾಗರದ ನಡುವಣಿಂ ಕುದುರೆಗಳ ಹೂಡಿರುವ
ಚಕ್ರಹಸ್ತನ ತೇರು ಚೈತ್ರನಾಮಕವದು.
ಚಕ್ರ ಗದೆ ಶಾರ್ಙ್ಗಧನು ತೂಣೀರ ಶಂಖಾದಿ
ಗಳು ಹರಿಯ ಬಲವಂದು ಗಮಿಸಿದವು ಭಾಸ್ಕರನ
ಮಾರ್ಗದೊಳು. ಕ್ಷಣದೊಳೇ ಯಾದವರೊಳಾವನೂ
ಮಡಿಯದುಳಿದವನಿಲ್ಲ ಕೃಷ್ಣದಾರುಕರುಳಿದು.
ಸುಳಿದಾಡುತಲ್ಲಲ್ಲಿ ಬರುತವರು ಕಂಡರೈ
ಒಂದು ತರುಮೂಲದೊಳು ಕುಳಿತ ಬಲರಾಮನನು ;
ಮತ್ತವನ ಮೊಗದಿಂದ ಮಹಾಸರ್ಪವದೊಂದು
ಹೊರಹೊರಡುತಿರುವುದನು. ಬಲನ ಮುಖದಿಂ ಹೊರಟ

ಆ ಮಹಾ ಫಟಿಸರ್ಪ ಸಿದ್ಧರಿಂದುರಗರಿಂ
ಪೂಜೆಗೊಂಡೈದಿತ್ತೈ ಸಾಗರವ. ಆಗ ಜಲ-
ನಿಧಿ ಅರ್ಘ್ಯವೊಪ್ಪಿಸುತಲಿದಿರುಗೊಳೆ ಹೊಕ್ಕಿತದು
ಮುನ್ನೀರ, ಪನ್ನಗೋತ್ತಮರಿಂದ ಪೂಜೆಗಳ
ಕೊಳ್ಳುತ್ತ. ಬಲದೇವನೀ ತೆರದಿ ತೆರಳಿದುದ
ಕಾಣುತ್ತ ಕೇಶವನು ದಾರುಕನ ಕುರಿತೆಂದ:
“ಇದನೆಲ್ಲ ನೀನರುಹು ವಸುದೇವನಿಗು ಉಗ್ರ
ಸೇನನಿಗು—ಬಲಭದ್ರ ಹೋದುದನು ಯಾದವರು
ಮಡಿದುದನು. ನಾನುಮೀ ದೇಹವನು ಬಿಸುಡುವೆನು
ಯೋಗದೊಳು ನೆರೆನಿಂತು. ದ್ವಾರಕೆಯ ಜನಗಳಿಗು
ಆಹುಕಗು ತಿಳಿಸಿದನು ಈ ನಗರಿಯೆಲ್ಲವನು
ಕಡಲು ನುಂಗುವುದೆನುತ; ಆದಕಾರಣಕಾಗಿ
ಅರ್ಜುನನು ಬರುವುದನೆ ಕಾಯುತಿರುವುದು ನೀವು;
ದ್ವಾರಕೆಯೊಳಿರಲಾಗದವನೂರ ಬಿಡುವಂದು-
ಆತ ಹೋದತ್ತಲೇ ಅವನ ಹಿಂಬಾಲಿಪುದು.
ಕೌಂತೇಯುಗರ್ಜುನಗೆ “ನಿನ್ನ ಶಕ್ತಿಯೊಳೆನ್ನ
ಮಡದಿಯರ ಸಲಹುವುದು” ಎಂದು ನಾನೆಂದೆನೆನು.
ನೀನುಮಾ ಪಾಂಡವನ ಜತೆಗೂಡಿ ದ್ವಾರಕಾ-
ವಾಸಿಗಳ ಕೊಂಡೊಯ್ಯಿ; ವಜ್ರನಾಗಲಿ ರಾಜ.”
ಇಂತೊರೆವ ಕೃಷ್ಣನಿಗೆ ಬಾರಿಬಾರಿಗು ಮಣಿದು
ಹಲಸಾರಿ ಬಲವಂದು ನಡೆದನಾ ನುಡಿಗೊಂಡು
ದಾರುಕಂ. ದ್ವಾರಕೆಯೊಳಿದನೆಲ್ಲವರುಹಿದಂ.
ಅರ್ಜುನನ ಕರೆತಂದು ವಜ್ರನಿಗೆ ಪಟ್ಟವನು
ಕಟ್ಟಿದನು.
ಇತ್ತಲಾ ಭಗವಂತ ಗೋವಿಂದ
ಸರ್ವಭೂತದೊಳಿರುವ ವಾಸುದೇವಾತ್ಮಕದ
ಪರಬ್ರಹ್ಮವನು ಆತ್ಮದೊಳು ಕೊಂಡು ಧರಿಸಿದನು.

ನಿರ್ವಿಕಲ್ಪಕದೊಳಾತ್ಮನಾತ್ಮನೊಳು ಕೂಡಿಸುತ
ತಾ ತುರೀಯದಿ ನೆಲಸಿ ಲೀಲೆಯೊಳು ಪವಡಿಸಿದ
ಕೃಷ್ಣ ಪುರುಷೋತ್ತಮನು. ದುರ್ವಾಸವಚನವನು
ಸನ್ಮಾನಿಸಲು ಬಗೆದು ಕಾಲ ತೊಡೆಯೊಳಗಿಟ್ಟು
ಯೋಗವಾಂತನು ಹರಿ. ಅಲ್ಲಿಗಾ ಜರನೆಂಬ
ಬೇಡರವನೈತಂದ, ಲೋಹದೊನಕೆಯ ತುಣುಕ
ಕಣೆಯ ಕೊನೆಯೊಳು ನಟ್ಟು. ದೂರ ನಿಂತಿರುವವಗೆ
ಮೃಗದಂತೆ ಪದ ತೋರೆ ಘಾತಿಸಿದನಾತಲವ
ತೋಮರದ ಕಣೆಯಿಂದ. ಬಳಿಕ ಆ ತಾಣದೊಳೆ
ನಾಲ್ಕು ತೋಳಿನ ಮನುಜನೊರ್ವನಿರುವುದ ಕಂಡು
ಬಂದಡ್ಡಬೀಳುತ್ತ ಕರುಣಿಸೆನ್ನುತ ಬಾರಿ-
ಬಾರಿಗೂ ಬೇಡಿದನು "ಜಿಂಕೆಯೆನ್ನುತ ನೆನೆದು
ತಿಳಿವಿಲ್ಲದಿದ ಗೈದೆ; ಪಾಪ ಸುಡುತಿರುವೆನ್ನ
ಕ್ಷಮಿಸು ಕಾಪಿಡು" ಎನುತ.

ಪರಾಶರ

ಬಳಿಕ ಆ ಭಗವಂತ
ನುಡಿದನೀತೆರ ಅವಗೆ: "ಅಂಜದಂಜದಿರಣ್ಣ;
ನನ್ನನುಗ್ರಹದಿಂದ ಸುರರಿಗಾಸ್ಪದವಾದ
ಸ್ವರ್ಗವನೆ ಸಾರು." ಈ ಮಾತು ಮುಗಿವುದರೊಳಗೆ
ದಿವದಿಂ ವಿಮಾನ ಬರೆ ಆ ವ್ಯಾಧನದನೇರಿ
ಸ್ವರ್ಗದತ್ತೆಡೆಹೋದ ಹರಿಯನುಗ್ರಹದಿಂದ.
ಆತನತ್ತೆಡೆ ಹೋಗಲಿತ್ತಲಾ ಭಗವಂತ
ಆತ್ಮವಾತ್ಮನೊಳಿರಿಸಿ ಬ್ರಹ್ಮಮಯವಾಗಿರುವ
ಅವ್ಯಯದಚಿಂತ್ಯದ ವಾಸುದೇವಾತ್ಮಕದ
ಅಜನ್ಮದಿವ್ಯದ ಅಮಲಾಪ್ರಮೇಯದ
ಸರ್ವವನು ವ್ಯಾಪಿಸಿರುವಖಿಲಾತ್ಮದೊಳು ತನ್ನ
ಮನುಜದೇಹವ ತೊರೆದ ಮೂತೆರದ ಗತಿಮೀರಿ.

ಅರ್ಜುನಪರಾಭವ

ಪರಾಶರ

ರಾಮಕೃಷ್ಣರ ಕಳೇಬರವನರ್ಜುನ ನೋಡಿ
ಅಂತ್ಯಸಂಸ್ಕಾರಗಳ ನಡಸಿದನನುಕ್ರಮದಿ ;
ಉಳಿದರಿಗುಮಂತೆಯೇ. ರುಕ್ಮಿಣೀ ಮೊದಲಾದ
ಅಷ್ಟಮಹಿಷಿಗಳವರು ತಮ್ಮ ತನುವೊಳು ಹರಿಯ
ದೇಹವನು ಹುದುಗಿಸುತ ಹೊಕ್ಕರು ಚಿತಾಗ್ನಿಯನು.
ರೇವತೀದೇವಿಯೂ ಬಲನ ದೇಹವ ತಬ್ಬಿ
ತತ್ಸಂಗದಾಹ್ಲಾದಶೀತಲವದಾಯ್ತೆನ್ನೆ
ಜ್ವಲಿಸುವಗ್ನಿಯ ಹೊಕ್ಕಳಿತ್ತಲಾ ದೇವಕೀ
ರೋಹಿಣೀದೇವಿಯರುಮುಗ್ರಸೇನನ ಜತೆಗೆ
ವಸುದೇವನೂ ಕೂಡಿ ಈ ಸುದ್ದಿಗಳ ಕೇಳಿ
ಬೆಂಕಿಯೊಳು ಹಾರಿದರು. ಬಳಿಕ ಅರ್ಜುನನವರ
ಪ್ರೇತಸಂಸ್ಕಾರಗಳ ಯಥಾವಿಧಿಯೊಳು ಗೈದು
ಹೊರಟ ವಜ್ರನ ಕೊಂಡು ಪೌರ ಜನರ ಸಮೇತ.
ಸಾಸಿರಗಳೆಣಿಕೆಯೊಳು ಕೃಷ್ಣಪತ್ನಿಯರೆಲ್ಲ
ದ್ವಾರಕೆಯನುಳಿದರೈ. ವಜ್ರ ಮತ್ತಾ ಜನರ
ಪಾಲಿಸುತಲರ್ಜುನಂ ಮೆಲ್ಲಮೆಲ್ಲನೆ ನಡೆದ.
ಮರ್ತ್ಯಲೋಕವ ತೊರೆಯೆ ಕೃಷ್ಣ, ಹೇ ಮೈತ್ರೇಯ,
ಸಭೆ ಸುಧರ್ಮವದಂತೆ ಪಾರಿಜಾತದ ತರುವು
ಸ್ವರ್ಗವನು ಸಾರಿದವು. ಆವ ದಿನದೊಳು ತಿರೆಯ
ತೊರೆದನೋ ಹರಿ ಅಂದೆ ಬಲಶಾಲಿ ಕಲಿ, ಕಾಲ–
ಕಾಯನಾಮಕನಿಳಿದ. ಇತ್ತಲಾ ಬರಿದಾದ

ದ್ವಾರಕೆಯ ಮುಳುಗಿಸಿತು ವಾರಿನಿಧಿ. ಆದೊಡಾ
ಸಾಗರವು ವಾಸುದೇವನ ಮನೆಯ ಮುಳುಗಿಸದು.
ನಿತ್ಯವಿರುತಿಹನಲ್ಲಿ ಭಗವಂತನದರಿಂದ
ಅದನತಿಕ್ರಮಿಸಿಬರೆ ಮುನ್ನೀರಿಗಿಂದಿಗೂ
ಅಳವಲ್ಲ. ಅದರಿನದು ಪಾಪವೆಲ್ಲವ ಕಳೆವ
ವಿಷ್ಣು ಸಂಪತ್‌ಖದ್ಧ ಪರಮ ಪುಣ್ಯಕ್ಷೇತ್ರ.
ಅದರ ದರ್ಶನದಿಂದ ಪಾಪಗಳು ಬಿಡುವುವೈ.
ಬಹುಧಾನ್ಯಧನವಿರುವ ಪಂಜನದ ದೇಶದೊಳು
ಆ ಜನವನೆಲ್ಲವನು ನೆಲೆಗೊಳಿಸಿದನು ಪಾರ್ಥ.
ಅಲ್ಲಿ ಆ ನಾಡಿನೊಳು, ಒಡೆಯರಿಲ್ಲದೆ ಪಾರ್ಥ-
ನೊಬ್ಬನೇ ಬಿಲ್ಲಾಳು ಕೊಂಡೊಯ್ವ ಹೆಂಗುಸರ
ಕಂಡು ಕಳ್ಳರ ಮನದಿ ಲೋಭವಂಕುರಿಸಿತು.
ಬಳಿಕ ಆ ಪಾಪಿಷ್ಠ, ಲೋಭದಿಂ ಬಗೆಗೆಟ್ಟ,
ದುರ್ಮದಾನ್ವಿತರಾದ ಗೋವಳರು ಕಲೆತಿಂತು
ಚಿಂತಿಸಿದರ್ “ ಇವನೊಬ್ಬ ಬಿಲ್ಲಾಳು ಅರ್ಜುನನು
ನಮ್ಮ ನಿರ್ಲಕ್ಷಿಸುತಲೀ ನಿರೀಶ್ವರರಾದ
ಸ್ತ್ರೀಜನವನೊಯ್ಯುತಿಹನಿದೊ ನೋಡಿ.
ನಿಮ್ಮ ತೋಳಿನ ಬಲಕೆ ಧಿಕ್ಕಾರ. ಭೀಷ್ಮನನು
ದ್ರೋಣನನು ಜಯದ್ರಥನನು ಕರ್ಣ ಮುಂತಾದ
ವರ ಕೊಂದು ಬಿಂಕದಿಂ ಬೀಗುತಿವನರಿಯನೀ
ಪಾಳೆಯದ ಜನಬಲವ. ಬಿಲ್ಲಹಿಡಿದಿರುವೀತ
ದೊಣ್ಣೆಗಳ ಹಿಡಿದಿರುವ ನಮ್ಮೆಲ್ಲರನು ಜರೆವ.
ನಿಮಗೇಕೆ ನಿಡುತೋಳು ? ” ಎನ್ನುತಾ ದಸ್ಯುಗಳು
ದೊಣ್ಣೆಗಳ ಬೀಸುತ್ತ ಹೆಂಟೆಗಳ ಬೀರುತ್ತ
ಸಾಸಿರದ ಗಡಣದೊಳು ಕವಿದು ಬಂದಟ್ಟಿದರು
ಆ ಹತೇಶ್ವರಜನವ. ಇಂತಾಗೆ ಗಾಂಡೀವಿ
ಗೋವಳರ ಗದರಿಸುತ ನಗುವಂತೆ ನುಡಿದನಿದ :

“ ಧರ್ಮದರಿವಿರದವರೆ, ಸಾವಾಸೆಯಿಲ್ಲದಿರೆ
ಹಿಂದಿರುಗಿ ” ಎನಲಿವನ ಮಾತ ಲೆಕ್ಕಿಸದವರು
ಧನಗಳನು ಕೊಂಡರ್ರೈ, ವಿಷ್ಣುವಿನ ಕೈಹಿಡಿದ
ಸ್ತ್ರೀಧನವನಂತೆಯೇ ಕೊಂಡರ್ರೈ, ಮೈತ್ರೇಯ.
ಆ ಬಳಿಕಲರ್ಜುನಂ ಕದನದೊಳು ಕಂದದಾ
ದಿವ್ಯಧನು ಗಾಂಡೀವವನು ಕರದಿ ಕೊಂಡಂ
ಹೆದೆಗೊಳಿಸಲುಜ್ಜುಗಿಸಿದಂ ವಿಫಲನಾದಂ
ಕಷ್ಟದಿಂ ಹೆದೆಯ ಕೊನೆಗೇರಿಸಿದನಾ ವೀರ
ಶಿಥಿಲವಾಯ್ತದು ಮತ್ತೆ. ಅಸ್ತ್ರಗಳ ನೆನೆದರೂ
ಬಾರವಾತನ ಮನಕೆ. ಮುಳಿಸಿಂದ ವೈರಿಗಳ
ಮೇಲೆಸೆದನಂಬುಗಳ. ಮೇಲ್ತೊಗಲನಷ್ಟನೇ
ಚುಚ್ಚಿದವು ಗಾಂಡೀವಿ ಬಿಡುತಿರುವ ಬಾಣಗಳು.
ಅಗ್ನಿಯಿತ್ತಕ್ಷಯದ ಶರಗಳೂ ಕ್ಷಯಿಸಿದವು
ಸಿರಿಗುಂದಿದರ್ಜುನಗೆ ಗೋವಳರ ಕದನದೊಳು.
ಆಗಳಾ ಕೌಂತೇಯ ಮನಗಂಡನಂದು, ತಾ
ಭೂಪಾಲರೆಲ್ಲರನು ಶರದಿಂದ ಕೊಂದ ಬಲ
ಕೃಷ್ಣನದೆ ಎಂದೆನುತ. ಅಂದು ಆ ಪಾಂಡುಸುತ
ನೋಡುತಿರುವಂತೆಯೇ ಗೋವಳರು ಸೆಳೆದೊಯ್ದ-
ರುತ್ತಮಪ್ರಮದೆಯರ. ಮಿಕ್ಕಜನವೋಡಿದರು
ಎಲ್ಲೆಂದರಲ್ಲಿಗೆ. ಶರಗಳೆಲ್ಲವು ತೀರೆ
ಬಿಲ್ಲಕೊನೆಯಿಂದಲೇ ಬಡಿದನು ಧನಂಜಯನು
ದಸ್ಯುಗಳ. ಇವನೇಟಗವರು ಸಹ ನಕ್ಕರ್ರೈ.
ಆ ಮ್ಲೇಚ್ಛರೀಪಾರ್ಥ ನೋನೋಡುತಿರುವಂತೆ
ವೃಷ್ಣ್ಯಂಧಕರ ಕುಲದ ಶ್ರೇಷ್ಠನಾರೀಜನವ
ನೆಲ್ಲರನು ಸೆಳೆದೊಯ್ದರೇವೇಳ್ವೆ ಮುನಿವರಾ.
ಬಳಿಕ ಬಲು ದುಃಖದಿಂ ಜಿಷ್ಣು ಕಷ್ಟವೆನುತ್ತ
ವಂಚಿಸಿದನೆನ್ನನಾ ಭಗವಂತನೆಂದತ್ತ.

“ ಅದೆ ಬಿಲ್ಲು ಅದೆ ಬಾಣ ಅದೆ ತೇರು ಅದೆ ಕುದುರೆ
ಎಲ್ಲವೊಂದೇಕ್ಷಣದೊಳಿಲ್ಲವೆಂದಾದುವು
ದಾನ ಅಶ್ರೋತ್ರಿಯನೊಳೆಂತೆಯೋ ಅಂತೆಯೇ.
ಅಹ, ದೈವ ಬಲಶಾಲಿ. ಮಹಿಮನವನಿಲ್ಲದಿರೆ
ಸಾಮರ್ಥ್ಯವಿಲ್ಲದೀ ನೀಚವರ್ಗಕೆ ಜಯವ
ಕೊಟ್ಟಿತಲ. ಅದೆ ತೋಳು, ಅದೆ ಮುಷ್ಟಿ, ಅದೆ ಬಾಣ
ನಾನುಮಾ ಅರ್ಜುನನೆ; ಆ ಪುಣ್ಯನಿಲ್ಲದೆಯೆ
ನಿಸ್ಸಾರವಾಯ್ತೆಲ್ಲ. ನನ್ನರ್ಜುನತ್ವವಿದು
ಭೀಮನದು ಭೀಮತ್ವ ಆತನಿಂದಲೆ ದಿಟ.
ರಥಿಕಾಗ್ರಗಣ್ಯನಾನಾತನಿಲ್ಲದೆ ಇಂದು
ಗೋವಳರಿಗೇ ಸೋತೆ !”

ಪರಾಶರ

ಇಂತು ನುಡಿದಾಡುತ್ತ
ಜಿಷ್ಣು ಇಂದ್ರಪ್ರಸ್ಥ ವರಪುರಿಗೆ ಗಮಿಸಿದನು.
ದೊರೆತನದೊಳಿರಿಸಿದನು ಯದುಬಾಲ ವಜ್ರನಂ.
ಆ ಬಳಿಕ ಫಲ್ಗುಣಂ ಕಾನನಾಶ್ರಯನಾದ
ವ್ಯಾಸಮುನಿಯನು ಕಂಡು, ಬಳಿಗೈದಿ
ಆ ಮಹಾಭಾಗನಿಗೆ ವಿನಯದೊಳಗೆರಗಿದನು.
ಪದಕೆ ಪ್ರಣಮಿಸುತಿರುವ ನರನ ಮುನಿ ನಿಟ್ಟಿಸುತ
ಎಂದನೀ ವಾಕ್ಯವನು : “ ಬಣ್ಣಗೆಟ್ಟಿಹೆಯೇಕೆ
ಈ ತೆರದೊಳಿಂದು ನೀ ? ಕುರಿಯ ಮುಂದೆಯ ಹಿಂದೆ
ನಡೆದೆಯಾ ? ಬ್ರಹ್ಮಹತ್ಯೆಯು ಗೈದುಬಂದೆಯಾ ?
ನಟ್ಟಾಸೆ ಕೆಟ್ಟಿರುವ ದುಃಖಿಯೊಲು ಕಳೆಯಿಲ್ಲ
ದಿರುವೆ ನೀ. ಯಾಚಿಸುವ ಸಾಂತಾನಿಕಾದಿಗಳ
ಬರಿಗೈಯೊಳಿಟ್ಟಿದೆಯ ? ಮುಟ್ಟಬಾರದ ಹೆಣ್ಣ
ಮುಟ್ಟಿ ನೀ ಕೆಟ್ಟಿಯಾ ? ಏಕೆ ಕಳೆಗುಂದಿರುವೆ ?

ಇಲ್ಲದಿರಲೊಬ್ಬನೇ ಮೃಷ್ಟವನು ತಿಂದೆಯಾ
ವಿಪ್ರರಿಗೆ ನೀಡದೆಯೆ? ಹೀನದೀನರ ಹಣವ
ಕದ್ದೆಯಾ ಅರ್ಜುನ? ವೊರದ ಗಾಳಿಗೆ ಮೈಯ
ನೊಡ್ಡಿದೆಯ ಹೇಳೆನಗೆ. ಕೆಡುದಿಟ್ಟ ತಾಕಿತೇ?
ಇಲ್ಲದಿರಲಿಂತೇಕೆ ಕಳೆಗೆಟ್ಟೆ? ಉಗುರುದಕ
ಹಾರಿತೇ? ಕೊಡದ ಜಲ ಮೈಮೇಲೆ ತುಳುಕಿತೇ?
ಏತರಿಂ ಮಂಕಾದೆ? ಹೀನರಿಂ ಸೋತೆಯಾ
ಕದನದೊಳು?"

ಪರಾಶರ

ಎನೆ, ಪಾರ್ಥ ನಿಡುಸುಯ್ದು "ಕೇಳಿರೈ
ಭಗವಂತ" ಎಂದು ಮೊದಲನು ಮಾಡಿ ವ್ಯಾಸರಿಗೆ
ತನಗಾದ ಪರಿಭವವ ನಡೆದಂತೆಯರುಹಿದಂ:

ಅರ್ಜುನ

ನಮ್ಮ ಬಲವಾರದೋ ತೇಜವಾರದೊ ವೀರ್ಯ
ಆ ಪರಾಕ್ರಮ ಸಿರಿಗಳಾಕಳೆಗಳಾರವೋ
ಅಂಥ ಆ ಹರಿ ನಮ್ಮನೆಲ್ಲರನು ತಾ ಬಿಟ್ಟು
ತೆರಳಿದನು. ನುಡಿವ ಮುನ್ನವೆ ನಗುವ ಆ ಮಹಿಮ
ನೀಶ್ವರನ ಕಳೆದುಕೊಂಡೆವು ನಾವು. ಅದರಿಂದ
ಹುಲ್ಲಿಗೂ ಹಗುರಾದೆವೈ ಮುನಿಯೆ—ಅಸ್ತ್ರಗಳ
ಬಾಣಗಳ ಅಂತೆನ್ನ ಗಾಂಡೀವಕೋದಂಡ-
ಸಾರವೀ ಮೂರ್ತಿಯೆನಲಿದ್ದ ಪುರುಷೋತ್ತಮನು
ಗತಿಸಿದನು. ಆವನೆಮ್ಮನು ನೋಡುತಿರುವಂದು
ಕಳೆ ಗೆಲವು ಐಶ್ವರ್ಯವೇಳಿಗೆಯು ನಮ್ಮ ತೊರೆ-
ಯುದಿದ್ದವೊ ಅಂಥ ಆ ಭಗವಂತ ಗೋವಿಂದ
ನಮ್ಮನಗಲುತ ನಡೆದ. ಭೀಷ್ಮನೂ ದ್ರೋಣನೂ

ಅಂಗರಾಜನದಂತೆ ದುರ‍್ಯೋಧನಾದಿಗಳು
ಯಾರ ಪ್ರಭಾವದಿಂ ನಿರ್ದಗ್ಧರಾದರೋ
ಅಂಥ ಕೃಷ್ಣನು ನಡೆದನೀ ಲೋಕವನು ತೊರೆದು.
ಈ ತಿರೆಯೆ ತೋರುವಳು ಹರೆಯ ಹೋದವಳಂತೆ
ಸಿರಿ ನೀಗಿ ಕಳೆಗುಂದಿ—ನನಗೊಬ್ಬಗಲ್ಲವೀ
ಚಕ್ರಹಸ್ತನ ವಿರಹ. ಆವನ ಹಸಾದದಿಂ
ಭೀಷ್ಮಾದಿಗಳು ನನ್ನ ಬೆಂಕಿಯೊಳು ಹುಳುಗಳಂ
ತಾದರೋ ಇಂದು ನಾನಂಥ ಕೃಷ್ಣನನುಳಿದು
ಸೋತೆನೀ ಗೊಲ್ಲರಿಗೆ. ಮೂರುಲೋಕಗಳಲ್ಲು
ಹೆಸರಾಂತ ಗಾಂಡೀವ ಹೋದಾತನಿಲ್ಲದೆಯೆ
ಗೊಲ್ಲರೆತ್ತಿದ ದೊಣ್ಣೆಗೀಡೆನಿಸದಾಯಿತ್ತು.
ನನ್ನ ಕಾಪಿನೊಳಿದ್ದ ಸಾಸಿರಗಳೆಣಿಕೆಯಾ
ಸ್ತ್ರೀಯರೆಲ್ಲರ ಕೊಂಡು ದಸ್ಯುಗಳು ಹೋದರೈ
ದೊಣ್ಣೆಗಳನೇ ಬೀಸಿ, ನನ್ನ ಕೈವಾರುತ್ತ.
ನಾನೆ ಕರೆತರುತಿದ್ದ ಕೃಷ್ಣನಂತಃಪುರವು
ಬಡಿಗೆಗಳ ಹಿಡಿದೆನ್ನ ಬಲವ ಧಿಕ್ಕರಿಸುವಾ
ದಸ್ಯುಗಳ ಪಾಲಾಯ್ತು. ಅಚ್ಚರಿಯಿದಲ್ಲವಿದು
ನಾನು ಮುಖಕೆಟ್ಟಹುದು. ಇದುವೆ ಅದ್ಭುತ, ನಾನು
ಬದುಕಿರುವೆನೆಂಬುದೇ. ನೀಚರವಮಾನದೀ
ಕೆಸರು ಮೆತ್ತಿಹ ನಾನು ನಿರ್ಲಜ್ಜ, ಓ ತಾತ.

ವ್ಯಾಸ

ಸಾಕು ನಿನಗೀ ಲಜ್ಜೆ. ಪಾರ್ಥ ಶೋಕಿಸದಿರು.
ಎಲ್ಲ ಜೀವಿಗಳಲ್ಲು ಈ ತೆರವೆ ಕಾಲಗತಿ.
ಭೂತಗಳ ಹುಟ್ಟಿಗೂ ಅಳವಿಗೂ ಕಾಲವೇ.
ಕಾಲಮೂಲವಿದೆಂದು ತಿಳಿದು ಸ್ಥೈರ್ಯವ ತಾಳು.
ನದ್ಯರ್ಣವಾಚಲಗಳೀ ಭೂಮಿಯೆಲ್ಲವೂ

ದೇವರೂ ಮನುಜರೂ ಪಶುಗಳೂ ತರುಗಳೂ
ಸರ್ಪ ಮುಂತಾದವೂ ಕಾಲದಿಂ ಮೂಡಿದುವು
ಕಾಲದೊಳೆ ಸಂಕ್ಷಯವನೈದುವುವು ಮರಳಿಯೂ.
ಕಾಲಾತ್ಮಕವಿದೆಲ್ಲ. ಇಂತರಿತು ಶಮವಾನು.
ಕಮಲಲೋಚನ ಕೃಷ್ಣ ಕಾಲರೂಪೀ ದೈವ.
ಕೃಷ್ಣಮಹಾತ್ಮ್ಯವಿದನೇತೆರದೊಳೊರೆದೆಯೋ
ಅಂತೆಯೇ ಸೈ ಅದುವು. ಆತನೀ ಧರೆಗಿಳಿದ
ಭಾರವಿಳಿಪೆಸಕಕ್ಕೆ. ಧರೆಯಂದು ಬಂದಳೈ
ಭಾರದಿಂ ಬಸವಳಿದು ದೇವಸಮಿತಿಗೆ ದೂರೆ.
ಆಕೆಗೋಸುಗ ಕಾಲರೂಪದ ಜನಾರ್ದನನು
ಇಳಿತಂದನಿಲ್ಲಿಗೆ. ನೆರವೇರಿತಾಕಾರ್ಯ.
ನಿಶ್ಶೇಷ ಹತರಾದರವನಿಪಾಲಕರೆಲ್ಲ ;
ವೃಷ್ಣ್ಯಂಧಕರ ಕುಲಗಳಂತೆಯೇ ತೀರಿದುವು.
ಇನ್ನೇನುಮುಳಿದಿಲ್ಲ ಗೈವೆಸಕವಾ ಪ್ರಭುಗೆ
ಈ ತಲದೊಳ್. ಅದರಿನಾ ಭಗವಂತ ನಡೆದನೈ
ಕೃತಕೃತ್ಯನಾಗುತ್ತ ತನ್ನಿಚ್ಛೆ ಬಂದಂತೆ.
ಸೃಷ್ಟಿಗೈವನು ಸೃಷ್ಟಿಕಾಲದೊಳಗಾ ದೇವ
ಸ್ಥಿತಿಯ ಕಾಲದಿ ಸ್ಥಿತಿಯನಾಗಿಸುವನಂತೆಯೇ.
ಈಗಳೀಪರಿಯೊಳಗೆ ಆತ ನಿರ್ಗಮಿಸಿದನೊ
ಅಂತೆ ಕಡೆಗಾಲದೊಳು ಕೊನೆಯುಗೊಳಿಸೆ ಸಮರ್ಥ.
ಅದಕಾರಣದಿಂದ, ಪಾರ್ಥ, ನಿನ್ನವಮತಿಗೆ
ಕೊರಗಲುಚಿತವಿದಲ್ಲ. ನೀನೊಬ್ಬನೇ ಭೀಷ್ಮ
ದ್ರೋಣ ಕರ್ಣಾದಿಗಳ ಕೊಂದೆಯೆನ್ನುವ ನುತಿಯು
ಕಾಲಕಾಲದೊಳಾಯ್ತು. ಅಂತೆ ಈ ಹೀನಾಭಿ-
ಭೂತಿಗೂ ಕಾಲವೇ ಕಾರಣವದಾಗದೇ ?
ತನ್ನ ಪ್ರಭಾವದಿಂದೆಂತವರ ಭಂಗಿಸಿದ

ಆ ವಿಷ್ಣು ಅಂತೆಯೇ ನಿನಗು ಭಂಗವ ತಂದ
ದಸ್ಯುಗಳ ದೆಸೆಯಿಂದ. ದೇವೇಶ ಆತನೀ
ದೇಹದೇಹವ ಹೊಕ್ಕು ಜಗದಿರವಿಗಾಧಾರ
ನಾಗಿಹನು. ಕಡೆಗೆಲ್ಲ ಜೀವಿಗಳ ಕೊಲುವನೈ
ಜಗದೊಡೆಯ. ಭಾಗ್ಯವುದಿಸಿರೆ ನಿನಗೆ ನೆರವಾದ-
ನಾ ಜನಾರ್ದನ. ಕೊನೆಗೆ ಭಾಗ್ಯವಳಿದರಿಗಳನು
ನಾಶಗೈದನು ಹರಿಯು. ಭೀಷ್ಮಮೊದಲಾದೆಲ್ಲ
ಕೌರವರ ನೀ ಕೊಂದೆಯೆಂದಾರು ನಂಬುವರು?
ಅಂತೆ ಗೋವಳರಿಂದ ಭಂಗವನು ಪಟ್ಟೆಯೆಂ
ದಾರಿದನು ನಂಬುವರು? ಹರಿಯ ಲೀಲೆಯೊಳಹುದು
ಸರ್ವ ಭೂತಗಳೆಸಕ: ಕೌರವರ ಗೆದ್ದುದೂ
ಗೊಲ್ಲರಿಗೆ ಸೋತುದೂ ಎಲ್ಲವಂತೆಯೆ ಪಾರ್ಥ.
ದಸ್ಯುಗಳು ಕೊಂಡರೆಂದಾವ ಹೆಂಗಳ ನೆನೆದು
ದುಃಖಗೊಂಡಿರುವೆಯೋ ಅವರ ವೃತ್ತಾಂತವನು
ಕೇಳೊರೆವೆನರ್ಜುನ. ಹಿಂದೆ ಅಷ್ಟಾವಕ್ರ
ನೆಂಬ ವಿಪ್ರೋತ್ತಮನು ಬಹುವರ್ಷವಾರ್ಷೇಯ
ವೇದಗಳ ಪಠಿಸುತ್ತ ಜಲವಾಸರತಿಯಾದ.
ಅಸುರಸಂಘವ ಸುರರು ಜಯಿಸಿದ ಮಹೋತ್ಸವವು
ಮೇರುತಲದೊಳು ಜರುಗೆ, ಅಲ್ಲಿ ನಡೆತರುವಮರ
ಕನ್ಯೆಯರು ಕಂಡರೀತನ. ತಿಲೋತ್ತಮೆ ರಂಭೆ
ಮೊದಲಾದ ನೂರು ಸಾಸಿರದೆಣಿಕೆ ತರುಣಿಯರು
ತಣಿಸಿ ಕೊಂಡಾಡಿದರು ಆ ಮಹಾತ್ಮನ, ಪಾರ್ಥ.
ಮುಳುಗಿ ಕತ್ತಿನವರೆಗೆ ನೀರಿನೊಳಗಿದ್ದವಗೆ,
ಜಟೆಯ ಧರಿಸಿದ ಮುನಿಗೆ, ವಿನಯದಿಂ ಬಾಗುತ್ತ
ಹಾಡಿ ಹೊಗಳುತ ಮಣಿದರಮರ ನಾರಿಯರೆಲ್ಲ.
ಅವ ತಿಳಿಮೆಗೊಂಡಂತೆ ತಣಿತಣಿಸಿದರು ಇವರು.

ಅಷ್ಟಾವಕ್ರ

ಓ ಮಹಾಭಾಗರೇ, ನಾ ಪ್ರಸನ್ನನು ನಿಮಗೆ
ನನ್ನಿಂದ ನೀವೇನ ಬಯಸುವಿರೊ ಅದನೆಲ್ಲ
ದುರ್ಲಭವದಾದರೂ ಈಯುವೆನು ವರಿಸಿರಾ.

ವ್ಯಾಸ

ಎನೆ ತಿಲೋತ್ತಮೆ ರಂಭೆ ಮೊದಲಾದ, ವೇದಗಳೆ
ಹೊಗಳಿರುವ ಅಪ್ಸರೆಯರಿಂತೆಂದರಾ ಮುನಿಗೆ:
"ನೀವೆಯೊಲಿದರೆ ನಮಗೆ ಕೊರೆಯಾವುದುಳಿದಿದೆ?"
ಎಂದು. ಮಿಕ್ಕವರವನ ಕುರಿತಿಂತು ಬೇಡಿದರು:
"ವಿಪ್ರೇಂದ್ರ, ನೀವೆಮಗೆ ಕರುಣಿಸಲು ಬಯಸುವೊಡೆ
ನಮಗೆ ಪುರುಷೋತ್ತಮನೆ ಪತಿಯಾಗಲಿಚ್ಛಿಪೆವು."

ವ್ಯಾಸ

"ಅಂತೆ ಆಗಲಿ" ಎಂದು ಮುನಿ ನೀರಿನಿಂದೆದ್ದ.
ಇಂತು ಮೇಲೆದ್ದವನ ಎಂಟು ಕಡೆ ಡೊಂಕಾದ
ವಿಕೃತರೂಪದ ಮೈಯ ಕಂಡರಾ ಸುದತಿಯರು.
ಆದ ಕಾಣುತವರ ನಗೆ ಎಷ್ಟು ತಡೆದರು ಮೀರಿ
ಹೊರಗುಕ್ಕಿ ತೋರಿತ್ತೈ. ಕಂಡು ಕೋಪಿಸುತವರ
ಶಪಿಸಿದನು ಆ ಮುನಿ. "ವಿಕೃತರೂಪದ ನನ್ನ
ಕಾಣುತೀ ಪರಿಯೊಳಗೆ ನಕ್ಕು ಅವಮತಿಸಿದರೊ
ಆದಕೆ ಶಾಪವನೀವೆ ನಿಮುಗಿದೋ. ನನ್ನನು-
ಗ್ರಹದಿಂದ ನೀವು ಪುರುಷೋತ್ತಮನ ವರಿಸುವಿರಿ;
ಕಡೆಯೊಳಗೆ ದಸ್ಯುಗಳ ಕೈಸೇರಿ ಕೆಡುವಿರಿ."

ವ್ಯಾಸ

ಮರಳಿ ಅವರಾ ಮುನಿಯ ಮನವ ತಿಳಿಯಾಗಿಸಲು,
"ದೇವೇಂದ್ರಲೋಕವನು ಮತ್ತೆ ಸಾರಿರಿ" ಎಂದ,

ಇಂತು ಸುರಸುಂದರಿಯರಾ ಮುನಿಯ ವರದಿಂದ
ಚಕ್ರಧರನನು ವರಿಸಿ ಬಳಿಕ ಆ ಶಾಪದಿಂ
ದಸ್ಯುಗಳ ಪಾಲಾದರ್. ಅದರಿನೆಲೆ ಪಾಂಡವನೆ,
ನೀನದಕೆ ಸ್ವಲ್ಪವೂ ಶೋಕಿಸಲು ತರವಲ್ಲ.
ಆ ಅಖಿಲನಾಥನೇ ಇದನೆಲ್ಲ ಮುಗಿಸಿಹನು.
ನಿಮಗು ಮುಗಿವಿನ ವೇಳೆಯೊದಗಿಹುದು. ಅದರಿಂದ
ನಿನ್ನ ಬಲ ತೇಜಗಳು ವೀರ್ಯ ಮಾಹಾತ್ಮ್ಯಗಳು
ಕಡೆಗೊಂಡವೈ, ಪಾರ್ಥ. ಹುಟ್ಟಿದಗೆ ಸಾವು ದಿಟ.
ಏರಿಕೆಯೊಳಿರುವವಗೆ ಜಾರಿಕೆಯೆ ನಿಯತವೈ.
ಒಡಗೂಡುವಿಕೆಗಂತ್ಯ ಬೇರೆಯಾಗೊಡೆಯುವುದೆ.
ಕೂಡಿಟ್ಟುದೆಲ್ಲವೂ ಕ್ಷಯದೊಳಗೆ ಮುಗಿವುದು.
ಈ ತಿಳಿವ ತಾಳುತ್ತ ಶೋಕಗೊಳ್ಳರು ಬುಧರು;
ನಲವನೂ ಕೊಳ್ಳರು. ಇಂಥವರ ಕಾಣುತ್ತ
ತಮ್ಮೆಸಕವೆಲ್ಲವನು ತಮ್ಮ ಹಿಡಿತದೊಳಿಟ್ಟು
ಅವರಂತೆ ತಾವಹರು ಮಿಕ್ಕ ಬುಧರಂತೆಯೇ.
ಆದಕಾರಣ, ನರಶ್ರೇಷ್ಠ, ನೀನೊಡಹುಟ್ಟು-
ಗಳ ಕೂಡುತಿದನೆಲ್ಲ ತಿಳಿಯುತ್ತ ತೊರೆಯುವುದು
ದೊರೆತನದ ತಂತ್ರಗಳ. ತೆರಳುವುದರಣ್ಯಕ್ಕೆ.
ಹೊರಡು ನೀ ಧರ್ಮಜನ ಸನಿಯಕ್ಕೆ. ನನ್ನ ಈ
ಮಾತುಗಳನಾತಂಗೆ ತಿಳಿಸುತ್ತ ನಾಳೆಯೇ
ಒಡಹುಟ್ಟುಗಳ ಜತೆಗೆ ಹೊರಡುವಂತೆಸಗು ನೀ.

ಪರಾಶರ

ಇಂತು ನುಡಿಯಲು ವ್ಯಾಸನಿತ್ತಲರ್ಜುನ ಬಂದು
ಪಾರ್ಥರಿಗು ಯಮಳರಿಗು ಕಂಡುಪಟ್ಟುದನೆಲ್ಲ
ವರುಹಿದನು ಬಿಡದಂತೆ. ಆತನೊರೆದಾ ವ್ಯಾಸ
ವಾಕ್ಯಗಳನಾಲಿಸುತ ರಾಜ್ಯದಿ ಪರೀಕ್ಷಿತನ

ನೆಲೆಗೊಳಿಸಿ ವನದತ್ತ ನಡೆದರಾ ಪಾಂಡವರು.

ಇಂತು ಬಿತ್ತರದಿಂದ ನಿನಗೊರೆದೆ ಮೈತ್ರೇಯ
ಯದುವಂಶದೊಳು ಹುಟ್ಟಿ ವಾಸುದೇವನು ಗೈದ
ಎಸಕಗಳನೆಲ್ಲವನು. ಕೃಷ್ಣನೀ ಚರಿತೆಯನು
ಸದಾ ಕೇಳುವ ಜನರಿಗಹುದು ಪಾಪವಿಮುಕ್ತಿ ೨೫೦
ವಿಷ್ಣುಲೋಕಾವಾಪ್ತಿ.

ಸ್ವಸ್ತಿ.

ಶ್ರೀ ವಿಷ್ಣುಪುರಾಣದ ಪಂಚಮಾಂಶದ ಮೂವತ್ತೇಳು ಮತ್ತು
ಮೂವತ್ತೆಂಟನೆಯ ಅಧ್ಯಾಯಗಳ ಅನುವಾದ.

ಪಾಂಡವಪ್ರಸ್ಥಾನ

ಒಂದನೆಯ ಅಧ್ಯಾಯ

ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್.

ಜನಮೇಜಯ

ಇಂತು ವೃಷ್ಣ್ಯಂಧಕರ ಕುಲದೊಳಗಾದ ಮೌಸಲ-
ಯುದ್ಧವನು ತಾವಾಲಿಸುತ, ಕೃಷ್ಣನುಂ
ದಿವಕಾದ ಪರಿಯನು, ಪಾಂಡವರೇನಗೈದರು ?

ವೈಶಂಪಾಯನ

ಇಂತು ಕೌರವರಾಜನಾಲಿಸಿ ವೃಷ್ಣಿಗಳ ಹಿರಿ-
ಕಾಳೆಗದ ಸುದ್ದಿಯ, ಪ್ರಸ್ಥಾನದೊಳು ಮನಗೈದು
ಅರ್ಜುನಗೊರೆದ : ಎಲೆ ಮಹಾಮತಿ ಕಾಲವಡುವುದು
ಭೂತಗಳನೆಲ್ಲವ, ಕಾಲಪಾಶವ ಬಲ್ಲೆನಾ,
ನೀನುಮದ ಕಾಣತಕ್ಕದು. ಇಂತೊರೆಯಲದನಾ-
ಕೌಂತೇಯ " ಕಾಲಂ ಕಾಲಂ " ಎಂದೆನುತ ಕೊಂಡಂ
ಧೀಮಂತನಗ್ರಜನೊರೆದ ನುಡಿಯಂ. ಅರ್ಜುನನ
ಮತವರಿತು ಭೀಮನುಂ ಯಮಳರುಮೆಂತೊರೆದನಾ—
ಸವ್ಯಸಾಚಿ ಅದನಂತೆಯೆ ಕೊಂಡರ್. ಆ ಬಳಿಕ
ಧರ್ಮಕೆ ಬಯಸಿ ಹೊರಡಲನುವಾಗಿ ಯುಧಿಷ್ಠಿರಂ
ಯುಯುತ್ಸುವಂ ಕರೆಸಿ ರಾಜ್ಯವೆಲ್ಲವ ಕೊಟ್ಟನಾ
ವೈಶ್ಯಾಸುತಗೆ. ತನ್ನ ರಾಜ್ಯದೊಳು ಪರೀಕ್ಷಿತಂ-

ಗಭಿಷೇಚಿಸುತ ಪಾಂಡವಾಗ್ರಜ ರಾಜನೊರೆದನು
ಕಡುದುಃಖದೊಳು ಸುಭದ್ರೆಗೆ: ನಿನ್ನ ಮೊಮ್ಮಗನಿನ್ನು
ಕುರುಕುಲದರಸು; ಯಾದವರೊಳಳಿಯದೆಯುಳಿದಿರುವ
ವಜ್ರನಂ ನಾವರಸುತನದೊಳಗಿರಿಸಿಯಾಯಿತು.
ಇಲ್ಲಿ ಈ ಹಾಸ್ತಿನಪುರದಿ ಪರೀಕ್ಷಿತಂ, ಶಕ್ರ-
ಪ್ರಸ್ಥದೊಳು ವಜ್ರಂ—ನೀನಿವರೀರ್ವರಂ ಪೊರೆವುದು.
ಅಧರ್ಮದಿ ಮನವಿಡಲಾಗದು. ಇಂತೊರೆದು ಆ
ಧರ್ಮರಾಜಂ ಮಹಾಮತಿ ವಾಸುದೇವಂಗೆ
ಮುಪ್ಪಿನ ಮಾತುಲಗೆ ರಾಮಾದಿ ಬಂಧುವರ್ಗಕೆ
ತಮ್ಮದಿರೊಡನೆ ಚೆಚ್ಚರದೊಳುದಕ ಕ್ರಿಯೆಗಳಂ
ಸಲಿಸಿ, ವಿಧಿವತ್ತಾಗಿ ಗೈದಂ ಶ್ರಾದ್ಧಂಗಳಂ
ಸರ್ವರಿಗು. ಬಳಿಕ ಶ್ರೀಹರಿಯನುದ್ದೇಶಿಸುತ
ಶ್ರದ್ಧೆಯಿಂ ದ್ವೈಪಾಯನನಂ ನಾರದನಂ
ತಪೋಧನ ಮಾರ್ಕಂಡೇಯನಂ ಭಾರದ್ವಾಜ
ಯಾಜ್ಞವಲ್ಕರಂ ಸ್ವಾದುಭೋಜನದೊಳಾರಾಧಿಸುತ
ಶಾರ್ಙ್ಗಚಾಪನಂ ಕೀರ್ತಿಸುತ ರತ್ನಂಗಳಂ
ವಸ್ತ್ರಂಗಳಂ ಗ್ರಾಮಂಗಳಂ ಅಶ್ವಂಗಳಂ
ರಥಂಗಳಂ ಹೆಂಗಳಂ ನೂರೆಣಿಕೆಯೊಳು ಸಾಸಿರ
ದೆಣಿಕೆಯೊಳು ಕೊಟ್ಟಂ ದಾನಗಳ ದ್ವಿಜಮುಖ್ಯರಿಗೆ.
ಬಳಿಕ ಕೃಪನಂ ಪೌರಪುರಸ್ಕೃತನಂ ಪೂಜಿಸುತ
ಆ ಗುರುವಿಗಿತ್ತಂ ಶಿಷ್ಯನಂ ಪರೀಕ್ಷಿತನಂ.
ತದನಂತರ ಯುಧಿಷ್ಠಿರಂ ಸರ್ವಪ್ರಜೆಗಳಂ
ಕರೆಸುತಲವರಿಗರುಹಿದನು ತಾನೆಣಿಸಿರುವುದನು.
ನಾಡೂರಜನರಾ ಮಾತಿಗುಮ್ಮಳಿಸಿದರಭಿ-
ನಂದಿಸದೆ. ಬಳಕಿಂತೆಸಗದಿರಿಮೆಂದೆಯೊರೆದ-
ರವರಾ ನರಾಧಿಪಗೆ. ಆದೊಡಾ ಕಾಲಧರ್ಮವ
ನರಿತವಂ ಅಂತೆಸಗಲೊಪ್ಪಂ; ಹೊರಹೊರಡಲನು-

ವಾದನೊಪ್ಪಿಸುತ ನಾಡೂರ ಜನವಂ ಧರ್ಮಾತ್ಮಂ.
ತಮ್ಮದಿರಂತೆಯಣಿಯಾದರಾಗಳ್. ಆ ಬಳಿಕ
ಕುರುಕುಲದರಸು ಧರ್ಮಪುತ್ರಂ ಯುಧಿಷ್ಠಿರಂ
ತನ್ನಂಗಂಗಳಿಂದೊಡವೆಗಳ ಕಳೆದಿರಿಸಿದಂ,
ನಾರುಡೆಯನುಟ್ಟಂ. ಭೀಮಸೇನಾರ್ಜುನ ನಕುಲ
ಸಹದೇವರುಂ ಜಸವೆತ್ತ ದ್ರುಪದಸುತೆಯುಂ
ನಾರುಬಟ್ಟೆಯ ತಳೆದರಂತೆಯೆ, ಓ ನರಾಧಿಪ.
ಕಡೆಯಿಷ್ಟಿಯಂ ವಿಧಿವತ್ತಾಗಿ ನೆರವೇರಿಸುತ
ನರಪುಂಗವರು ಹೊರಟರಗ್ನಿಗಳ ಜಲದೊಳು ಸಲಿಸಿ.
ಆಗಳಾ ನರೋತ್ತಮರ, ಹಿಂದೆಂತು ಜೂಜೊಳು ಸೋಲ-
ಲೇಪರಿಯಿದ್ದರಾತೆರವಿಹರ ಕಂಡತ್ತರೈ
ಹೆಂಗಳೆಲ್ಲರು. ಅಂತೆಯೆ ನಲಿದರೆಲ್ಲರು ಅಣ್ಣ-
ತಮ್ಮದಿರೈವರುಂ ಹೊರಟುದಕೆ ಯುಧಿಷ್ಠಿರನ
ಮನವರಿತು ವೃಷ್ಣಿಕ್ಷಯವನಾರೈದು ಅಗ್ರಜ
ನನುಜರೈವರುಮಾರನೆಯ ದ್ರುಪದಸುತೆಯುಂ
ಏಳನೆಯ ನಾಯುಂ. ತನ್ನೆಣಿಸಿತಾನೇಳನೆಯವಂ
ರಾಜ ಹಾಸ್ತಿನಪುರವ ಹಿಂದಕೆಯುಳಿಸಿ ಹೊರಟಂ
ದೂರದವರೆಗೆ ಹಿಂಬಾಲಿಸುತ ಬರೆ ಪುರಜನಂ
ಅಂತಃಪುರಜನಂ. ಹಿಂದಿರುಗಿಮೆಂದೊರೆಯಲರಿ
ದಾರ್ಗುಮವರಿಗೆ. ತಾವೆ ಹಿಂದಿರುಗಿದರು ಬಳಿಕಾ
ಕೃಪನೆ ಮೊದಲಾದೂರಜನ ಯುಯುತ್ಸುವ ಬಳಸಿ.
ಗಂಗೆಯ ಹೊಕ್ಕಳೈ ಸರ್ಪರಾಜನ ಕುವರಿ ಉಲೂಪಿ.
ನಡದಳೈ ಮಣಿಪುರಕೆ ಚಿತ್ರಾಂಗದೆ. ಪುತ್ರನಂ
ಪರೀಕ್ಷಿತನಂ ಬಳಸಿ ನಿಂತರು ಮಿಕ್ಕ ಮಾತೆಯರು.
ಆ ಬಳಿಕ ಪಾಂಡುತನುಜಾತರ್ ಮಹಾತ್ಮರ್
ಯಶಸ್ವಿನಿ ದ್ರೌಪದಿಯುಮುಪವಾಸದೊಳು ಮೂಡಣ
ಮೊಗಕೆ ನಡೆದರು. ಯೋಗಯುಕ್ತರ್ ತ್ಯಾಗಧರ್ಮಿಗಳ್

ಆ ಮಹಾತ್ಮರ್ ಪಯಣಿಸಿದರ್ರೈ ನಾನಾಡುಗಳ
ಹೊಳೆಕಡಲುಗಳ ಹಾಯುತ್ತ ; ಮುಂಗಡೆ ಯುಧಿಷ್ಠಿರಂ
ಬಳಿಕ ಭೀಮಂ ಬಳಿಕರ್ಜುನಂ ಬೆಂಗಡೆ ಯಮಳ
ರೆಲ್ಲರ ಹಿಂದುಗಡೆ ಆ ಶ್ಯಾಮೆ ವರಾರೋಹೆ
ಪದ್ಮದಳಾಕ್ಷಿ ನಾರೀಶ್ರೇಷ್ಠೆ ದ್ರೌಪದಿ ನಡೆದಳ್
ಎಲೆಯರಸೆ. ನಾಯೊಂದು ನಡೆಯಿತು ಅನುಸರಿಸಿ
ಬನದೊಳಗೆ ತೆರಳುತ್ತಿಹರ. ನಡೆದಿಂತು ಕೆಂಪಿನ
ಕಡಲ ತಡಿಗೈದಿದರು ವೀರರು. ದಿವ್ಯಧನುವಂ
ಗಾಂಡೀವವಂ ಕೊರೆಯಾಗದಿಹ ಬತ್ತಳಿಕೆಯಂ
ಚೆಲ್ಲಗೊಡದಿದ್ದನು ಧನಂಜಯಂ ರತ್ನದ
ಲೋಭದಿಂ. ಆಗಲ್ಲಿ ಕಂಡರು ಮಲೆಯಂದದೊಳು
ಬಳಿಯಂ ಕಟ್ಟಿ ಪುರುಷಾಕೃತಿಯ ಮೆರೆವಗ್ನಿಯಂ.
ಆಗಳಾ ಸಪ್ತಾರ್ಚಿದೇವಂ ಪಾಂಡುಸುತರಂ
ಕುರಿತೀ ತೆರದೊಳೊರೆದಂ : “ ಓವೋ ಪಾಂಡವರೆ
ವೀರರೇ, ನಾ ಪಾವಕಂ. ಓ ಯುಧಿಷ್ಠಿರ, ಭೀಮ
ನೀಳ್ದೋಳವನೆ, ಓ ಪರಂತಪ ಫಲ್ಗುನಾ, ಓ
ಅಶ್ವಿನೀಸುತರೆ ಕುಮಾರರೆ, ವೀರರೆ ಆಲಿಸಿರಿ
ನಾನೊರೆವುದನು. ನಾನಗ್ನಿ ; ನಾನೇ ಸುಟ್ಟವಂ
ಖಾಂಡವವನವ, ಕುರುವರರೆ, ಅರ್ಜುನನ ಮತ್ತಾ
ನಾರಾಯಣನ ಮಹಿಮೆಯಿಂ. ನಿಮ್ಮಣ್ಣ ತಮ್ಮಂ
ಫಲ್ಗುಣ ಪರಮಾಯುಧವನೀ ಗಾಂಡೀವವಂ
ತೊರೆದುಬಿಸುಟೀ ಬನದಿ ನಡೆಯಲಿ. ಇನ್ನೇಕಜ್ಜ
ವಿದರಿಂ ? ಚಕ್ರರತ್ನಂ ಕೃಷ್ಣನ ಬಳಿಯೊಳಿದ್ದುದು
ನಡೆದುದೈ ಆದರೆಡೆಗೆ ; ಕಾಲದೊಳಳವಡುವುದಾ
ಕೈಯೊಳದು. ಶ್ರೇಷ್ಠಧನುವೀ ಗಾಂಡೀವವಂ ನಾಂ
ತಂದೆ ವರುಣನೆಡೆಯಿಂ ಪಾರ್ಥನಿಗೆಂದೆ. ವರುಣನಿ
ಗೀವುದಿದ ಮರಳಿಯುಂ.” ಎನ್ನಲಾ ಸಹೋದರರು

ಪಾರ್ಥನಿಗಂತೆಸಗವೇಳ್ದರು. ಆತನಾ ಬಿಲ್ಲಂ
ಅಂತೆ ಅಕ್ಷಯ್ಯೇಷುನಿಧಿಯಂ ಜಲದಿ ಬಿಸುಟಂ.
ಬಳಿಕಗ್ನಿಯಲ್ಲೆ ಮರೆಗೊಂಡಂ. ತರುವಾಯದೊಳು
ತೆಂಕಣಮೊಗಕೆ ನಡೆದರಾ ಪಾಂಡವರು ವೀರರು
ಉಪ್ಪಿನಕಡಲ ಬಡಗಣತಡಿಯ ಬಳಿಯಂ ಪಿಡಿದು
ದಕ್ಷಿಣ ಪಶ್ಚಿಮಕೆ ನಡೆದಾ ಬಳಿಕ ಪಶ್ಚಿಮಕೆ
ತಿರುಗುತ ಕಂಡರವರಾ ದ್ವಾರಕೆಯ ಸಾಗರದೊಳಗೆ
ಮುಳುಗಿಹುದ. ಮರಳಿದರವರು ಮರಳಿಯುಮಂತೆಯೇ
ಬಡಗಣದೆಸೆಗೆ ಧಾರಿಣಿಯ ಬಲಬರುವಂದದೊಳು,
ಆ ಯೋಗಧರ್ಮವ ಹಿಡಿದ ಭರತಸತ್ತಮರು.

ಇಂತು ಮಹಾಭಾರತದ ಮಹಾಪ್ರಸ್ಥಾನಿಕ ಪರ್ವದಲ್ಲಿ ಮೊದಲನೆಯ ಅಧ್ಯಾಯ.

ಎರಡನೆಯ ಅಧ್ಯಾಯ

ಇಂತು ಬಡಗಣದೆಸೆಯನಡರಿದ ಯೋಗವಂತ ಜಿ-
ತೇಂದ್ರಿಯರು ಕಂಡರಾಯೆಡೆ ಮಾಮಲೆಯ ಹಿಮವಂತವನು.
ಅದನು ದಾಟಲು ವಾಲುಕಾರ್ಣವ ಕಣ್ಣಿಗಾದುದು.
ಕಂಡರದರೆಡೆ ಕೋಡುಮಲೆಗಳ ಕೋಡು ತಾನೆಂ-
ದೆಸೆವ ಪೆರ್ಮಲೆ ಮೇರುವನು. ನೆಲೆನಿಂತು ಯೋಗದಿ
ಬೇಗನೆ ನಡೆವವರೊಳಾ ಯಾಜ್ಞಸೇನಿಯು ಬಿದ್ದಳೈ
ಯೋಗತಪ್ಪಿ ಮಹೀತಲದಿ. ಅಂತಾ ತೆರದೊಳಗೆ
ಬಿದ್ದಾಕೆಯನು ನೋಡುತ ಮಹಾಬಲಂ ಭೀಮಸೇನಂ
ಧರ್ಮರಾಜನಿಗೊರೆದಂ : "ಅಣ್ಣಾ ಯಾಜ್ಞಸೇನಿಯ
ನೋಡದೋ—ರಾಜಪುತ್ರಿಯಿನಾದುದಿಲ್ಲ
ಧರ್ಮವಲ್ಲದದಾವುದೊಂದೂ. ಬಿದ್ದಳೇತಕೆ
ನೆಲಕೆ ಕೃಷ್ಣೆ ? ಕಾರಣವನರುಹೈ ಪರಂತಪ."

ಯುಧಿಷ್ಠಿರ

ಈಕೆಗಿತ್ತತಿಪಕ್ಷಪಾತಂ ಫಲ್ಗುಣನೊಳಗೆ,
ಪುರುಷಸತ್ತಮ. ಇಂದುಂಬಳಾ ಫಲವನೀಕೆ.

ವೈಶಂಪಾಯನ

ಇಂತೊರೆದು ತಾನವಳ ನೋಡದೆ ನಡೆದನಾತಂ
ಧೀಮಂತಂ ಧರ್ಮಾತ್ಮಂ ಪುರುಷರ್ಷಭಂ
ಭಾರತವರಂ. ಆ ಬಳಿಕ ಬಿದ್ದಂ ತಿರೆತಳದಿ
ವಿದ್ವಾಂಸ ಸಹದೇವ. ಅವ ಬಿದ್ದುದನು ಕಾಣುತ
ರಾಜಗಿಂತೆಂದಂ ಭೀಮಸೇನಂ—"ಆವಾತಂ
ಅನಹಂಕೃತಿಯೊಳೆಮಗೆಲ್ಲರಿಗು ಶುಶ್ರೂಷೆಯಂ
ಗೈದನೊ ಅಂಥ ಈ ಮಾದ್ರೀಸುತಂ ಭೂತಲಕೆ
ಕುಸಿದನದೇಕೆ?"

ಯುಧಿಷ್ಠಿರ

ತನ್ನಂತೆ ಬಲ್ಲವರಿಲ್ಲವೆಂ
ದೆಣಿಸಿರ್ದನಿವ ಆದೋಷದಿಂ ನೆಲಕುರುಳಿದಂ.

ವೈಶಂಪಾಯನ

ಇಂತೊರೆದು ಆತನ ತೊರೆದು ಸಹದೇವನಂ
ಕುಂತೀಸುತಂ ಯುಧಿಷ್ಠಿರಂ ತಮ್ಮದಿರೊಡನೆಯುಂ
ನಾಯೊಡನೆಯುಂ ನಡೆದಂ. ಕೃಷ್ಣೆಯುಂ ಪಾಂಡುಸುತ
ಸಹದೇವನುಂ ಬಿದ್ದುದನು ಕಂಡಾ ಬಂಧುಪ್ರಿಯುಂ
ಶೂರನಕುಲಂ ತೊಟ್ಟನೆ ಬಿದ್ದನಿಳೆಗಾರ್ತಿಯೊಳು.
ಚಾರುದರ್ಶನ ವೀರನಕುಲಂ ಬುವಿಗೆ ಬಿದ್ದುದ
ಕಂಡು ಭೀಮಂ ಮರಳಿರಾಜನಿಗೊರೆದನೀತೆರ
"ಈತನಕ್ಷತಧರ್ಮನನುಜಂ ನುಡಿಯ ಮೀರದವಂ

ರೂಪದೊಳು ಸಮರಿಲ್ಲದವನೀಲೋಕದೊಳು ;
ಅಂಥ ನಕುಲಂ ನೆಲಕೆ ಬಿದ್ದನು." ಇಂತು ನುಡಿವಾ
ಭೀಮಸೇನಂಗೆ ಮರುನುಡಿದನಾ ಧರ್ಮಾತ್ಮಂ
ಯುಧಿಷ್ಠಿರಂ ಮತಿಮಂತರೊಳಗತ್ಯುತ್ತಮಂ
ನಕುಲನ ಬಗೆಗೆ.
" ರೂಪದೊಳು ತನ್ನ ಸಮರಿನ್ನಿಲ್ಲ
ವೆಂದೆಯೆ ಬಗೆದವನಿವ. ತಾನೊಬ್ಬನೇ ಮಿಗಿಲೆಂಬೆಣಿಕೆ
ಮನದೊಳಿದ್ದಿತು—ಬಿದ್ದನದಕೀ ನಕುಲ—ನಡೆ ನೀ
ವೃಕೋದರ, ಆವಗಾವುದು ವಿಹಿತವೋ ಅದ
ನವನು ಪಡೆದೇ ತೀರತಕ್ಕದು."
ಈ ತೆರವವರು
ಬಿದ್ದುದ ಕಂಡು ಶೋಕದಿಂ ಸಂತಪ್ತನಾಗುತ
ಪಾಂಡುಪುತ್ರಂ ಪರವೀರಹಂ ಶ್ವೇತವಾಹನ
ನಿಳೆಗೆ ಬಿದ್ದಂ. ಈ ತೆರದಿ ಪುರುಷವ್ಯಾಘ್ರ
ಶಕ್ರತೇಜಂ ಧುರಾಧರ್ಷಂ ಸಾವೊಲು ಬಿದ್ದ
ಪರಿಯನು ಕಂಡು ಭೀಮಸೇನಂ ರಾಜನಿಗೊರೆದ :
" ಮನ ಬಂದಂತೆ ನಡೆವವರೊಳಂ ಕಾಣೆನೀತಂ
ಅನೃತದಿ ನಡೆದ ತೆರವಂ.. ಏತರ ವಿಕಾರವಿದು
ಬೀಳಿಸಿತು ನೆಲಕಿಂತೀತನಂ ?"

ಯುಧಿಷ್ಠಿರ

ಒಂದೆ ಹಗಲೊಳು
ಸುಡುವೆ ನಾನೀಶತ್ರುಗಳನೆಂದೊರೆದನೀತಂ
ಆದೊಡಾ ತೆರಗೈಯಲಿಲ್ಲೀ ಶೂರಮಾನಿ ;
ಅದಕೆ ಫಲ್ಗುಣ ಬಿದ್ದ. ಅಲ್ಲದವಮಾನಿಸುತ
ಲಿದ್ದನಿವ ಬಿಲ್ಗಾರರೆಲ್ಲರ. ಅದರಿಂದಿಂತು.
ಮಹಿಮೆಗೆಳಸುವರಾರುಮೀತೆರಮೆಸಗಲಾಗದು.

ವೈಶಂಪಾಯನ

ಮುನ್ನಡೆದನಿಂತೊರೆದು ರಾಜಂ. ಬಳಿಕ ಭೀಮನೆ
ಬಿದ್ದ. ಬೀಳುತ ನುಡಿದನವನೀ ತೆರದಿ ಭಯದೊಳು
ಧರ್ಮರಾಜ ಯುಧಿಷ್ಠಿರಗೆ: "ಓವೋ ನೋನೋಡೆನ್ನ,
ರಾಜನೆ, ಬಿದ್ದೆನಿದೋ ನಾ—ಪತನಕಾರಣವೇನು?
ಅರಿತಿದ್ದೊಡದ ನೀನೆನಗೆ ಪೇಳ್ಳೈ."

ಯುಧಿಷ್ಠಿರ

ತಿಂದೆ ನೀ
ಮಿತಿಯ ಮೀರುತ. ಮಿಕ್ಕವರ ಲೆಕ್ಕಿಸದೆ ಗಳಹುವೆ
ಮೈಬಲವ ನಿನ್ನದನು, ಪಾರ್ಥ. ಅದರಿಂ ಬಿದ್ದೆ
ಈ ತೆರವಿಳೆಗೆ.

ವೈಶಂಪಾಯನ

ಇಂತು ನುಡಿದಾತನ ನೋಡದೆಯೆ
ಮುನ್ನಡೆದನಾ ಮಹಾಬಾಹು. ಹಿಂಬಾಲಿಸಿತು
ನಾಯೊಂದೆ—ನಾ ನಿನಗೆ ಬಲುಸಲವೊರೆದ ನಾಯಿ.

ಇಂತು ಮಹಾಪ್ರಸ್ಥಾನಿಕ ಪರ್ವದಲ್ಲಿ ಎರಡನೆಯ ಅಧ್ಯಾಯವು

ಮೂರನೆಯ ಅಧ್ಯಾಯ

ವೈಶಂಪಾಯನ

ಆ ಬಳಿಕ ಶಕ್ರಂ ತೇರದನಿಯಿಂ ತಿರೆಬಾನ
ವೊಳಗಿಸುತ ಬಳಿಗೈದಿ ಆತನನೇರೆ ಕರೆದಂ.
ತನ್ನ ತಮ್ಮದಿರೆಲ್ಲ ಬಿದ್ದುದ ಕಂಡು ಶೋಕದಿ
ಸಂತಪಿಸುತಾ ಧರ್ಮರಾಜಂ ಯುಧಿಷ್ಠಿರಂ
ಸಹಸ್ರಾಕ್ಷಂಗೀ ಮಾತನೊರೆದಂ—"ಐತರಲಿ

ನನ್ನ ಜತೆಗಾಯೆಡೆ ಬಿದ್ದ ತಮ್ಮದಿರೆಲ್ಲರುಂ.
ಬರಲೊಲ್ಲೆ ಸ್ವರ್ಗಕೆ ಸುರೇಶ್ವರ ತಮ್ಮದಿರುಳಿದು.
ಸುಕುಮಾರಿ ಸುಖಾರ್ಹೆ ರಾಜಪುತ್ರಿಯವಳುಂ
ಬರಲಿ ಜತೆಗೆ. ನೀನಿದಕನುಮತಿಸು ಪುರಂದರ."

ಶಕ್ರ

ಸ್ವರ್ಗದಿ ಕಾಂಬೆಯೈ ತಮ್ಮದಿರ, ಕೃಷ್ಣೆಯ ಕೂಡಿ
ಯಿರುವಂಥವರ. ಈ ಮುನ್ನವೇ ತ್ರಿದಶಾಲಯಕೆ
ಸಂದವರ, ಭರತರ್ಷಭನೆ, ನೀ; ದುಃಖಿಸಬೇಡ.
ಮಾನುಷ್ಯದೇಹವಂ ತಿರೆಗುಳಿಸಿ ಗತಿಸಿಹರವರು;
ಮೈಗೂಡಿಯೇ ಸ್ವರ್ಗಕೆ ಸಲುವೆ ಸಂದೆಗವಿಲ್ಲ.

ಯುಧಿಷ್ಠಿರ

ಈ ನಾಯಿ ನನ್ನನೆ ನೆಚ್ಚಿ ಎಡಬಿಡದಿಹುದು ನಿತ್ಯವು.
ನನ್ನ ಜತೆಗಿದು ಬರಲಿ. ಮರುಕದಿ ನೆಲೆಯನಾಂತಿಹು
ದೆನ್ನ ಮನ, ಓ, ಭೂತಭವ್ಯೇಶ.

ಶಕ್ರ

ಅಮರ್ತ್ಯತೆಯಂ ಮತ್ಸಮತೆಯಂ ಸಿರಿಯೆಲ್ಲವಂ ಮಾಸಿದ್ಧಿಯಂ
ಸಗ್ಗದ ಸೊಗಗಳಂ
ರಾಜ, ಪಡೆದೈ. ನಾಯ ತೊರೆ ನೀ; ಇಂತೆಸಗಲಾ ಕೃತ್ಯವುಂ
ಕ್ರೌರ್ಯಮಲ್ಲಂ.

ಯುಧಿಷ್ಠಿರ

ಸಹಸ್ರಾಕ್ಷನೆ, ಆರ್ಯನಿಂದಲನಾರ್ಯಮಾದೀಯೆಸಕವೆಸಗಲು
ದುಷ್ಕರವದೆಂಬೆ.
ಭಕ್ತಜನವನು ತೊರೆಯುವಂತಿರೆ ಲಭಿಸುವಾ ಸಿರಿ-
ಸಂಗಮುವನೊಲ್ಲೆ ನಾನು.

ಶಕ್ರ

ಸ್ವರ್ಗಲೋಕದೊಳಿಲ್ಲ ನಾಯುಳ್ಳರಿಗೆ ತಾಣವು ; ಯಜ್ಞಫಲಗಳ
ಕಸಿಯುವರು ಕೆರಳಿ
ಆದ ಕತದಿಂ, ಧರ್ಮರಾಜನೆ, ಚಿಂತಿಸುತ ಗೈ
ನಾಯ ತೊರೆ ಕ್ರೌರ್ಯವಲ್ಲಂ.

ಯುಧಿಷ್ಠಿರ

ಭಕ್ತಜನವನು ತೊರೆವ ಪಾಪಕೆ ಕೊನೆಯ ಕಾಣೆನು ಬ್ರಹ್ಮಹತ್ಯಕೆ
ಸಮವದೆನಿಸುವುದು.
ಓ, ಮಹೇಂದ್ರನೆ, ಅದರಿನೀಗಳುಮಂತೆಯೆಂದುಂ
ತೊರೆಯೆನಿದ ಸ್ವಂತಸುಖಕೆ.
ಭೀತಭಕ್ತನ, ಬೇರೆ ಇನ್ನೊಬ್ಬಿಲ್ಲದಾರ್ತನ, ಬಳಿಗೆ ಬಂದನ,
ಕ್ಷೀಣನಾದವನ
ಪ್ರಾಣರಕ್ಷಣಕಾತರನ ನಾನಸುವಳಿವೊಡಂ
ತೊರೆಯೆನ್ನೈ ವ್ರತವಿದೆನಗೆ.

ಶಕ್ರ

ನಾಯ ಕಣ್ಣಿಗೆ ಬಿದ್ದ ದಾನವ ಹವಿಯ ಹೋಮನಿವೇದನಂಗಳ
ನೊಲ್ಲದೆಯೆ ಕೆರಳಿ
ಕಸಿವರದರಿಂ, ನಾಯನಿದ ತೊರೆ; ತೊರೆಯೆ ನಾಯಂ
ನಿನಗಹುದು ದೇವಲೋಕಂ.
ತೊರೆದು ತಮ್ಮರ ದಯಿತೆಕೃಷ್ಣೆಯ, ವೀರ, ಗಳಿಸಿಹೆ
ಲೋಕವಿದನೀ ನಿನ್ನ ಕರ್ಮದೊಳೆ ;
ಏಕೆ ನೀ ಬಿಡಲೊಲ್ಲೆ ನಾಯನು ? ಎಲ್ಲ ತೊರೆದವ
ಗೇತಕೀ ಮೋಹವಿಂದು ?

ಯುಧಿಷ್ಠಿರ

ಇಲ್ಲ ಕೆಳೆತನ, ಇಲ್ಲ ಹಗೆತನ ಜೀವತೊರೆದವ
ರೊಳಗೆ; ಇಂತಿದೆ ಧರೆಯ ನಡೆವಳಿಕೆ

ನಾನು ಬದುಕಿಸಲಾರೆನಿವರಂ, ಬಿಟ್ಟೆನದರಿಂ ;
ಬಿಡಲೊಲ್ಲೆ ಬದುಕಿಹುದನು.
ಶರಣುಬಂದನ ಭೀತಿಗೊಳಿಪುದು, ಹೆಣ್ಣ ಕೊಲುವುದು,
ಬ್ರಹ್ಮವೇತ್ತನ ಸ್ವತ್ತನೊಯ್ಯುವುದು,
ಕೆಳೆಯಗೆರಡನು ಬಗೆವುದಿಂತೀ ನಾಲ್ಕಿಗೂ ಸಮ
ಭಕ್ತರನು ಕೈಬಿಡುವುದು.

ವೈಶಂಪಾಯನ

ಧರ್ಮರಾಜನ ಮಾತನಾಲಿಸಿ ಶ್ವಾನರೂಪದ ಧರ್ಮಭಗವಾನ್
ಒಲುಮೆಯಿಂ ಕೂಡಿ
ಆ ಯುಧಿಷ್ಠಿರ ದೊರೆಗೆ ಇಂತೆಂದೊರೆದ ನಲ್ನುತಿವೆರಸಿ-
ದೊಳ್ನುಡಿಗಳಿಂದ.

ಧರ್ಮ

ಓ ನರೇಂದ್ರನೆ, ಸಂಸ್ಕೃತಂ ನೀ ಕುಲವೃತ್ತದಿಂ
ಮೇಧೆಯಿಂ ಮತ್ತೆಲ್ಲ ಭೂತದೊಳಿಂಥ ದಯೆಯಿಂ.
ಪುತ್ರನೇ, ಪರಿಕಿಸಿದೆ ನಿನ್ನಂ ಹಿಂದೆ ನಾನಾ
ದ್ವೈತವನದೊಳು, ನೀರಡಿಕೆಯಿಂ ತಮ್ಮದಿರೆಲ್ಲಿ
ಮಡಿದರೊ ಅಲ್ಲಿ ಭೀಮಾರ್ಜುನರನೊಲ್ಲದೆಯೆ ನೀ
'ತಾಯಂದಿರಾಗಲಿ ಸಮಂ, ಜೀವಿಸಲಿ ನಕುಲಂ'
ಎಂದೆ ಬಯಸಿದ ಸಮಯದೊಳು. ಭಕ್ತನೆಂದೀ
ನಾಯಿಗೋಸುಗ ದೇವರಥವನು ತೊರೆದೆ ; ಅದರಿಂ
ಸ್ವರ್ಗದೊಳಗೂ ನಿನ್ನ ಸಮರನು ಕಾಣೆ, ಆ ಕತ-
ಕಿನ್ನು ನಿನ್ನೀ ಮೈಯೊಡನೆ ಅಕ್ಷಯಲೋಕವಂ,
ಮಿಗಿಲಿನ್ನಿರದ ದಿವ್ಯಗತಿಯಂ ಪಡೆವಂತಾದೆ.

ವೈಶಂಪಾಯನ

ಇಂತು ನುಡಿದಾ ಧರ್ಮನುಂ ಶಕ್ರನುಂ ಮರುತನುಂ
ಅಶ್ವಿನೀಪುತ್ರರುಂ ಸುರರುಂ ದೇವರ್ಷಿಗಳುಂ
ಆ ಪಾಂಡವನನಾ ತೇರಿನೊಳು ತಾವೇರಿಸುತ
ನಡೆದರೇರುತ ವಿಮಾನಂಗಳಂ ತಂತಮ್ಮವಂ
ಎಲ್ಲರ್ ಆ ಸಿದ್ಧರ್ ಕಾಮವಿಹಾರಿಗಳ್ ವಿರಜಸರ್
ಪುಣ್ಯರ್ ಪುಣ್ಯವಾಗ್ಬುದ್ಧಿಕರ್ಮಿಗಳ್. ಆ ಬಳಿಕ
ಕುರುಕುಲೋದ್ವಹ ರಾಜ ತೇರೊಳು ಕುಳಿತು ಬೇಗದಿ
ಮೇಲೇರಿದಂ ಬುವಿ ಬಾಂದಳವ ತೇಜದಿ ತುಂಬಿ.
ಅಲ್ಲಿ ಸುರಸಂಘಸ್ಥನಾರದಂ ಬೃಹತ್ತಪಂ
ಬೃಹದ್ವಾದಿ ಸರ್ವಲೋಕಂಗಳಂ ಬಲ್ಲವಂ
ನುಡಿದನೇರಿದ ದನಿಯೊಳೀಪರಿ: "ಈ ಎಡೆಯಿರುವ
ರಾಜರ್ಷಿಗಳ ಜಸಕೆ ಮುಸುಕಂ ಕವಿದು ನಿಂತಂ
ಕುರುರಾಜನೀತಂ ಹೆಸರಿನಿಂ ಉರುತೇಜದಿಂ
ತನ್ನ ನಡೆವಳಿಯ ಸಿರಿಯಿಂ ಸರ್ವಲೋಕಂಗಳಂ
ತುಂಬಿ ಈ ತೆರದಿ ತನ್ನ ಮೈಯೊಡನೆ ಬಂದವನ
ಕಾಣೆ ಪಾಂಡವನನುಳಿದು." ಇಂತೆಂಬ ನಾರದನ
ನಾಲಿಸುತ ರಾಜಂ ದೇವರಂ ತನ್ನ ಬಳಗದ
ರಾಜರಂ ಕರೆದಿಂತು ನುಡಿದಂ ಧರ್ಮರಾಜಂ:
"ಪುಣ್ಯದ ಪದವೊ ಪಾಪದ ತಳವೊ ನನ್ನ ತಮ್ಮದಿ-
ರಿರುವ ತಾಣಂ ನಾನಾ ಪದಕೆ ಸಲಬಯಸುವೆಂ;
ಬೇರೆ ಲೋಕವಸೊಲ್ಲೆ." ಇಂತು ಮರುಕವ ತಳೆದು
ನುಡಿವಾ ದೊರೆ ಯುಧಿಷ್ಠಿರಗೆ ಮಾರುತ್ತರವನಿತ್ತಂ
ಪುರಂದರಂ ದೇವರಾಜಂ; "ಗೆಲಿದೆ ಓ ರಾಜೇಂದ್ರ
ಶುಭಕರ್ಮಂಗಳಿಂದೀ ಲೋಕವಂ; ಬಾಳಿಲ್ಲೆ;
ಮನುಜಸಹಜಸ್ನೇಹಮಿನ್ನುಂ ನಿನ್ನನೀತೆರ
ಮೇಕೆ ಸೆಳೆವುದು? ಪರಮಸಿದ್ಧಿಯ ಪಡೆದಿರುವೆ ನೀ

ಹಿಂದಿಂತು ಮತ್ತಾವ ನರನುಂ ಪಡೆಯದ ಗತಿಯ.
ನಿನ್ನ ಪದವಿಯ ಪಡೆಯಲಿಲ್ಲವು ನಿನ್ನ ತಮ್ಮದಿರ್.
ಏಕಿನ್ನುಮೀ ಮನುಜಭಾವಂ ಸೋಕಿದೆ ನಿನ್ನ?
ಸ್ವರ್ಗವಿದು ನೋಡೈ, ನರಾಧಿಪ ; ದೇವರ್ಷಿಗಳ
ತ್ರಿದಶಾಲಯದ ಸಿದ್ಧರ ನೋಡು." ದೇವೇಂದ್ರನೀ
ತೆರನೊರೆದೊಡಂ ಮರು ನುಡಿದನಾ ಧರ್ಮರಾಜಂ
ಧೀಮಂತಂ ಸಾರ್ಥವಚನವನಿದಂ : " ಅವರ ನಾ
ನುಳಿದಿಲ್ಲಿ ವಸತಿಯ ಮಾಡೆ ಬಯಸೆಂ. ತಮ್ಮದಿ
ರೆನ್ನವರೆಲ್ಲಿಹರೊ ಆ ಸ್ಥಲಕೆ ಪೋಗಬಯಸೆಂ.
ಮತ್ತಾವೆಡೆಗೆ ನನ್ನಾ ಶ್ಯಾಮೆ ಹಿರಿಮೆಯ ಹೆಣ್ಣು
ನಾರೀಶ್ರೇಷ್ಠೆ ಬುದ್ಧಿಸತ್ವಗುಣಾನ್ವಿತೆ ಪೋದಳೋ
ಆಯೆಡೆಗೆ, ದ್ರೌಪದಿ ಪೋದೆಡೆಗೆ ತೆರಳಬಯಸೆಂ "

ಇಂತು ಮಹಾಪ್ರಸ್ಥಾನಿಕ ಪರ್ವದಲ್ಲಿ ಮೂರನೆಯ ಅಧ್ಯಾಯವು.

ಸ್ವರ್ಗಾರೋಹಣಪರ್ವ

ಜನಮೇಜಯ

ಸ್ವರ್ಗವ ತ್ರಿವಿಷ್ಟಪವ ಹೊಂದಿದ ಹಿಂದಣ ನನ್ನ
ತಾತದಿರು ಪಾಂಡವರು ಮತ್ತಾ ಧೃತರಾಷ್ಟ್ರತನುಜರು
ನೆಲೆಗಳನದಾವವನು ಪಡೆದರು, ಕೇಳಬಯಸುವೆ ;
ಎಲ್ಲ ಬಲ್ಲವ ನೀನು ; ಅಲ್ಲದೆ ಅದ್ಭುತಕರ್ಮ
ಮಹರ್ಷಿ ವ್ಯಾಸನಾಣತಿಯ ಹೊತ್ತಿಹೆಯಲಾ.

ವೈಶಂಪಾಯನ

ಸ್ವರ್ಗವ ತ್ರಿವಿಷ್ಟಪವ ಹೊಂದಿದ ಬಳಿಕ ಹಿಂದಣ
ನಿನ್ನ ತಾತಂದಿರು ಯುಧಿಷ್ಠಿರ ಪ್ರಮುಖರೇನನು
ಗೈದರೋ ಅದನೊರೆವೆನಾಲಿಸು. ಸ್ವರ್ಗವನ್ನೈದಿ
ತದನಂತರದೊಳಾ ಧರ್ಮರಾಜಂ ಯುಧಿಷ್ಠಿರಂ
ಸಿರಿಯಂ ಕೂಡಿ ಮಣೆಯೊಳು ಮೆರೆವ ದುರ್ಯೋಧನನ
ಕಂಡನು, ಸೂರ್ಯನೊಲು ಹೊಳೆವವನ, ಬೀರಸಿರಿಯಿಂ
ಬಳಸಿರುವವನ, ತೊಳತೊಳಗುತಿಹ ದೇವರ್ಕಳಿಂ
ಪುಣ್ಯವಗೈದ ಸಾಧ್ಯರಿಂದೊಡಗೂಡಿದವನ.

ಇಂತು ಸಿರಿಗೂಡಿರುವ ದುರ್ಯೋಧನನ ಕಾಣುತ
ಕೆರಳಿ ಥಟ್ಟನೆ ಹಿಂದಿರುಗಿದನು ಯುಧಿಷ್ಠಿರ ಏರು-
ದನಿಯೊಳಗಿಂತೊರೆದು : “ ಮುಂಗಾಣದೀ ಲೋಭಿಯೀ
ದುರ್ಯೋಧನನ ಜತೆಗಿರಬಯಸೆ ನಾನೀಯೆಡೆಯೊಳ್.
ಇವನಿಂ ಕೆಟ್ಟುದು ನೆಲಂ, ಕೆಳೆಯರಂ ನೆಂಟರಂ
ನಾವಾಗ್ರಹದಿ ಕೊಲುವಂತಾಯ್ತು ಕಾಳೆಗಕೆಸಗಿ ;

ಮಾಬನದಿ ಕಡುಪಾಡಪಟ್ಟೆವು ; ಧರ್ಮಚಾರಿಣಿ
ಅನವದ್ಯಾಂಗಿ ಪಾಂಚಾಲಿ ಮನೆಯಾಕೆ ದ್ರೌಪದಿ
ಹಿರಿಯರಿದಿರೊಳೆ ಸೆಳೆದಾಟಕೀಡಾದಳಿವನಿಂ.
ನನಗಿಲ್ಲಾಸೆ ನೋಡಲು, ಸುರರೆ, ದುರ್ಯೋಧನನ.
ನನ್ನ ತಮ್ಮದಿರೆಲ್ಲಿ ಅಲ್ಲಿಗೆ ಸಲ್ಲ ಬಯಸುವೆ."
"ಅಂತಲ್ಲ" ವೆಂದವನಿಗೊರೆದನು ನಗುತನಗುತಲಿ
ನಾರದಂ : "ರಾಜೇಂದ್ರ, ಕೆಡುವುದು ವಿರೋಧವುಂ
ಸಗ್ಗದ ನೆಲೆಯೊಳ್, ಎಲೆ ಯುಧಿಷ್ಠಿರ ಮಹಾಬಾಹು,
ದುರ್ಯೋಧನನ ಕುರಿತೀ ತೆರದಿ ನುಡಿಯಲು ಬೇಡ.
ಆಲಿಸೆನ್ನೀ ನುಡಿಯ ; ಈ ರಾಜ ದುರ್ಯೋಧನಂ
ತ್ರಿದಶರಿಂ ಸ್ವರ್ಗದೊಳು ನೆಲೆಗೊಂಡ ಸದ್ರಾಜ-
ಪ್ರವರರಿಂ ಪೂಜೆಯಗೊಂಬೊಲ್ಗಾದಂ ಯುದ್ಧದೊಳು
ಮೈಯನು ಸುಟ್ಟು ವೀರಲೋಕದ ಗತಿಯ ಪಡೆದು.
ಆವನೆಂದುಂ ಕಾಡಿದನೊ ನಿಮ್ಮಂ ಆತನಂತೆಯೆ
ನೀವೆಲ್ಲರುಂ ಸುರಸಮರು. ಕ್ಷತ್ರಿಯ ಧರ್ಮದಿಂ
ಪಡೆದನಿವ ಈ ತಾಣವಂ ಮಾಬಯದಿ ನಿರ್ಭೀತ-
ನಾಗುತ. ಮನದೊಳಿಡಲಾಗದೈ ಜೂಜಿನೊಳಾದ
ಕಾರ್ಯವ. ದ್ರೌಪದಿಯ ಭಂಗವನು ಚಿಂತಿಸತಗದು,
ನಿನ್ನೀ ಜ್ಞಾತಿಯಿಂದಾದಿಂಥ ಭಂಗಂಗಳಂ
ಯುದ್ಧದೊಳೊ ಜೇರಿಡೆಯೊ—ಅವ ನೀ ನೆನೆಯಲಾಗದು.
ನ್ಯಾಯದ ರೀತಿಯೊಳು ಒಡಗೂಡು ದುರ್ಯೋಧನನ.
ಮನುಜಾಧಿಪನೆ, ಸ್ವರ್ಗವಿದು, ಸಲದಿಲ್ಲಿ ವೈರಂ"
ಈ ತೆರ ಪೇಳೆ ನಾರದ, ಕುರುರಾಜಂ ಯುಧಿಷ್ಠಿರಂ
ತಮ್ಮದಿರ ಕುರಿತೇ ಪ್ರಶ್ನಿಸಿದ, ಮೇಣಿಂತೊರೆದ :
"ಈ ಸನಾತನ ವೀರಲೋಕಗಳಾಗೆ ಧರ್ಮದ
ತಿಳಿವಿಲ್ಲದಗೆ, ಪಾಪಿಷ್ಠನಿಗೆ, ದುರ್ಯೋಧನಗೆ,
ಆನೆ ಕುದುರೆಗಳಂತೆಯೇ ನರರೊಡನೆ ನೆಲವುಂ

ಆರ ದೆಸೆಯಿಂ ನಾಶವಡೆಯಿತೊ, ಹಗೆಯ ಮುಯ್ಯನು
ಮರಳಿಸಲೆಳಸಿ ನಾವುಂ ಕೋಪದೊಳು ಕರುಕಾದೆವೋ
ಅಂಥ ಪೃಥಿವೀಸುಹೃದದ್ರೋಹಿಗೆ,—ಆ ನನ್ನವರು
ವೀರರು, ಮಹಾತ್ಮರು, ಮಹಾವ್ರತರು, ಸತ್ಯಪ್ರತಿಜ್ಞರು
ಲೋಕಶೂರರು, ಸತ್ಯವಾದಿಗಳನುಜರವರಿಗೆ
ಆವ ಲೋಕಗಳ್ ? ಅವುಗಳಂ ನಾಂ ಕಾಣಬಯಸುವೆನೀಗ.
ಮಹಾತ್ಮನಂ ಸತ್ಯಸಂಗರನಂ ಕರ್ಣನಂ
ಕುಂತೀಪುತ್ರನಂ, ಮೇಣಾ ಧೃಷ್ಟದ್ಯುಮ್ನನಂ
ಅವನ ಮಕ್ಕಳ ಅಂತೆಯೇ ಸಾತ್ಯಕಿಯಂ ಮತ್ತೆ
ಕ್ಷತ್ರಧರ್ಮದಿ ನಿಂತು ಶಸ್ತ್ರದಿ ಸತ್ತ ನೃಪರಂ.
ಎಲ್ಲವರು ಬ್ರಹ್ಮನ್, ಕಾಣಸರಿಲ್ಲಿ, ನಾರದ,
ಧೃಷ್ಟಕೇತು ವಿರಾಟ ದ್ರುಪದ ಮೊದಲಾದವರು.
ಎಲ್ಲಿ ಶಿಖಂಡಿ, ದ್ರೌಪದಿಯ ಮಕ್ಕಳು, ದುರ್ಧರ್ಷ
ಅಭಿಮನ್ಯು ? ಇವರೆಲ್ಲರನು ನಾ ನೋಡಬಯಸುವೆನು ”

ಇಂತು ಸ್ವರ್ಗಾರೋಹಣಪರ್ವದಲ್ಲಿ ಮೊದಲನೆಯ ಅಧ್ಯಾಯ

ಎರಡನೆಯ ಅಧ್ಯಾಯ

ಧರ್ಮರಾಜ

“ ವಿಬುಧರೇ, ನಾನಿಲ್ಲಿ ಕಾಣೆನು ಅಮಿತತೇಜನ
ರಾಧೇಯನನು, ತಮ್ಮಂದಿರನು ಮಹಾತ್ಮರನು,
ಯುಧಾಮನ್ಯುವ, ಉತ್ತಮೌಜನ, ನನಗೆಂದಾರು
ರಣವಹ್ನಿಯೊಳು ಹೋಮುವಗೈದರೋ ಮೈಗಳನು
ಆ ಮಹಾರಥರೆಲ್ಲಿ ರಾಜರು ರಾಜಪುತ್ರರು
ಶಾರ್ದೂಲಸಮವಿಕ್ರಮರು, ಸಂಗರದೊಳಸುವಂ
ತೆತ್ತವರು ? ಆ ಪುರುಷಸತ್ತಮರಿಂದೆಯುಂ ಜಿತ-

ವಾದುದೀ ಲೋಕಗಳ್. ಅವರುಮೀ ಲೋಕಂಗಳಂ
ಪಡೆದಿರುವರಾದೊಡೆ ಆ ಮಹಾತ್ಮರ ಸಂಗಡವೆ
ನಿಲ್ಲುವೆನಿಲ್ಲೆ. ಈ ಶುಭಾಕ್ಷಯ ಲೋಕವವರಿಗೆ
ಇಲ್ಲವಾದೊಡೆ ನಂಟರೊಡಹುಟ್ಟುಗಳು ಸಂಗಡ
ವಿಲ್ಲದೆಡೆಯೊಳು ರಮಿಸಲೆಳಸೆನು. ಉದಕಕ್ರಿಯೆಯ
ಸಮಯದೊಳಂದು 'ಕರ್ಣಗೆ ಸಲಿಸು ತೋಯವ'ನೆಂದ
ತಾಯಿಯ ಮಾತು ಸುಡುತಿಹುದೆನ್ನ—ಮತ್ತೆ ಮತ್ತದ
ನೆನೆದು ಪರಿತಪಿಸುತಿಹೆನಾ ಅಮಿತಾತ್ಮನಾತನ
ಪಾದಂಗಳಂ ತಾಯಂಥವಂ ಕಂಡೊಡನೆಯೇ
ಪರಬಲಾರ್ದನ ಕರ್ಣಗನುಗತನಾಗದಿದ್ದೆನೆ ಎನುತ.
ಕರ್ಣ ಸಂಗಡವಿರಲು ನಮ್ಮನು ಶಕ್ರನಾಗಲಿ
ಕದನದೊಳು ಗೆಲಲಾರ್ಪನೆ? ಆ ಸೂರ್ಯಕುಮಾರ,
ಸವ್ಯಸಾಚಿಯಿನಾರ ನಾಂ ಮರವೆಯೊಳು ಕೊಲಿಸಿದೆನೊ
ಆತ ಎಲ್ಲಿಹ? ಅತ್ತಲಾತನ ಕಾಣಬಯಸುವೆ.
ಪ್ರಾಣಕಿಂತಲು ಪ್ರಿಯನ ಭೀಮನ ಭೀಮವಿಕ್ರಾಂತನ
ಅರ್ಜುನನ ಶಕ್ರಸಂಕಾಶನ, ಆ ಯಮಳರನು
ಅಶ್ವಿನೀಸುತರಂಥವರ, ಮೇಣಾ ಧರ್ಮಚಾರಿಣಿ
ಪಾಂಚಾಲಿಯನು ಕಾಣಬಯಸುವೆ; ಇಲ್ಲಿ ನಾ ನಿಲ
ಬಯಸೆ, ಈ ಮಾತು ದಿಟ ದಿವಿಜರೇ. ಅಣ್ಣತಮ್ಮದಿ-
ರಿಲ್ಲದೀ ಸ್ವರ್ಗದಿಂದೆನಗೇನು ಸುರಸತ್ತಮರೆ?
ಅವರೆಲ್ಲಿಹರೊ ಅದುವೇ ಸ್ವರ್ಗವೆನ್ನೆಣಿಕೆಯೊಳು;
ಇದಲ್ಲ ಸ್ವರ್ಗ."

ದೇವತೆಗಳು

"ಮಗನೆ, ನಿನಗಿರೆ ಅತ್ತೆಡೆ ಚಿತ್ತ
ಹೆಜ್ಜೆಯಿಡತ್ತ ತಡಮಾಡದೆಯೆ. ನಿನ್ನಭೀಷ್ಟದ
ಸಲಿಕೆಯೊಳು ನಾವಿಹೆವು ಅಮರೇಂದ್ರ ಶಾಸನದಿಂದ."

ವೈಶಂಪಾಯನ

ಸುರರಿಂತು ದೊರೆಗೊರೆದು, 'ಸುಹೃದರ ಧರ್ಮರಾಜನೆ ತೋರು'
ಎಂದು ತಾವಾಣತಿಯನಿತ್ತರು ಸುರರ ದೂತನಿಗೆ.

ಬಳಿಕ ಕುಂತೀಸುತಂ ಮತ್ತಾ ದೇವದೂತಂ
ಇಬ್ಬರೂ ಜತೆಗೂಡಿ ನಡೆದರು ಆವೆಡೆಯೊಳಾ
ಪುರುಷರ್ಷಭರು ಎಡೆಗೊಂಡಿದ್ದರಾತಾಣಕ್ಕೆ.
ಮುಂದೆ ನಡೆದನು ದೇವದೂತಂ ಹಿಂದೆ ರಾಜಂ
ಲೇಸಿನಿತಿರದ ಕಲುಮುಳ್ಳಿಡಿದ ಕೇಡಿಗರಿಂದ
ಕೂಡಿದ ಹಾದಿಯೊಳು. ಕಗ್ಗತ್ತಲಾ ಬಳಿ, ಘೋರವದು,
ಕೂದಲ ಪಾಚಿ ಪಚ್ಚೆಗಟ್ಟಾ ನೆಲಕೆ—ಪಾಪವ
ಗೈದವರ ಗಬ್ಬಾಗಾಳಿಯೊಳು. ರಕ್ತ ಮಾಂಸದ ಕೊಚ್ಚೆ.
ಮೇಲ್ವಾಯ್ದು ಕಡಿಯಲು ಬರುವ ಮಿಗಗಳ್ ಕರಡಿಗಳ್
ನೊಣ ಸೊಳ್ಳೆಯಿಡಿದಿಹವಲ್ಲಿ. ಇತ್ತತ್ತಲೆಲ್ಲೆಡೆ
ನಾರ್‍ವ ಹೆಣಗಳು, ಮೂಳೆ, ಕೂದಲು, ಎತ್ತಲೂ ಕ್ರಿಮಿ
ಕೀಟ ತುಂಬಿವೆ. ಸುತ್ತಲುರಿಯುತ್ತಿಹುದು ಬೆಂಕಿ.
ಎರೆಗೆರಗಿ ಹಾರುತಿವೆ ಆಯೆಡೆ ಸೂಜಿಮೊನಚಿನ
ಕಬ್ಬಿಣದಂಥ ಕೊಕ್ಕಿನ ಕಾಗೆ ಹದ್ದುಗಳೆಲ್ಲ.
ತಲೆನೆಣಬೆರೆದ, ರಕ್ತದಿ ತೊಯ್ದು, ಕೈ ತೋಳು ತೊಡೆ
ಕಳಚಿ ಬಿದ್ದಿಹ, ಹರಿದ ಹೊಟ್ಟೆಯ, ಮುರಿದ ಕಾಲಿನ,
ವಿಂಧ್ಯಗಿರಿಯಂತಿರುವ ಪ್ರೇತಗಳೆಲ್ಲೆಲ್ಲು ಚೆಲ್ಲಾ-
ಡಿಹವು. ಆ ಪರಿ ಶವದುರ್ಗಂಧಪೂರಿತ ಅಶಿವ
ರೋಮಾಂಚಕರ ಮಾರ್ಗಮಧ್ಯದಿ ಧರ್ಮಾತ್ಮನಾ
ರಾಜ ನಡೆದನು ಬಹಳ ಚಿಂತಿಸುತ. ಹಾಯಲಾಗದ
ಕುದಿವ ನೀರಿನ ಹೊಳೆಯ ಕಂಡನು, ಕೂರಲಗಿಡಿದ
ಅಸಿಪತ್ರವನವನು, ಬಲುಕಾದ ಮಣ್ಣಿನ ಮರಳ,
ಅಂತೆಯೆ ಕಬ್ಬಿಣದ ಕಲ್ಲುಗಳ, ಕುದಿಕುದಿವೆಣ್ಣೆ
ಕೊಪ್ಪರಿಗೆಗಳ, ಮುಟ್ಟೆನ್ಮೈದೆಗೆವಂತೆ ಮೊನೆ ಮುಳ್ಳಿಡಿದ

ಯಮದಂಡವನು ಕಂಡನು. ಕಂಡನಾ ಕೌಂತೇಯು
ಆಯೆಡೆ ಪಾಪಕರ್ಮರು ಪಡುವ ಬಗೆಬಗೆಯುಳಲ.
ಕಾಣುತಾ ಕಷ್ಟಗಳನಾತನು ದೇವದೂತನಿ-
ಗೊರೆದನೀ ಪರಿ ; “ ಇನ್ನೆಲ್ಲಿವರೆಗೀ ದಾರಿಯೊಳು
ನಡೆಯಿದೆ ನಮಗೆ? ನನ್ನ ಭ್ರಾತೃಗಳೆಲ್ಲಿ ಪೇಳ್.
ದೇವರೀ ನೆಲವೆಂಥದಿದು ? ನಾನರಿಯ ಬಯಸುವೆ.”
ಧರ್ಮರಾಜನ ಮಾತನಾಲಿಸಿ ಹಿಂದಿರುಗಿದನು
ಸುರದೂತ : “ ಇಲ್ಲಿಯು ತನಕವೇ ನಿನ್ನ ನಡೆ ;
ಬಳಲೆ ಮರಳಿಸು ಎಂದೆ ಸುರರಾಣತಿಯನಿತ್ತಿಹರ್.
ಆದರಿಂ ಹಿಂದಿರುಗು ರಾಜೇಂದ್ರ.” ಧರ್ಮತನುಜಂ
ಅಲ್ಲಿನ ನಾತದಿಂ ಕಂಗೆಟ್ಟು ಬಲು ಖೇದದಿಂ-
ದಲ್ಲಿಂ ಮರುಳೆ ಮನವಂ ಮಾಡಿ ಹಿಂದಿರುಗಿದನು
ದುಃಖದಿಂ ಶೋಕದಿಂದಾಹತನಾಗಿ ಧರ್ಮಾತ್ಮ.
ಈ ಪರಿ ಮರಳಲೆಲ್ಲೆಡೆಯಿಂದಮಲ್ಲಿದ್ದವರು
ಗೋಳನು ಕರೆವ ಮಾತುಗಳವನ ಕಿವಿಗೈದಿದುವು :
“ ಭೋ ಭೋ ಧರ್ಮಜನೆ, ರಾಜರ್ಷಿ, ಪುಣ್ಯಾಭಿಜನ,
ಪಾಂಡವನೆ, ಗಳಿಗೆ ನಿಲ್ಲೈ, ನಿಂತನುಗ್ರಹಿಸೆಮ್ಮ ;
ನೀ ಬರಲು ದುರ್ಧರ್ಷ, ಬೀಸುವುದು ಪುಣ್ಯದ ಗಾಳಿ
ನಿನ್ನ ಗಂಧದ ಬೆಂಬಿಡಿದು ; ಆದರಿಂ, ತಂದೆ, ಸುಖವೆಮಗೆ.
ಓವೋ ಪಾರ್ಥ, ಪುರುಷರ್ಷಭನೆ, ರಾಜೋತ್ತಮನೆ,
ನಿನ್ನಂ ನೋಡಿ ನಿಡುಗಾಲ ಸುಖದೊಳಗಿರಲು ಬಯಪೆವು.
ಗಳಿಗೆಯಾದರು ನಿಲ್ಲು, ಭಾರತ, ಮಹಾಬಾಹೂ ;
ನೀನಿಲ್ಲಿರಲು, ಕೌರವ್ಯ, ಬಾಧಿಸದು ಯಾತನೆ ನಮ್ಮ.”
ಇಂತಾಯೆಡೆಯೊಳಳಲಿಂ ಬಳಲಿ ಗೋಳನುಕರೆವ
ನೊಂದವರ ಬಲು ಬಗೆಯ ಮಾತುಗಳಾತನ ಕಿವಿಗೆ
ಬಿದ್ದುವು, ರಾಜ. ದೀನಭಾಷಿಗಳವರ ಮಾತನು
ಕೇಳಿ ಕರುಣಾಶಾಲಿ “ ಅಯ್ಯೋ ಕಷ್ಟ” ವೆಂದನು ;

ನಿಂತನಲ್ಲಿಯೆ ಆ ಯುಧಿಷ್ಠಿರ. ಬೇಸತ್ತವರ
ಬೆಂದವರ ಆ ಮರಮರಳಿ ಬಹ ನುಡಿಗಳದೆಲ್ಲೊ
ತಾನಾಲಿಸಿಹ ತೆರನಾಗಿಹವು; ಅವುಗಳ ಕುರುಹು
ಸಿಕ್ಕದು ಪಾಂಡವಗೆ. ಆರವೀ ನುಡಿಗಳೆಂಬುದ
ನರಿಯಲಾಗದೆ ಧರ್ಮಪುತ್ರಂ ಯುಧಿಷ್ಠಿರಂ
"ನೀವಾರು? ಏಕಿಲ್ಲಿಹಿರಿ?" ಎಂದಂ. ಇಂತೊರೆಯೆ
ಅವರೆಲ್ಲರೊಟ್ಟಿಗೆಯಿಂತು ನುಡಿದರು: "ನಾ ಕರ್ಣ,
ನಾ ಭೀಮಸೇನ, ನಾನರ್ಜುನ, ಓ ಪ್ರಭುವೆ
ನಕುಲ ನಾ ಸಹದೇವ ನಾ ಧೃಷ್ಟದ್ಯುಮ್ನ ನಾ
ನಾನೇ ದ್ರೌಪದಿ, ದ್ರೌಪದಿಯ ಮಕ್ಕಳು ನಾವೆಲ್ಲ"
ಎಂದರಚಿದರವರು. ಆ ಎಡೆಗೆ ತಕ್ಕಾ ಮಾತ-
ನಾಲಿಸಿ ರಾಜ "ಏನಿದೇನಿದು ದೈವಕಾರಿತ?
ಈ ಮಹಾತ್ಮರಿನಾವ ಕೇಡಿನ ಕೆಲಸ ಜರುಗಿತು
ಕರ್ಣನಿಂ, ದ್ರೌಪದಿಯ ಸುತರಿಂ, ಪಾಂಚಾಲಿಯಿಂ?
ಪುಣ್ಯಕರ್ಮಿಗಳಿವರು ಈ ತೆರ ಪಾಪಗಂಧದ
ದಾರುಣದ ದೇಶದೊಳು ನೆಲಸುವ ತೆರದೊಳಗಾವ
ಹೊಲಗೆಯ್ಮೆ ನಡೆದುದೊ ಕಾಣೆ ನಾ ಏನಂಗೆಯ್ದು
ಧೃತರಾಷ್ಟ್ರಸುತ ರಾಜ ದುರ್ಯೋಧನಂ ತನ್ನಂ
ಎಡೆಬಿಡದೆ ಕೂಡಿಯೆ ನಡೆದ ಪಾಪಗಳ ಸಂಗಡ
ಆ ತೆರದಿ ಸಿರಿಯಂ ಕೂಡಿ ದೇವೇಂದ್ರನಂದದಿ
ಲಕ್ಷ್ಮೀವಂತನಾದನು ಪರಮಪೂಜಿತನಾಗಿ?
ಯಾರದಿದು ಏತರದು ಈ ವಿಕಾರಂ ನರಕಕೆ
ಸಲುವಂತೆಸಗಿತಿವರಂ, ಸತ್ಯಾಗಮಪರಾಯಣರಂ, ಕ್ಷತ್ರ-
ಧರ್ಮಪರರಂ, ಸಂತರಂ, ಯಜ್ವಾನರಂ, ಭೂರಿ
ದಕ್ಷಿಣರಂ? ಏನಿದೇನಿದು, ನಾಂ ನಿದ್ರಿಸಿಹೆನೋ
ಎಚ್ಚೆತ್ತಿಹೆನೊ ಬದುಕಿಹೆನೊ ಬದುಕಿಲ್ಲವೋ—ಹಾ
ದಿಟ, ಇದೆನ್ನ ಚಿತ್ತವಿಕಾರ, ಭ್ರಮಿಸಿಹೆನು ನಾ"

ಎಂದೀ ತೆರದಿ ಬಲು ಚಿಂತಿಸುತ ಧರ್ಮತನುಜಂ
ದುಃಖಶೋಕಸಮಾವಿಷ್ಟಂ ಚಿಂತಾವ್ಯಾಕುಲಿತ
ಕರಣಂ ಬಹುಕೋಪವಾಂತಂ ಯುಧಿಷ್ಠಿರನೃಪಂ.
ತೆಗಳಿದನು ದೇವರ್ಕಳಂ ಧರ್ಮನಂ ಯುಧಿಷ್ಠಿರಂ.
ಆ ತೀವ್ರಗಂಧಸಂತಪ್ತನವನಾ ದೇವರ
ದೂತಗೊರೆದಂ: " ಹೋಗು ಹೋಗವರೆಡೆಗೆ ಯಾರಿಗೆ
ದೂತನೋ ನೀನವರಿರುವೆಡೆಗೆ – ನಾನಲ್ಲಿಗೈದೆಂ
ನಿಂತೆನಿಲ್ಲಿಯೆ. ಆರುಹು ಹೋಗೆನ್ನನೊಡಗೂಡಿರಲು
ಸೊಗವೈ ದೀನರಿಗೆ ನನ್ನಣ್ಣತಮ್ಮಂದಿರಿಗೆ."
ಇಂತೊರೆಯೆ ಧೀಮಂತ ಪಾಂಡುಪುತ್ರಂ ಸುರದೂತ
ನಡೆದನು ದೇವರಾಜಂ ಶತಕ್ರತುವಿದ್ದ ತಾಣಕೆ;
ಬಿನ್ನೈಸಿದನು ಧರ್ಮರಾಜನದೇನ ಬಯಸಿದನದನು
ಮತ್ತವನೇನನರುಹಿದನದನೆಲ್ಲವನು ನೃಪನೇ.

ಇಂತು ಸ್ವರ್ಗಾರೋಹಣಪರ್ವದಲ್ಲಿ ಎರಡನೆಯ ಅಧ್ಯಾಯ.

ಮೂರನೆಯ ಅಧ್ಯಾಯ

ಇಂತಾ ಪಾರ್ಥಂ ಯುಧಿಷ್ಠಿರಂ ಧರ್ಮರಾಜಂ
ಗಳಿಗೆಯೊಂದರವರೆಗೆ ನಿಂತಿರೆ ಬಂದರಲ್ಲಿಗೆ
ಶಕ್ರನಂ ಮುಂದಿಟ್ಟು ಸುರರು. ಪುರುಷವಿಗ್ರಹ-
ನಾಗಿ ಬಂದನು ಧರ್ಮ, ರಾಜನ ನೋಡಬಯಸುತ.
ಪುಣ್ಯಾಭಿಜನಕರ್ಮರ್ ಭಾಸುರದೇಹಿಗಳ್
ದೇವರ್ಕಳಿಂತಲ್ಲಿಗೈತರೆ ತೊಲಗಿತಾ ತಮ.
ಪಾಪಕರ್ಮರ ಯಾತನೆಗಳುಂ ತೋರದಾದುವು.
ಭೀಕರ ಕೂಟ ಶಾಲ್ಮಲಿ ಮತ್ತಾ ವೈತರಣಿ ನದಿ
ಕಾದೆಣ್ಣೆ ಕೊಪ್ಪರಿಗೆ ಶಿಲೆಗಳು ಕಾಣದಾದುವು.

ಅದೆ ತೆರದಿ ದೊರೆ ಅಲ್ಲಲ್ಲಿ ಕಂಡಾ ರೂಗೆಟ್ಟ
ವ್ಯೆಗಳುಂ ಮರೆಯಾದುವೈ. ಬಳಿಕ ಬೀಸಿತು ಗಾಳಿ
ಸುಖಸ್ಪರ್ಶಂ ಪುಣ್ಯಗಂಧವಹಂ ನಿರ್ಮಲಂ
ದೇವಸಮೀಪಸ್ಥಂ ಅತೀವ ಶೀತಲಂ. ಮರುತ-
ನಿಂದ್ರಂ ವಸುಗಳಶ್ವಿನೀಸುತರಂತೆ ಸಾಧ್ಯರ್
ರುದ್ರರುಂ ಆದಿತ್ಯರುಂ ಮಿಕ್ಕೆಲ್ಲಸುರರುಂ
ನೆರೆದರಾಯೆಡೆಯಲ್ಲಿ ಸಿದ್ಧರ್ ಪರಮಋಷಿಗಳ್.
ಆವೆಡೆಯೊಳಾ ಮಹಾತೇಜಂ ಧರ್ಮಪುತ್ರಂ
ನಿಂತನಾಯೆಡೆಗೈದಿ ಶಕ್ರಂ ದೇವರೊಡೆಯಂ
ಪರಮಶ್ರೀಯುತಂ ಯುಧಿಷ್ಠಿರಗೊರೆದನೀ ಪರಿ
ಸಾಂತ್ವಪೂರ್ವದ ನುಡಿಯ : “ ಯುಧಿಷ್ಠಿರ ಮಹಾಬಾಹು
ನಿನಗೊಂದಿಹುದು ದೇವಗುಣ. ಏಳೇಳು ಪುರುಷವ್ಯಾಘ್ರ
ಹೇರಳವಾಯ್ತು ಕಜ್ಜಂ, ಸಿದ್ಧಿಪಡೆದಿಹೆ ವಿಭುವೆ,
ನಿನಗಾಯಿತಕ್ಷಯಲೋಕ, ನೀನಿನ್ನು ಕೋಪವ
ಗೊಳ್ಳೆ ಸಲದೈ, ತಂದೆ, ನನ್ನೀ ನುಡಿಯನಾಲಿಸು.
ಕಂಡೆಕಾಣಲುಬೇಕು ನರಕವ ರಾಜರೆಲ್ಲರು,
ಪುರುಷರ್ಷಭನೆ. ರಾಶಿಯೆರಡುಂಟಶುಭಶುಭಗಳ.
ಮೊದಲು ಸುಕೃತವ ಭೋಗಿಸುವವಂ ನರಕವ ಬಳಿಕ
ಉಣ್ಣಲೆ ಬೇಕು. ಮೊದಲೊಳೇ ನರಕವನುಂಡವಂ
ಸ್ವರ್ಗವ ಭೋಗಿಸುವನಾ ಬಳಿಕ; ಹೇರಳವಾಗಿ
ಪಾಪವ ಗೈದವಗೆ ಮೊದಲಹುದು ಸ್ವರ್ಗಭೋಗಂ.
ಆದರಿಂ ನಿನ್ನ ಹಿತವನೆ ಬಯಸಿ ಇಂತೊಯ್ದೆ ನಾ
ನರಕಕೆ ನಿನ್ನ. ನಿನ್ನ ಕಪಟದ ನೆವದೊಳಲ್ಲವೆ
ಮಗನಿಗೋಸುಗ ಗಾಸಿಗೊಳಗಾದನಾ ದ್ರೋಣ ?
ಆ ನೆವವೆ ಸಂಗಡಿಸಿತೀ ಪರಿ ನಿನಗೆ ನರಕದ
ನೋಟವನು. ನೃಪ, ನೀನೆಂತಂತೆ ಭೀಮಾರ್ಜುನ
ಯಮಳರುಂ ದ್ರೌಪದಿ ಕೃಷ್ಣೆಯುಂ ನರಕವ ಕಂಡರೈ.

ಬಾರಿತ್ತು, ನರಶಾರ್ದೂಲ; ಬಿಡುಗಡೆಯನಿವರುಂ
ಪಡೆದಿಹರು ಪಾಪಂಗಳಿಂ. ನಿನ್ನ ಕಡೆ ರಣದೊಳು
ನಿಂತು ಹರಣವನಳಿದ ಪಾರ್ಥಿವರೆಲ್ಲರುಂ ಸಂ-
ದಿಹರು ಸ್ವರ್ಗಕೆ. ಭರತರ್ಷಭನೆ, ನೋಡವರ ನೀಂ.
ಆರಿಗೋಸುಗ ನೀನು ಬಲು ನೊಂದಿರುವೆಯೋ ಆ
ಪೆರ್ಬಿಲ್ಲ ಕರ್ಣಂ ಶಸ್ತ್ರಧಾರಿಗಳಗ್ರಗಣ್ಯಂ
ಪರಮಸಿದ್ಧಿಯ ಪಡೆದಿಹನವಂ ; ತನ್ನ ನೆಲೆಯೊಳು
ಮೆರೆಯುವಾತನ ನೋಡು ಪುರುಷವ್ಯಾಘ್ರನಂ ರವಿ-
ತನುಜನಂ. ಬಿಡುಬಿಡು ಶೋಕವಂ, ಮಹಾಬಾಹೋ,
ನೋಡು ನೋಡೈ ಮಿಕ್ಕಣ್ಣತಮ್ಮದಿರೆಲ್ಲರಂ ;
ನಿನ್ನ ಪಕ್ಷದ ದೊರೆಗಳೆಲ್ಲರುಮವರವರೆಡೆಯೊ-
ಳವರವರಿರುವ ತೆರವನು ಕಂಡು ನಿನ್ನೀ ಮನದ
ಜ್ವರವಳಿಯಲಿ. ಓ ಕೌರವನೆ, ಮುನ್ನ ಕಷ್ಟವ
ನುಂಡು ಇನ್ನೀ ಮುಂದೆ ಬಿನದಿಸು ನನ್ನ ಜತೆಯೊಳು
ನಿರಾಮಯಂ ವಿಗತಶೋಕಂ. ನೀನೆ ತಪದಿಂ
ಪುಣ್ಯಕರ್ಮಂಗಳಿಂ ದಾನಂಗಳಿಂ ಗೆದ್ದಿರುವ
ಫಲಗಳ ಹೊಂದು, ಪಾರ್ಥಿವ; ನಿನ್ನ ಸೇವಿಪರೀಗ
ಕಲ್ಯಾಣನಂ ದಿವ್ಯರ್ ವಿರಜಾಂಬರಭೂಷಣರ್
ದೇವಗಂಧರ್ವರ್ ಅಪ್ಸರೆಯರ್. ಬಲುತಿಳಿಮೆಯಿಂ ನೀ
ರಾಜಸೂಯವನೆಸಗಿ ಸ್ವಯಮಾರ್ಜಿಸಿದ ಲೋಕಂ-
ಗಳಂ ಹೊಂದು, ತಪಗಳ ಮಹಾಫಲವ ಪಡೆ ನೀ.
ರಾಜರೆಲ್ಲರ ಮೇಲೆ ಮೇಗಡೆ ನಿನ್ನ ನೆಲೆಯೈ ;
ಹರಿಶ್ಚಂದ್ರಗೆ ಸಮರು ತಾವೆಲ್ಲಿಹರೊ ಆಯೆಡೆ
ವಿಹರಿಸುವೆ ನೀ ; ರಾಜರ್ಷಿಮಾಂಧಾತನಿರುವೆಡೆ
ಆ ಭಗೀರಥರಾಜನಿರುವೆಡೆ, ಎಲ್ಲಿರುವನೋ
ದೌಷ್ಯಂತಿ ಭರತಂ ಆ ತಾಣ ಬಿನದಕೆ ನಿನ್ನ.
ಈ ದೇವನದಿ ಮೂಲೋಕವಂ ಪಾವನಗೈವ

ಪುಣ್ಯಜಲೆ ಆಕಾಶಗಂಗೆ—ಇದರೊಳು ಮಿಂದು
ನೀ ನಡೆವೆಯೈ. ಇಲ್ಲಿ ಮೀಯಲು ನಂದಿಹೋಹುದು
ನಿನ್ನ ಮಾನುಷ್ಯಭಾವಂ ; ಈ ಮೀಹದಿಂದಪ್ಪೆ
ವಿಗತಶೋಕಂ ಮುಕ್ತವೈರಂ ನಿರಾಯಾಸಂ.”
ಇಂತೊರೆಯುತಿರಲಾ ದೇವೇಂದ್ರನಾ ಯುಧಿಷ್ಠಿರಗೆ,
ಮೈತಳೆದ ಸಾಕ್ಷಾತ್ ಧರ್ಮನೇ ತನ್ನ ಮಗನಂ
ಕುರಿತಿಂತೆಂದ : “ ಓವೋ ರಾಜ, ಮಹಾಪ್ರಾಜ್ಞನೆ,
ನಿನ್ನಿಂ ಪ್ರೀತನಾದೆನು, ಮಗನೆ, ಮದ್ಭಕ್ತಿಯಿಂ
ನನ್ನಿವಾತಿಂ, ತಾಳ್ಮೆಯಿಂ, ನಿನ್ನ ನೀ ತಡೆಹಿಡಿ
ದಿಟ್ಟಬಗೆಯಿಂ. ಈ ಮೂರನೆಯ ಜಿಜ್ಞಾಸೆಯಂ
ಕಲ್ಪಿಸಿದೆನಾಂ ನಿನ್ನ ಪರಿಕಿಸೆ. ನಿನ್ನ ಗುಣದಿಂ
ನಿನ್ನ ಕದಲಿಸಬಲ್ಲ ನೆವವೊಂದಿಲ್ಲ. ಮೊದಲೊಳು
ದ್ವೈತವನದೊಳು ಪರಿಕಿಸಿದೆನೈ ಅರಣಿಯನರಸಿ
ಹೋಹಂತೆಸಗಿ. ಗೆದ್ದೆ ನೀನಾ ಪರೀಕ್ಷೆಯೊಳು.
ಬಳಿಕ ದ್ರೌಪದಿಯೊಡನೆ ಅನುಜರು ನಷ್ಟವಾದಾ
ವೇಳೆಯೊಳು ನಿಜರೂಪದಿಂ ಪರಿಕಿಸಿದೆ ನಿನ್ನಂ
ಮಗನೆ. ಇದು ಮೂರನೆಯ ಬಾರಿ, ನೀನೇತೆರದೊಳೀ ಪರಿ
ಅಣ್ಣತಮ್ಮರಿಗಾಗಿ ಇಲ್ಲಿಯೆ ನಿಲ್ಲೆ ಮನವಂ
ಗೈದೆಯೋ ಇದು. ಮಹಾಭಾಗನೆ, ನೀ ಸುಖಿಯಾದೆ.
ವಿಶುದ್ಧನ್ ವಿಗತಕಲ್ಮಷನಾದೆ. ವಿಶಾಂಪತಿಯೆ,
ನರಕಕೆ ತಕ್ಕರೇ ನಿನ್ನಣ್ಣತಮ್ಮದಿರಿವರು ?
ಇದು ದೇವೇಂದ್ರನೊಡ್ಡಿದ ಮಾಯೆ. ರಾಜರೆಲ್ಲರು
ಕಾಣಲೆಬೇಕು ನರಕವ, ತಂದೆ ; ಆದರಿಂದಾಯ್ತು
ಗಳಿಗೆಯವರೆಗೆ ನಿನಗೀತೆರದ ಉತ್ತಮ ದುಃಖ.
ಎಂದಿಗೂ ನರಕಾರ್ಹನಲ್ಲಾ ಸವ್ಯಸಾಚಿ,
ಭೀಮನಾಗಲಿ ಯಮಳರಾಗಲಿ ನನ್ನಿಗ ಶೂರ
ಕರ್ಣನಾಗಲಿ ಎಂದಿಗೂ ನರಕಾರ್ಹರಲ್ಲೈ.

ನರಕಕೆ ತಕ್ಕಳಲ್ಲ ಕೃಷ್ಣೆ ರಾಜಕುಮಾರಿ.
ಏಳೇಳು ಭರತಶ್ರೇಷ್ಠ, ನೋಡೀ ತ್ರಿಲೋಕಗೆಯ
ಗಂಗೆಯ."

ವೈಶಂಪಾಯನ

ಮಾತನಾಲಿಸಿ ನಿನ್ನತಂದೆಯ ತಂದೆ
ಆ ರಾಜರ್ಷಿ, ಧರ್ಮನಂ ತ್ರಿದಿವಾಲಯದ ಸರ್ವರಂ
ಜತೆಗೂಡಿ ನಡೆದನು. ಬಳಿಕ ಆ ದೇವನದಿಯೊಳ್
ಪುಣ್ಯೆಯೊಳ್ ಪಾವನೆಯೊಳ್ ಋಷಿಸಂಸ್ತುತೆಯೊಳ್
ಗಂಗೆಯೊಳ್ ಮಿಂದು ಮಾನುಷದೇಹವಂ ನೀಗಿದಂ.
ಆ ಜಲದಿ ನೆನೆದು ಧರ್ಮರಾಜಂ ಯುಧಿಷ್ಠಿರಂ
ದಿವ್ಯದೇಹವ ಧರಿಸಿದಂ ನಿರ್ವೈರನಾದಂ
ಗತಸಂತಾಪನಾದಂ. ಬಳಿಕ ಆ ಕುರುರಾಜ
ಯುಧಿಷ್ಠಿರಂ ತನ್ನಂ ಬಳಸಿ ಬಹ ದೇವರ್ಕಳಿಂ
ಜತೆಯೊಳೆ ನಡೆವ ಧರ್ಮನಿಂದೊಡಗೂಡಿ ನಡೆದಂ
ಮಹರ್ಷಿಗಳ್ ಹೊಗಳುತಿರೆ, ಆ ತಾಣಕ್ಕೆ—ಎಲ್ಲಾ
ಪುರುಷವ್ಯಾಘ್ರರ್ ಶೂರರ್ ವಿಗತಕೋಪರ್
ಪಾಂಡವರ್ ಅಂತೆಯೇ ಧೃತರಾಷ್ಟ್ರತನುಜರ್
ಸೊಗಮಿರುತಿಹರೊ ತಂತಮ್ಮೆಡೆಯೊಳಾ ತಾಣಕ್ಕೆ.

ಇಂತು ಸ್ವರ್ಗಾರೋಹಣಪರ್ವದಲ್ಲಿ ಮೂರನೆಯ ಅಧ್ಯಾಯ

ಶಿವಮಸ್ತು

ಶ್ರೀ ಕೃಷ್ಣಾರ್ಪಣಮಸ್ತು

ಸೀತೆ ತವರಿಗೆ ಸಂದುದು

ಶ್ರೀಮದ್ರಾಮಾಯಣದ ಉತ್ತರಕಾಂಡದಲ್ಲಿ
೯೫ನೆಯ ಸರ್ಗ

ಶ್ರೀರಾಮನಾಲಿಸಿದನಾ ಪರಮಶುಭಗೀತವನು ಬಹುದಿನಂ
ಮುನಿಗಳ ಜತೆಗೆ ರಾಜರ ಜತೆಗೆ ವಾನರರ ಜತೆಗೆ.
ಅರಿತಾ ಹಾಡಿನಿಂ ಲವಕುಶರು ಸೀತೆಯ ಮಕ್ಕಳೆಂದು
ಆ ಸಭೆಯ ನಡುವೆ ರಾಮನೆಂದನು ಮಾತನೀ ತೆರದಿ
ಒಳ್ಳೆಯ ನಡೆನುಡಿಯ ದೂತರಂ ಕರೆದು ತನ್ನಿಚ್ಛೆಯಿಂ :
" ಹೋಗಿರೀಗಳೆ ಭಗವಂತನಿರುವೆಡೆಗೆ, ಬಿನ್ನವಿಸಿರಿದನು :
ಆಗಿರೆ ವೀತಕಲ್ಮಷೆ, ಆಗಿರೆ ಶುದ್ಧಸಮಾಚಾರೆ
ಮಾಮುನಿಯನೊಪ್ಪಿಸುತಲೀಯೆಡೆ ಶುದ್ಧಿಯ ತೋರಲಿ;
ಮುನಿಯ ಮತವನು ತಿಳಿದು, ನೆರವಿಯೊಳು ನಿಜವ ತೋರೆ
ಸೀತೆಯೇನೆನ್ನುವಳೊ, ಅದ ತಿಳಿದು ಬೇಗನೆ ತಿಳಿಸಿರಿ.
ಶಪಥಗೈಯಲಿ ಹೊತ್ತು ಹುಟ್ಟಿದ ಮೇಲೆ ನಾಳೆ
ಜನಕ ರಾಜನ ಮಗಳು ಮೈಥಿಲಿ ನನ್ನ ಮನವೂ ತಿಳಿಯುವಂತೆ."
ದೂತರಾ ರಾಘವನ ಪರಮಾದ್ಭುತದ ಮಾತ ಕೇಳಿ
ಸಾರಿದರು ಮುನಿಪುಂಗವನ ತಾಣಕಾಗಲೆಂದು.
ಮಣಿದಾ ಮಹಾತ್ಮನಿಗೆ ಜಗಿಜಗಿಸುವಮಿತಪ್ರಭನಿಗೆ
ಬಿನ್ನೈಸಿದರು ಮುನಿಗೆ ಮೃದುಮಧುರ ರಾಮ ವಾಕ್ಯಂಗಳಂ.
ಆಲಿಸುತಲವರೊರೆದುದಂ, ಅರಿತು ರಾಘವನ ಮನದೆಣಿಕೆಯಂ,
ಸುಮಹಾತೇಜನಾ ಮುನಿ ನುಡಿದನೀತೆರದೊಳು :
" ಒಳ್ಳಿತು ದೂತರೇ, ಅಂತೆಯಾಗಲಿ ; ರಾಮನೊರೆದಂತೆ
ಸೀತೆ ಗೈವಳು—ಪತಿಯಲ್ಲವೇ ದೈವ ಹೆಣ್ಣುಮಕ್ಕಳಿಗೆ "

ಮುನಿಯಿಂತೊರೆಯೆ ಆ ರಾಜದೂತರು ಮಹೌಜಸರು
ನಡೆದು ರಾಘವನೆಡೆಗೆ ಅರುಹಿದರು ಆ ಮಾತನು.
ಆ ಮಹಾತ್ಮನ ಮಾತನಾಲಿಸುತ ಸಂಹೃಷ್ಟನಾಗಿ
ಕಾಕುತ್ಸ್ಥನಾಯೆಡೆ ನೆರೆದ ಋಷಿಗಳಂ ದೊರೆಗಳಂ ಕುರಿತು
ಇಂತೆಂದ: " ಶಿಷ್ಯರ್ ಕೂಡಿ ಭಗವಂತರುಂ ಅನುಗತರೊಡನೆ ಭೂಪಾಲರುಂ
ಮಿಕ್ಕರಾರಾರ್ಗಾಸೆಯೋ ಅವರೆಲ್ಲರುಂ ಸೀತಾಶಪಥವಂ ನೋಡಲಿ"
ಮಹಾತ್ಮಂ ರಾಘವಂ ಇಂತೊರೆಯಲಾ ಮಾತ ಕೇಳಿ
ಒಳ್ಳಿತೊಳ್ಳಿತು ಎಂದು ಉಗ್ಗಡಿಸಿದರು ಋಷಿಮುಖ್ಯರೆಲ್ಲ;
' ಈ ಲೋಕದೊಳು ನೀನೊಬ್ಬನೇ ಇಂತುಳ್ಳವಂ '
ಎಂದು ಹೊಗಳಿದರು ರಾಜರು ಮಹಾತ್ಮರು ರಾಮನಂ.
ಇಂತು ಮನವಂ ಗೈದು ' ನಾಳೆ ಬನ್ನಿಂ ' ಎಂದು ರಾಮಂ
ಶತ್ರುಸೂದನನಾಗಳವರೆಲ್ಲರಂ ಬೀಳ್ಕೊಟ್ಟನು.
ಈ ತೆರದೊಳಾ ರಾಜಸಿಂಹಂ ಶಪಥ ನಾಳೆಗೆ ಜರುಗೆ ನಿಶ್ಚಯಿಸಿ
ಬೀಳ್ಕೊಟ್ಟನಾ ಮಹಾತ್ಮಂ ಮಹಋಷಿಗಳಂ ದೊರೆಗಳನೆಲ್ಲರಂ.

ಇಂತು ಆರ್ಷ ವಾಲ್ಮಿಕೀಯ ಆದಿಕಾವ್ಯ ಶ್ರೀಮದ್ರಾಮಾಯಣದ
ಉತ್ತರಕಾಂಡದಲ್ಲಿ ತೊಂಬತ್ತೈದನೆಯ ಸರ್ಗವು.

೯೬ ನೆಯ ಸರ್ಗ

ಆ ಇರುಳು ಕಳೆಯೆ ಯಜ್ಞವಾಟವ ಸಾರಿ ನೃಪನು
ಋಷಿಗಳನೆಲ್ಲರಂ ಕರೆವನಾ ಮಹಾತೇಜಂ ರಾಘವಂ.
ವಸಿಷ್ಠಂ ವಾಮದೇವಂ ಜಾಬಾಲಿ ಮತ್ತಾ ಕಾಶ್ಯಪಂ
ವಿಶ್ವಾಮಿತ್ರಂ ದೀರ್ಘತಮನುಂ ದುರ್ವಾಸ ಮಾತಪದವಂ
ಅಂತಾ ಪುಲಸ್ತ್ಯಂ ಶಕ್ತಿ ಅಂತೆಯೆ ಭಾರ್ಗವ ವಾಮನರ್
ದೀರ್ಘಾಯು ಮಾರ್ಕಂಡೇಯಂ ಪ್ರೌದ್ಗಲ್ಯ ಮಾಜಸದವಂ

ಚ್ಯವನಗರ್ಗರ್, ಧರ್ಮವ ಬಲ್ಲ ಶತಾನಂದಂ
ತೇಜಸ್ವಿ ಭರದ್ವಾಜಂ, ಸುಪ್ರಭನಗ್ನಿಪುತ್ರಂ
ಪರ್ವತನಾರದರ್, ಗೌತಮಂ ಮಾಜಸವೆತ್ತವಂ,
ಕಾತ್ಯಾಯನ ಸುಯಜ್ಞರ್, ತಪೋನಿಧಿಯಗಸ್ತ್ಯಂ
ಇವರೆ ಮೊದಲಾದೆಲ್ಲ ಮುನಿಗಳ್ ಸಂಶ್ರಿತವ್ರತರ್
ಬಂದರಲ್ಲಿಗೆ ಬಹುಸಂಖ್ಯೆಯೊಳು ಕೌತುಕವೆತ್ತು.
ರಾಕ್ಷಸರ್ ಮಹಾ ವೀರ್ಯರ್ ಅಂತೆಯೆ ವಾನರರ್ ಮಾಬಲರ್
ಎಲ್ಲರುಂ ಕೌತೂಹಲದಿ ನೆರೆದರಾಯೆಡೆ ಮಹಾತ್ಮರ್.
ಕ್ಷತ್ರಿಯರ್, ಶೂದ್ರರ್, ವೈಶ್ಯರುಂ ಸಾಸಿರಲೆಕ್ಕದೊಳು
ಬೇರೆಡೆಯ ಬ್ರಾಹ್ಮಣರ್ ಸಂಶ್ರಿತವ್ರತರ್ ಜ್ಞಾನನಿಷ್ಠರ್
ಕರ್ಮನಿಷ್ಠರ್, ಯೋಗನಿಷ್ಠರ್, ಅಂತೆಯೆ ಮಿಕ್ಕವರ್,
ಸರ್ವರುಂ ಸೀತಾಶಪಥವಂ ನೋಡಬಂದರ್.

ಆ ತೆರದೊಳೆಲ್ಲಂ ಕಲ್ಲಿನಂತಲುಗದೆ ಕುಳಿತುದಂ
ಕೇಳಿ ಬೇಗನೆ ಬಂದನಾ ಮುನಿವರಂ ಸೀತೆಯ ಕೂಡಿ.
ಮುನಿಯ ಬೆಂಬಳಿವಿಡಿದು ತಗ್ಗಿದ ಮೊಗದಿ ಸೀತೆ ನಡೆವಳ್
ಕೈಮುಗಿದು, ಕಂಬನಿಮಾಲೆ ಸಾಲಿಡುತಿರಲು ರಾಮನಂ
ಮನದೊಳಿಟ್ಟು.
ಬ್ರಹ್ಮನಂ ಬೆಂಬಿಡಿದು ಬಹ ವೇದದೊಲು ವಾಲ್ಮೀಕಿಯಂ
ಮುಂದಿಟ್ಟು ಬಹ ಸೀತೆಯ ಕಂಡು ನೆರವಿಯೊಳು ಮೂಡಿತು
ಮಹಾಸಾಧುವಾದಂ.
ಬಳಿಕೊಗೆದುದಾಯೆಡೆಯೊಳೆಲ್ಲರೊಳು ಹಲಹಲೋದ್ಗಾರಂ
ದುಃಖವುದಿಸಲು ಬಳೆವ ಶೋಕದಿಂ ವ್ಯಾಕುಲಿತ ಹೃದಯರೊಳು.
ಒಳ್ಳಿತೊಳ್ಳಿತು ರಾಮ ಎಂದು ಕೆಲರೊಳ್ಳಿತೊಳ್ಳಿತು ಸೀತೆ
ಎಂದು ಕೆಲವರ್
ಮತ್ತೆ ಕೆಲ ನೋಟಕರು ದನಿಗೈದರಿಬ್ಬರಂ ಕುರಿತು.
ಬಳಿಕ ಮುನಿಪುಂಗವಂ ಹೊಕ್ಕು ಜನಸಂದಣಿಯ ನಡುವೆ
ಸೀತಾಸಹಾಯಂ ವಾಲ್ಮೀಕಿಯೀ ತೆರದಿ ರಾಘವಂಗೆಂಬಂ:

“ ದಾಶರಥಿ, ಈಕೆಯೇ ಸೀತೆ, ಧರ್ಮಚಾರಿಣಿ, ಸುವ್ರತೆ,
ಆರನಪವಾದಭಯದಿಂದೆನ್ನಾಶ್ರಮದ ಬಳಿ ತೊರೆದೆಯೋ ಆಕೆ.
ಓ ಮಹಾವ್ರತ ರಾಮ, ಲೋಕಾಪವಾದಕ್ಕೆ ಅಂಜಿರುವ ನಿನಗೆ
ತೋರಿಕೊಡುವಳು ಸೀತೆ ತನ್ನ ನಿಜವಂ. ಆಕೆಗಾಣತಿಯ ನೀಡು.
ಇವರಿಬ್ಬರೀ ಪಟುಗಳವಳಿಗಳ್ ಜಾನಕಿಯ ಮಕ್ಕಳ್,
ನಿನ್ನ ಮಕ್ಕಳೆಯವರ್. ನನ್ನಿಯನೆ ನುಡಿಯುತಿಹೆ ನಿನಗೆ ನಾಂ.
ರಘುನಂದನನೆ, ಹತ್ತನೆಯ ಮಗ ನಾ ಪ್ರಚೇತಸಗೆ
ನೆನೆಯಲಾರೆನು ಸುಳ್ಳ. ಇವರು ನಿನ್ನ ಪುತ್ರರ್.
ಗೈದಿಹೆನು ನಾ ತಪಶ್ಚರ್ಯೆಯಂ ಸಾಸಾವಿರದ ವರ್ಷಕಾಲಂ
ನಾನುಣ್ಣದಂತಾಗಲದರ ಫಲವಂ ದುಷ್ಟೆಯಾಗಿರೆ ಮೈಥಿಲಿ.
ಮನದೊಳೋ ಮಾತೊಳೋ ಕಜ್ಜದೊಳೊ ಎನ್ನಿಂ ಕಿಲ್ಬಿಷ
ಮಾದುದಿಲ್ಲ
ನಾನದರ ಫಲವನುಂಬೆಂ, ಆಗಿರಲು ಮೈಥಿಲಿ ಅಪಾಪೆ.
ಓ ರಾಘವನೆ, ನಾನೈದು ಭೂತಂಗಳೊಳ್ ಆರನೆಯ ಮನದೊಳ್
ಪರಿಚಿಂತಿಸುತ ಶುದ್ಧಳೆಂದರಿತು ಈ ಸೀತೆಯನು ಕೊಂಡೊಯ್ದೆ
ವನನಿರ್ಝರದಿ.
ಈ ಶುಭಸಮಾಚಾರೆ, ನಿಷ್ಪಾಪೆ, ಪತಿಯನೇ ದೇವರೆಂದೆಂಬವಳ್
ಲೋಕಾಪವಾದಕ್ಕೆ ಅಂಜಿರುವ ನಿನಗೆ ತೋರುವಳು ತನ್ನ
ನಿಜವಂ.
ಎಲೆ ನರವರಾತ್ಮಜ, ತೋರಿಸಿಹೆನದರಿಂ ನಿನಗೀಕೆಯಂ
ದಿವ್ಯದೃಷ್ಟಿಯೊಳಾರ ನಾಂ ನಿರುಕಿಸಿದೆನಾ ಶುದ್ಧಭಾವದವಳಂ,
ಆರ ನೀಂ ಲೋಕಾಪವಾದದಿಂ ಕೊಳೆಗೊಂಡ ಚಿತ್ತದೊಳು
ಶುದ್ಧಳೆಂದರಿತುಂ ತೊರೆದೆಯೋ ಆ ಪ್ರಿಯತಮೆಯನು.”

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯ ಶ್ರೀಮದ್ರಾಮಾಯಣದಲ್ಲಿ
ತೊಂಬತ್ತಾರನೆಯ ಅಧ್ಯಾಯ

೯೭ ನೆಯ ಸರ್ಗ

ವಾಲ್ಮೀಕಿ ಇಂತೊರೆಯೆ ಮರುನುಡಿದನಾ ರಾಘವಂ
ಕೈಮುಗಿದು, ನೋಡುತಾ ವರವರ್ಣಿನಿಯ ಜನದ ನಡುವೆ:
"ಓ ಮಹಾಭಾಗನೇ, ಧರ್ಮವನು ಬಲ್ಲವನೆ, ನಿನ್ನ ಮಾತಿದು ಸರಿ;
ಎನಗುಂಟು ವಿಶ್ವಾಸ ನಿನ್ನ ಕಲ್ಮಷವಿರದ ನುಡಿಗಳೊಳಗೆ,
ಉಂಟೆನಗೆ ಪ್ರತ್ಯಯ ಪುರಾವೃತ್ತದೊಳು ವೈದೇಹಿಯ.
ಅಲ್ಲದೆ ಪ್ರಮಾಣಿಸುತ ಸುರರೆಡೆಯೊಳೀಕೆಯನು ಮನೆ ಹೊಗಿಸಿದೆ.
ಬಲಶಾಲಿ ಲೋಕಾಪವಾದವದರಿಂ ತೊರೆದೆ ಮೈಥಿಲಿಯನಿವಳಂ.
ನಿಷ್ಪಾಪೆಯೀಕೆ ಎಂಬರಿವನಾಂತುಂ ಲೋಕಭಯದಿಂ
ತೊರೆದೆ ನಾನೀ ಸೀತೆಯಂ ; ಮನ್ನಿಸಿದ ಬ್ರಹ್ಮನ್.
ಬಲ್ಲೆ, ಈ ಅವಳಿ ಮಕ್ಕಳ್ ಕುಶಲವರ್ ನನ್ನ ಮಕ್ಕಳ್.
ಶುದ್ಧೆ ಮೈಥಿಲಿಯೊಳಗೆ ಪ್ರೀತಿ ಹುಟ್ಟಲಿ ನನಗೆ ಜಗದ ನಡುವೆ."
ಜಾನಕಿಯ ಶಪಥದೊಳು ರಾಮನಭಿಮತವ ತಿಳಿದು
ಇಂದ್ರನೇ ಮೊದಲಾದ ಸುರಸತ್ತಮರು ಮಹೌಜಸರು
ಬ್ರಹ್ಮನಂ ಮುಂದಿಟ್ಟು ಬಂದರಾಯೆಡೆಗೆಲ್ಲರು.
ವಸುಗಳಾದಿತ್ಯ ವಿಶ್ವೇದೇವರುದ್ರರ್, ಮರುದ್ಗಣಗಳ್
ಗಂಧರ್ವರಪ್ಸರೆಯರೆಲ್ಲರುಂ ನೆರೆದರಾ ತಾಣದಿ;
ಸಾಧ್ಯರುಂ ದೇವರ್ಕಳೆಲ್ಲರುಂ ಪರಮರ್ಷಿಸರ್ವರುಂ
ನಾಗರುಂ ಗರುಡರುಂ ಸಿದ್ಧರುಂ ಹೃಷ್ಟಮಾನಸರೆಲ್ಲರುಂ
ಬಂದರಾ ತಾಣಕ್ಕೆ ಜಾನಕೀಶಪಥಸಂಭ್ರಾಂತರಾಗಿ.
ಆ ಋಷಿಗಳಂ ದೇವರಂ ನೋಡಿ ರಘುವರಂ ಮರಳಿ ನುಡಿದಂ:
"ನರವರರೆ, ನನಗೆ ನಂಬಿಕೆಯುಂಟು ಕಲ್ಮಷರಹಿತ ಋಷಿವಾಕ್ಯದಿ
ಶುದ್ಧೆಯಹ ಸೀತೆಯೊಳು ಪ್ರೀತಿ ಹುಟ್ಟಲಿ ನನಗೆ ಜಗದ ನಡುವೆ."
ಆಗ ಬೀಸುತ ವಾಯು ಪುಣ್ಯಂ ಶುಭಂ ದಿವ್ಯಗಂಧಂ
ಚೇತೋರಮಂ
ಸುರಶ್ರೇಷ್ಠಂ, ಆ ಜನೌಘವನಾಹ್ಲಾದಿಸಿದನೆಲ್ಲೆಡೆಯೊಳುಂ.

ಆ ಅಚಿಂತ್ಯಾದ್ಭುತವ ಸತ್ವರಾಷ್ಟ್ರಂಗಳಿಂದಾಗಮಿಸಿರ್ದ
ಮಾನವರು ನಿರುಕಿಸಿದರಂದು ಕೃತಯುಗದೊಳೆಂತೊ ಅಂತೆ.
ನೆರೆದೆಲ್ಲರಂ ನೋಡಿ ಕಾಷಾಯವುಟ್ಟಿರುವ ಸೀತೆ
ಕೆಳದಿಟ್ಟಿಯೊಳು ಮೊಗವೆತ್ತದೆಯೆ ಕೈಮುಗಿದಿಂತು ನುಡಿವಳ್ :
"ರಾಘವನ ಹೊರತು ನಾನೇಪರಿಯೊಳನ್ಯನಂ ಮನದೊಳೂ
ನೆನೆಯದಿಹೆನೋ
ಅದೆ ಪರಿಯೊಳೆನಗೆ ಮಾಧವಿದೇವಿ ಬಿರುಕನು ತೋರಲಿ.
ಮನೋವಾಕ್ಕರ್ಮದೊಳಗೆಂತು ನಾಂ ರಾಮನಂ ಭಜಿಸುತಿಹೆನೊ
ಅಂತೆ ಪರಿ ಎನಗೆ ಮಾಧವಿದೇವಿ ಬಿರುಕನು ತೋರಲಿ.
ನನ್ನ ನುಡಿಯೇಪರಿಯೊಳಿದು ನನ್ನಿಯೋ, ರಾಮಗೂ
ಮಿಗಿಲಿಲ್ಲವೆಂದೆಂತು ನನ್ನರಿವೆಯೊ
ಅಂತೆ ಪರಿಯೊಳು ನನಗೆ ಭೂದೇವಿ ವಿವರವ ನೀಡಲಿ."
ಈ ತೆರದೊಳಾಣೆಯನಿಡುವ ಮೈಥಿಲಿಯ ಮುಂದೆ
ಭೂತಲದಿನೆದ್ದಿತೊಂದೆಣೆಯಿಲ್ಲದದ್ಭುತದ ದಿವ್ಯಸಿಂಹಾಸನಂ.
ನಾಗರ್ ಅಮಿತವಿಕ್ರಮರ್ ದಿವ್ಯ ರತ್ನ ವಿಭೂಷಿತರ್
ದಿವ್ಯವಪುಷರ್ ಹೊತ್ತಿರುವರಾ ದಿವ್ಯವಂ ತಲೆಯ ಮೇಲೆ.
ಸ್ವಾಗತದಿನಭಿನಂದಿಸುತ ಧರಣೀದೇವಿ ತೋಳೊಳ್ ಪಿಡಿದು
ಮೈಥಿಲಿಯನವಳಂ ಕುಳ್ಳಿರಿಸಿದಳು ಆದರೊಳ್.
ಆ ಆಸನದಿ ಕುಳಿತಾಕೆ ಪಾತಾಳವಂ ಹೊಗುತಿರುವುದಂ ಕಂಡು
ಎಡೆಬಿಡದೆ ಕರೆದುದು ಸೀತೆಯ ಮೇಲೆ ದಿವ್ಯ ಪುಷ್ಪವೃಷ್ಟಿ.
ಥಟ್ಟನೊಗೆದುದು ಲೇಸು ಲೇಸೆಂಬ ಪೇರುಗ್ಗಡಣೆ ಸುರರೊಳ್.
" ಲೇಸು ಲೇಸೌ ಸೀತೆ ನಿನ್ನೀ ತೆರದ ಶೀಲಂ "
ಒಗೆದುವೀ ಪರಿ ಮಾತು ಪಲಬಗೆಯವಂತರಿಕ್ಷದಿ ನೆರೆದ-
ಮರರೊಳ್
ಸೀತೆ ಹೊಗುವುದ ಕಂಡು ಹೃಷ್ಟಾಂತರಂಗರೊಳ್.
ಅಚ್ಚರಿತಣಿಯದಾ ಮುನಿಗಳಿಗೆ ಸರ್ವರಿಗೆ
ರಾಜರಿಗೆ ನರಶಾರ್ದೂಲರಿಗೆ ಯಜ್ಞವಾಟದಿ ನೆರೆದವರಿಗೆ,

ಬುವಿಯೊಳೋ ಬಾನೊಳೋ ಎಲ್ಲ ಸ್ಥಾವಿರ ಜಂಗಮಂ
ಪೇರೊಡಲ ದಾನವರ್ ಪಾತಾಳ ಪನ್ನಗರ್
ಕೆಲರುಗ್ಗಡಿಸುವರ್ ಸಂಹೃಷ್ಟಿಯೊಳ್, ಕೆಲರಿಹರ್ ನಿಂತಮನದಿ
ರಾಮನಂ ನೋಡುವರ್ ಕೆಲವರ್, ಕೆಲರ್ ಸೀತೆಯಂ
ಅಚೇತಸರಾಗಿ.
ಸೀತೆ ಹೊಗುವುದ ಕಾಣುತೆಲ್ಲರಿಗಾಯಿತೊಕ್ಕೂಟವೊಂದೆ
ಬಗೆಯೊಳ್ ;
ಆ ಮುಹೂರ್ತದೊಳೆಲ್ಲಜಗವಾದುದೊಂದೆ ಸಮಸಂಮೋಹಿತಂ.

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯ ಶ್ರೀಮದ್ರಾಮಾಯಣದಲ್ಲಿ
ತೊಂಬತ್ತೇಳನೆಯ ಸರ್ಗ.

೯೮ನೆಯ ಸರ್ಗ

ಈಪರಿ ರಸಾತಲವ ಹೊಕ್ಕ ವೈದೇಹಿಯನು ಕಂಡು
ಕಿರಿಚಿದರು ವಾನರರು. ಸಾಧು ಸಾಧ್ವೀ ಎಂದು
ಮುನಿಗಳುಗ್ಗಡಿಸಿದರು ರಾಮ ಸನ್ನಿಧಿಯಲ್ಲಿ.
ಊರುಗೋಲನು ನೆಮ್ಮಿ ಕಣ್ಣೀರಿಡಿದ ಕಣ್ಣಿಂ
ಮಾತುಳಿದು ಮೊಗತಗ್ಗಿ ದುಃಖಿಸುತ ರಾಮನಿದ್ದಂ.
ನಿಡುಗಾಲ ರೋದಿಸುತ ಕಂಬನಿಯ ನೆರೆಚೆಲ್ಲುತ
ಕೋಪದಿಂ ಶೋಕದಿಂ ತುಂಬಿ ರಾಮಂ ಮಾತನೀಪರಿ ನುಡಿದನು:
“ಎಂದುಮಿಲ್ಲದ ಶೋಕವೆನ್ನ ಮನವಂ ತುಡುಕಲೆಳಸುತಿದೆ
ಕಣ್ಣೆದಿರೊಳೇ ಸೀತೆ ಲಕ್ಷ್ಮಿಯಂಥವಳಿಂದು ಇಲ್ಲದಾಗೆ.
ಸೀತೆ ಕಣ್ಮರೆಯಾಗೆ ಕಡಲಾಚೆ ಲಂಕೆಯೊಳು
ಈ ಹಿಂದೆ ಅಲ್ಲಿಂದಲೂ ತಂದೆ ನಾ ಆಕೆಯನು ;
ಇನ್ನು ಭೂತಲದಿಂದ ತರುವ ಮಾತೇನು !
ತಾಯಿ ಭೂದೇವಿ, ಮರಳಿ ತಾರೌ ಸೀತೆಯಂ ;
ಅಲ್ಲಗಳೆವೊಡೆ ನನ್ನ ನೀನೆನ್ನ ಕೋಪವಂ ಕಾಂಬೆ.

ನನ್ನವಳ ತಾಯಿ ನೀ, ಹಿಂದೆ ನೇಗಿಲ ಹಿಡಿದು
ಜನಕನುಳುತಿರುವಂದು ನಿನ್ನಿಂದ ಮೈಥಿಲಿಯನೆತ್ತಿ ತಂದನಲ.
ಆದು ಕಾರಣಂ ಮರಳಿ ಕೊಡು ಸೀತೆಯಂ, ಇಲ್ಲ ವಿವರವ ನೀಡು
ನನಗೆ,
ಸ್ವರ್ಗದೊಳೊ ಪಾತಾಳದೊಳೊ ನಾನಿರುವೆನವಳ ಜತೆಗೆ.
ಆಕೆಯಂ ತಂದು ನೀಡೌ ಸೀತೆಯಂ, ಹುಚ್ಚ ನಾ ಮೈಥಿಲಿಯ
ಕತದಿ.
ಎಂತಿದ್ದಳಾ ರೂಪದೊಳೆ ಭೂತಲದಿನವಳನೆತ್ತಿ ಕೊಡದಿರಲು
ನೀನು
ಮಲೆಬನಗಳಿಂ ಕೂಡಿ ಹೊರವಾಗಿರುವ ನಿನ್ನಿರವನೆಲ್ಲವಂ
ವ್ಯಥೆಗೊಳಿಪೆನು ;
ನಾಶಗೈವೆನು ಭೂಮಿಯಂ ಸರ್ವವೂ ಕರಗಿ ನೀರಾಗಿ
ಹೋಗಲಿಂದು."
ಇಂತೊರೆಯೆ ಕಾಕುತ್ಸ್ಥ ಕೋಪದಿಂ ಶೋಕದಿಂ ಕೂಡಿ
ಬ್ರಹ್ಮನೀ ಪರಿ ನುಡಿದನಾ ರಘುನಂದನಗೆ ಸುರರಿದಿರೊಳು :
" ರಾಮ ರಾಮಾ, ಸುವ್ರತ, ಸಂತಾಪಗೊಳೆ ನೀ ತಕ್ಕುದೆ ?
ನಿನ್ನ ಪೂರ್ವದ ಭಾವವಂ ಮನಕೆ ತಾರೈ, ಮಂತ್ರವಂ.
ನೆನೆಯ ತಗದೀ ಕೆಟ್ಟ ಗಳಿಗೆಯ ತಾಳಲಸದಳವ.
ಮಹಾಬಾಹುವೆ, ನೆನೆದುಕೊಳ್ಳೈ ನಿನ್ನ ವೈಷ್ಣವ ಜನ್ಮವ.
ವಿಮಲೆ ಸಾಧ್ವಿ ಸೀತೆಯಲ್ಲವೆ ನಿನ್ನ ಪೂರ್ವಪರಾಯಣೆ ?
ಸುಖದಿ ನಡೆದಳು ನಾಗಲೋಕಕೆ ನಿನ್ನ ಕೂಡಿದ ತಪದ ಬಲದಿಂ
ಇಬ್ಬರೂ ಒಡಗೂಡುವಿರಿ ಸಗ್ಗದಿ, ಇದರೊಳಿಲ್ಲವು ಸಂದೆಗ.
ಏನನಾನೀ ನೆರೆವಿಯಿದಿರೊಳಗೊರವೆನದ ನೀನಾಲಿಸು :
ಎಲ್ಲ ಕಾವ್ಯಕು ಮಿಗಿಲು ನಿನ್ನೀ ಕಾವ್ಯವಿದು ಜಸವೆತ್ತುದು
ರಾಮ, ಸಂದೆಗವಿಲ್ಲ, ಇದುವೇ ಎಲ್ಲವನು ಬಿತ್ತರಿಪುದು
ಹುಟ್ಟನಿಂ ಹಿಡಿದೆಲ್ಲ ನಿನ್ನಯ ದುಃಖ ಸುಖದನುಭೂತಿಯ
ಮುಂದೇನು ನಿನಗಹುದೊ ಅದನೂ ವಾಲ್ಮಿಕಿಯೀ ಕಬ್ಬವು.

ಆದಿಕಾವ್ಯವಿದೆಲ್ಲ, ರಾಮ, ನಿನ್ನೊಳೇ ನೆಲೆಗೊಂಡಿದೆ.
ಪಾಲಿಲ್ಲ ಕಬ್ಬಗಳ ಜಸದೊಳು ರಾಘವನ ಹೊರತಾರಿಗೂ.
ಈ ಹಿಂದೆ ಇದನೆಲ್ಲ ನಿನಗೆ ನಾನೊರೆದೆ ಸುರರಿದಿರೊಳು
ದಿವ್ಯದದ್ಭುತರೂಪವಂ ಸತ್ಯವಾಕ್ಯವನೆಲ್ಲವಂ
ಬಣ್ಣಿಸಿದೆ ನಾ, ಇನ್ನು ರಾಘವ, ನಿಂತು ಕದಲದೆ ಧರ್ಮದಿ
ಶೇಷರಾಮಾಯಣವನಾಲಿಸು ನೆರೆದ ಮುನಿಗಳ ಸಂಗಡ
ನಿನ್ನ ಹೊರತಿನ್ನನ್ಯ ಋಷಿಯಿಂ ಕೇಳಸಲದೀ ಪರಮವು."
ಇಂತೊರೆದು ನುಡಿಯಂ ಮೂಲೋಕದೊಡೆಯಂ ಬ್ರಹ್ಮನು
ತನ್ನ ಬಳಗದ ದೇವರಿಂದೊಡಗೂಡಿ ನಡೆದಂ ತ್ರಿದಿವಕೆ.
ಅಲ್ಲಿದ್ದ ಋಷಿಗಳ್ ಮಹಾತ್ಮರ್ ಬ್ರಹ್ಮಲೋಕದವರ್
ರಾಮನುತ್ತರಚರಿತವಂ ಕೇಳಬಯಸುತ ಮರಳಿದರ್
ಬ್ರಹ್ಮನನುಮತಿಯ ಪಡೆದಾ ಮಹೌಜಸರು.
ಬಳಿಕಾಲಿಸುತ ರಾಮಂ ದೇವದೇವಂ ನುಡಿದ ಶುಭವಾಣಿಯಂ
ಆ ಪರಮತೇಜಸ್ವಿ ವಾಲ್ಮೀಕಿಯಂ ಕುರಿತಿಂತು ನುಡಿದಂ :
"ಕೇಳಬಯಸಿಹರೆನ್ನ ಮುಂದಣ ಚರಿತೆಯಂ ಬ್ರಹ್ಮಋಷಿಗಳ್
ನಾಳೆ ಕೂಡುವೆವಿಲ್ಲೆ ಅದನು ನಾವಾಲಿಸಲು, ಭಗವನ್."
ಇಂತು ನಿಶ್ಚಯಗೊಂಡು ಲವಕುಶರ ಕೈವಿಡಿದು ನಡೆದಂ
ನೆರವಿಯಂ ಬೀಳ್ಕೊಟ್ಟು ತನ್ನೆಲೆವನೆಗೆ ರಾಮಂ.
ಆ ಇರುಳು ಕಳೆದುದಾತಂ ಸೀತೆಯನೆ ನೆನೆನೆನೆದು ಶೋಕಿಸುತಿರೆ.

ಇಂತು ಆರ್ಷ ವಾಲ್ಮೀಕೀಯ ಶ್ರೀಮದ್ರಾಮಾಯಣದ ಉತ್ತರಕಾಂಡದಲ್ಲಿ
ತೊಂಬತ್ತೆಂಟನೆಯ ಸರ್ಗ.

ಲಕ್ಷ್ಮಣ ವಿಸರ್ಜನಂ

ಉತ್ತರಕಾಂಡದ ೧೦೩ ನೆಯ ಸರ್ಗ

ಇಂತಿರೆ ಧರ್ಮದಿ ನಿಲ್ಲುತ ರಾಘವ, ಒಂದು ದಿನ
ಬಂದಂ ಕಾಲಂ ತವಸಿಯೊಲರಮನೆ ಬಾಗಿಲಿಗೆ.
ಧೃತಿವಂತಗೆ ಜಸವಂತಗೆ ಲಕ್ಷ್ಮಣಗವನೊರೆದಂ :
" ಅರುಹೈ ರಾಮಗೆ ನಾ ಬಂದಿಹುದಂ, ಕಜ್ಜವಿದೆ.
ಮಹರ್ಷಿ ಅತಿಬಲಗಮಿತೌಜಸನಿಗೆ ನಾ ದೂತಂ
ರಾಮನ ಕಾಣಲು ಬಂದೆಂ ಕಜ್ಜಕೆ, ಮಹಬಲನೆ."
ಆ ನುಡಿಯಾಲಿಸಿ ಲಕ್ಷ್ಮಣ ನಡೆದನು ತ್ವರೆಗೂಡಿ
ತಾಪಸ ಬಂದಿಹನೆನ್ನುತ ರಾಮನಿಗರುಹಿದನು :
" ಮಾತೇಜನೆ, ಧರ್ಮದ ನಿನ್ನಾಳಿಕೆ ಜಗವೆರಡಂ ಗೆಲ್ಗೆ ;
ದೂತಂ ಬಂದಿಹ ತಪದೊಳು ರವಿಯಂತೆಸೆವವ ದರುಶನಕೆ."
ಲಕ್ಷ್ಮಣನೊರೆದುದನಾಲಿಸಿ ರಾಘವನಿಂತೆಂದಂ :
" ಬಿಜಗೈಯಿಸು ಮಾತೇಜನ ಆ ನುಡಿತಳೆದಿಹನ "
" ಆಗಲಿ " ಎನ್ನುತ ಮುನಿಯಂ ಲಕ್ಷ್ಮಣ ಕರೆತಂದಂ
ತೇಜದೊಳುರಿವೊಲು ಕಿರಣದಿ ಸುಡುವಂತಿರುವವನಂ.
ತನ್ನಯ ತೇಜದೊಳೆಸೆವಾ ರಘುವರನೆಡೆಗೈತರುತಾ ಋಷಿಯು
" ವರ್ಧಸ್ವ" ಎನ್ನುತ ಸವಿ ನುಡಿಯೊಳು ರಾಮನ ಹರಸಿದನು.
ಅವಗಿತ್ತನು ಪೂಜೆಗಳರ್ಘ್ಯಾದಿಗಳಂ ರಾಮಂ
ಬಳಿಕೊಮ್ಮನದೊಳು ಮೊದಲಿಟ್ಟನು ಕುಶಲವ ಕೇಳೆ.
ಕುಶಲವ ಕೇಳೆ ಮಹೌಜಂ ರಾಮಂ, ಮಹಯಶನು
ದಿವ್ಯ ಸ್ವರ್ಣಾಸನದೊಳು ಕುಳಿತನು ನುಡಿಗಾರಂ.
ಆ ಬಳಿಕೆಂದನು ರಾಘವ : " ಸ್ವಾಗತ, ಮಾಮುನಿಗೆ.
ಆವನ ದೂತಂ ನೀನವನೊರೆದುದ ಪೇಳೆನೆಗೆ "

ಈ ತೆರ ಚೋದಿಸೆ ನೃಪಸಿಂಹಂ, ಮುನಿ ಇಂತೊರೆದಂ :
" ಹಿತವೆಣಿಪೊಡೆ ಮಾತಿದು ನಡೆಯಲಿ ನಮ್ಮಿರ್ವರೊಳೇ
ನಮ್ಮಾಲಿಪರಂ ಕಾಂಬರನಂತೆಯೆ ಕೊಲ್ಲುವೊಡೆ
ನೀನಾಲಿಪೆ ಮುನಿಮುಖ್ಯಂ ನುಡಿದುದ, ಬಯಕೆಯಿರೆ."
ಆದಕೊಪ್ಪುತಲಿಂತೆಂದಂ ರಾಮಂ ಲಕ್ಷ್ಮಣಗೆ
" ಪ್ರತಿಹಾರನ ಹೊರಕಳಿಸು, ನಿಲ್ಲೈ, ವೀರನೆ, ಬಾಗಿಲೊಳು ;
ನಮ್ಮಂ ಕಾಂಬವನಾಲಿಪವಂ ಸಾವಂ ನನ್ನಿಂ."
ನುಡಿದೀ ತೆರದೊಳು ಬಾಗಿಲೊಳಿರಿಸುತ ಲಕ್ಷ್ಮಣನ
" ಪೇಳುವುದಂ ಪೇಳ್ " ಎಂದನು ಮುನಿಗಾ ರಾಘವನು.
" ಮನದೊಳಗಿಹುದಂ ಪೇಳ್ಕೆ ನಾ ನುಡಿಯುತ್ತಿಹೆನು
ಅಂಜಿಕೆಯಿನಿತಿಲ್ಲದೆ ನುಡಿ, ನಾನೆದೆಯೊಳಗಿಡುವೆಂ."

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯ ಉತ್ತರಕಾಂಡದಲ್ಲಿ
೧೦೩ ನೆಯ ಸರ್ಗ.

೧೦೪ ನೆಯ ಸರ್ಗ

ಇಂತವರಿರೆ ನುಡಿದಾಡುತ, ಬಂದಂ ದೊರೆಮನೆಗೆ
ಭಗವಾನ್ ಋಷಿ ದುರ್ವಾಸಂ ರಾಮನ ಕಾಣಲ್ಕೆ.
ಆ ಋಷಿಸತ್ತಮ ಲಕ್ಷ್ಮಣನೆಡೆಗೈದಿಂತೆಂದಂ :
" ರಾಮನ ತೋರಿಸು ಬೇಗನೆ ಕಜ್ಜಂ ಬಹಳುಂಟು "
ಮುನಿಯೊರೆದುದನಾಲಿಸಿ ಪರವೀರಹ ಲಕ್ಷ್ಮಣನು
ಮಹಾತ್ಮನಾತಗೆ ಮಣಿದೀ ತೆರದೊಳು ಪಡಿನುಡಿದಂ :
" ಭಗವನ್, ಏಂಕಜ್ಜವೇಂಬಯಕೆ ಎಸಕವದೇನು ?
ವ್ಯಗ್ರಂ ರಾಮಂ, ಸಮಯವ ಪಾಲಿಸೆ ಕೋರುವೆನು "
ಆದನಾಲಿಸಿ ಋಷಿ ಶಾರ್ದೂಲಂ ಕೋಪದಿ ಕದಡಿ
ಕಣ್ಣಿಂ ಸುಡುವೊಲು ನೋಡುತ ಲಕ್ಷ್ಮಣಗಿಂತೆಂದಂ :
" ಈ ಕ್ಷಣದೊಳೆ ನಾ ಬಂದಿಹುದಂ ರಾಮುಂಗರುಹು.

ಈಗಳೆ ನನ್ನಾಗಮನವ ರಾಮಂಗರುಹದೊಡೆ
ಶಪಿಸುವೆ ನಾಡಂ ಹೊಳಲಂ ನಿನ್ನಂ ರಾಮನುಮಂ
ಅಂತೆಯೆ ಭರತನ ನಿಮ್ಮಯ ಸಂತತಿಯೆಲ್ಲವನೂ.
ತಡೆದಿಡಲಾರೆನು ಮತ್ತೀ ಕೋಪವನೆದೆಯೊಳಗೆ"
ಇಂತಾ ಮಹಾತ್ಮ ನುಡಿದಾ ಘೋರದ ನುಡಿಕೇಳಿ
ತನ್ನಿಶ್ಚಿತವಂ ಲಕ್ಷ್ಮಣನರಿತೀ ತೆರ ಬಗೆದಂ:
"ಒಬ್ಬನೆ ಸಾವೆಂ, ಎಡೆಗೊಡೆ ಸರ್ವವಿನಾಶನಕೆ"
ಮನದೊಳು ನಿಶ್ಚಯಿಸೀ ಪರಿ, ರಾಘವಗರುಹಿದನು.
ಲಕ್ಷ್ಮಣನೊರೆದುದನಾಲಿಸಿ, ಕಾಲನ ಬೀಳ್ಕೊಟ್ಟು
ಬೇಗದಿ ಹೊರಬಂದತ್ರಿಯ ಮಗನಂ ದೊರೆ ಕಂಡಂ.
ತೇಜದೊಳುರಿವಾ ಮಹಾತ್ಮಗಭಿವಂದಿಸಿ ರಾಜಂ
'ಕಜ್ಜಂ ತಮಗೇನೆನ್ನಿಂ' ದೆಂದನು ಕೈಮುಗಿದು.
ರಾಘವ ಬೆಸಗೈದುದನಾಲಿಸಿ ಮುನಿವರ ಪ್ರಭುವು
ಪಡಿನುಡಿದಂ ಋಷಿ ದುರ್ವಾಸಂ ರಾಮುಗೆ ಇಂತು:
"ಧರ್ಮವತ್ಸಲ, ನನಗಿಂದಿಗೆ ಸಾಸಿರ ವರ್ಷಂ
ಭೋಜನವಣಿಯಾದುದ ಬಯಸುವೆ ನಿನ್ನಿಂ"
ಆ ನುಡಿಯಾಲಿಸುತಾದನು ರಾಮಂ ಪ್ರೀತಮನಂ
ಅಣಿಯೂಟವನುಣಬಡಿಸಿದನಾ ಮುನಿಮುಖ್ಯಂಗೆ.
ಆ ಅನ್ನವನಮೃತೋಪಮವಂ ಮುನಿವರನುಂಡು
ಲೇಸೆನ್ನುತ ರಾಮುಗೆ, ನಡೆದಂ ತನ್ನಾಶ್ರಮಕೆ.
ಮುನಿಯೈದಲು ತನ್ನಾಶ್ರಮವಂ ಲಕ್ಷ್ಮಣನಣ್ಣಂ
ಕಾಲನ ನುಡಿಗಳ ನೆನೆಯುತ ಮನದೊಳು ಅಳಲಾಂತಂ.
ದುಃಖದಿ ಕಡುನೊಂದಾ ಘೋರದ ನೋಟವ ನೆನೆದು
ಮೊಗತಗ್ಗಿಸಿ ಕೊರಗಿಡಿದರೆ ನುಡಿಯಿಲ್ಲದೊಲಾದಂ.
ಬಳಿಕಾ ಕಾಲನ ನುಡಿಗಳ ಮನದೊಳು ನಿಶ್ಚಯಿಸಿ
ಇಂತಿರದೆನ್ನುತ ಸುಮ್ಮನೆಯಿದ್ದನು ಮಹಯಶನು.

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯ ಉತ್ತರ ಕಾಂಡದಲ್ಲಿ
೧೦೫ ನೆಯ ಸರ್ಗ.

೧೦೬ ನೆಯ ಸರ್ಗ

ಬಲು ಕೊರಗೊಳು ಮೊಗ ತಗ್ಗಿಸಿ ದಿನಚಂದ್ರನವೊಲಿಹ
ರಾಮುಗೆ ಮುದದಿಂ ಲಕ್ಷ್ಮಣನೆಂದನು ಸವಿಮಾತಂ:
"ವೀರನೆ, ನೀ ಸಂತಪಿಸಲು ತರವಲ್ಲೈ ನಿನಗೆ.
ಈ ತೆರದೀ ಕಾಲದ ಗತಿ ಮೊದಲೊಳೆ ನಿರ್ಬದ್ಧಂ
ಸೌಮ್ಯನೆ, ಅಳುಕದೆ ನನ್ನಂ ಕೊಲು, ಪಾಲಿಸು ನುಡಿಯಂ.
ನರಕಕೆ ಸಲುವರು, ಕಾಕುತ್ಸ್ಥನೆ, ನುಡಿಗೆಟ್ಟವರು
ಒಲವಿರೆ ನನ್ನೊಳನುಗ್ರಹವಿರೆ ನನ್ನಂ ಕೊಲ್ಲು
ಇನಿತೂ ಅಳುಕದೆ, ರಾಘವ; ಪಾಲಿಸು ಧರ್ಮವನು."
ಲಕ್ಷ್ಮಣನಿಂತೆನೆ ರಾಮಂ ಚಲಿತೇಂದ್ರಿಯನಾಗಿ
ಮಂತ್ರಿ ಪುರೋಹಿತರಂ ಕರೆತರಿಸಿದನಾಯೆಡೆಗೆ
ನಡೆದುದನೊರೆದಂ ದಶರಥಸುತನವರ್ಗಳ ನಡುವೆ
ದುರ್ವಾಸನ ಬರವಂ ಮೇಣ್ ತವಸಿಯ ಪೂಣ್ಕೆಯನು.
ಆಲಿಸಿ ಸುಮ್ಮನೆ ಕುಳಿತರು ಸಚಿವರುಪಾಧ್ಯಾಯರ್.
ಆದೊಡೆ ವಸಿಷ್ಠನೀ ಪರಿ ನುಡಿದಂ ಮಾತೇಜಂ:
"ಕಂಡೆಂ ನವಿರೆಬ್ಬಿಸುವೀ ಕ್ಷಯವಂ ನಿಮ್ಮದನು,
ನಿನ್ನಿಂ ಲಕ್ಷ್ಮಣ ಬೇರ್ಪಡುವುದ, ಮಾಜಸದವನೇ.
ತೊರೆ ಇವನಂ, ಕಾಲಂ ಬಲವಾನ್, ಪೊರೆ ಪೂಣ್ಕೆಯನು.
ಪ್ರತಿಜ್ಞೆ ಕೆಡುವೊಡೆ ಧರ್ಮಂ ಸಲುವುದು ವಿಲಯಕ್ಕೆ.
ಕೆಡೆ ಧರ್ಮಂ ಕೆಡುವುದು ಸಚರಾಚರ ತ್ರೈಲೋಕ್ಯಂ
ದೇವರ್ಷಿಗಣಂ ಸರ್ವಂ; ಸಂದೆಗವಿಲ್ಲಿಲ್ಲ.
ಮೂಲೋಕವ ಕಾಪಿಡೆ, ಲಕ್ಷ್ಮಣನಿಂ ಹೊರತಾಗಿ
ಹೆದುಳಂಗೊಳಿಸಿಂದೀ ಜಗವಂ, ನರಶಾರ್ದೂಲ."
ಧರ್ಮಾರ್ಥದಿ ನೆರೆದಾ ನುಡಿಯಂ ನೆರವಿಯ ನಡುವೆ
ಆಲಿಸಿ ರಾಮಂ ಸೌಮಿತ್ರಿಯ ಕುರಿತಿಂತೆಂದಂ:
"ತೊರೆವೆನು ನಿನ್ನಂ ಲಕ್ಷ್ಮಣ, ಧರ್ಮಂ ಕೆಡದಿರಲಿ
ತ್ಯಾಗವೊ ವಧೆಯೋ ವಿಹಿತಂ ಸಾಧುಗೆ, ಸಮವೆರಡುಂ."

ಈ ತೆರ ನುಡಿಯಲು ರಾಮಂ, ಕಣ್ಣೊಳು ನೀರ್ತಂದು
ಬೇಗದಿ ನಡೆದನು ಲಕ್ಷ್ಮಣ ತನ್ನಯ ಮನೆ ಹೊಗದೆ.
ಸರಯೂ ದಡಕವನೈದುತ, ಮುಟ್ಟುತ, ಕೈಮುಗಿದು
ಕರಣಗಳೆಲ್ಲವ ಬಿಗಿಹಿಡಿದುಸಿರನು ಬಿಡದಿದ್ದಂ.
ಬಿಗಿದುಸಿರಿನ ಯೋಗಿಯ ಮೇಲಪ್ಸರೆಯರು ಶಕ್ರಂ
ಋಷಿಗಣದೊಡನಮರರ್ ತಾವೆಲ್ಲರು ಸುರಿದರು ಸುಮವ.
ಮನುಜರಾರು ಕಾಣದಂದ ಮಹಾಬಲನ ಮೈಯೊಡನೆ
ಎತ್ತುತ ಲಕ್ಷ್ಮಣನಂ ಶಕ್ರಂ ಹೊಕ್ಕನು ದಿವವ.
ಬಳಿಕ ಹರಿಯ ಚತುರ್ಭಾಗವೈತಂದುದ ಕಂಡು
ಸುರೋತ್ತಮರು ಮಹರ್ಷಿಗಳು ಪೂಜಿಸಿದರು ಮುದದಿ.

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯದ ಶ್ರೀಮದ್ರಾಮಾಯಣದ
ಉತ್ತರಕಾಂಡದಲ್ಲಿ ೧೦೬ ನೆಯ ಸರ್ಗ.

ಸರಯೂಪ್ರವೇಶಂ

ಉತ್ತರಕಾಂಡದ ೧೦೭ ನೆಯ ಸರ್ಗ

ತೊರೆದು ರಾಮ ಸೌಮಿತ್ರಿಯ ದುಃಖಶೋಕದಿಂ ತುಂಬಿ
ಪುರೋಹಿತನ ಮಂತ್ರಿಗಳನು ನೈಗಮರನು ಕುರಿತೆಂದಂ :
" ಇಂದು ಧರ್ಮವತ್ಸಲನಿಗೆ ಭರತನಿಗಭಿಷೇಚಿಸುತ
ಅಯೋಧ್ಯೆಯೊಡೆಯಗೆ ವೀರಗೆ, ಬಳಿಕ ಬನಕೆ ನಾ ನಡೆವೆ.
ಅಣಿಗೈಯಿರಿ ವೇಳೆ ಮೀರದಂದದಿ ಸಂಭಾರಗಳ
ಲಕ್ಷ್ಮಣನೆಲ್ಲಿಗೊ ಅಲ್ಲಿಗೆ ಇಂದೀಗಳೆ ನಡೆವೆನು ನಾ."
ನುಡಿಯ ಕೇಳಿ ರಾಘವನ ಪ್ರಜೆಗಳೆಲ್ಲ ಬಲುದುಗುಡದಿ
ಗತಸತ್ವರ ತೆರನಾದರು ತಲೆಯ ನೆಲಕೆ ಸೋಕಿಸುತ.
ಅರಿವಳಿದನು ಭರತನಂದು ಕೇಳಿ ರಾಮನೊರೆದುದನು
ದೊರೆತನವನು ತೆಗಳಿದನವ ನುಡಿಯನಿದನು ನುಡಿದನವ :
" ಸತ್ಯದ ಮೇಲಾಣೆಯಿಡುವೆ ಸ್ವರ್ಗಭೋಗಗಳ ಮೇಲೆ
ರಘುನಂದನ, ರಾಜ್ಯದಾಸೆಯೆನಗಿಲ್ಲವು ನಿನ್ನುಳಿದು.
ಕುಶಲವರಿವರಂ, ರಾಜ, ಅಭಿಷೇಚಿಸು, ಮನುಜಾಧಿಪ ;
ವೀರಕುಶನ ಕೋಸಲದೊಳು ಲವನನಂತೆ ಉತ್ತರದೊಳು.
ಹೋಗಲಿ ಶತ್ರುಘ್ನನೆಡೆಗೆ ಚುರುಕುನಡೆಯ ದೂತರವರು
ಅರುಹಲು ನಮ್ಮೀ ಗಮನವ ತಳುಗದೆ ಬೇಗನೆ ಅವಗೆ."
ಕೇಳಿ ಭರತನೆಂದುದನು, ಮೊಗ ತಗ್ಗಿಸಿ ದುಃಖದೊಳಗೆ
ಸಂತಪಿಸುವ ಪುರಜನರನು ಕಾಣುತ ವಸಿಷ್ಠನೆಂದನು :
" ವತ್ಸ, ರಾಮ ನೋಡಿವರನು ನೆಲಕಿಳಿದೀ ಪ್ರಜೆಗಳನು
ಇವರಿಷ್ಟದ ಕಜ್ಜವರಿತು, ಒಲ್ಲದುದನು ಗೈಯದಿರೈ"
ಇಂತೊರೆಯೆ ವಸಿಷ್ಠ ಪ್ರಜೆಯನೆಬ್ಬಿಸುತಲಿ ಕಾಕುತ್ಸ್ಥ

ಆವರೆಲ್ಲರ ಕುರಿತೆಂದನು " ಏಂಗೈಯ್ಯುವುದಾನೀಗ."
ಬಳಿಕ ಪ್ರಜೆಗಳೆಲ್ಲ ನುಡಿದರೀ ಮಾತನು ರಾಘವಗೆ:
" ಎಲ್ಲಿಗೆ ನಡೆವೆಯೊ ರಾಮ ಅಲ್ಲಿಗೆ ಬೆನ್ನೊಳೆ ಬಹೆವೈ.
ಪ್ರೀತಿಯಿರಲು ಪೌರರೊಳು ಎಣೆಯಿಲ್ಲದ ನೇಹ ನಿನಗೆ
ಸತಿಸುತರೊಂದಿಗೆ ನಡೆವ ಸತ್ಪಥದೊಳು ಕೂಡಿಯೇ.
ತಪೋವನಕೊ ಕಟ್ಟಡವಿಗೊ ಹೊಳೆಗೋ ಹೆಗ್ಗಡಲಿಗೋ
ತ್ಯಾಜ್ಯರಲ್ಲದಿರಲು ನಾವು ನಡಸೆಮ್ಮನು ನಮ್ಮೊಡೆಯ.
ಇದುವೆ ನಮಗೆ ಪರಮ ಪ್ರೀತಿ ಇದುವೆ ನಮಗೆ ಪರಮ ವರ
ರಾಮ, ನಿನ್ನ ಬೆನ್ನ ಹಿಂದೆ ಬರುವುದರೊಳೆ ಒಲವೆಮಗೆ.
ಎಡೆಬಿಡದೆಮ್ಮೆದೆ ತುಂಬಿದೆ ಪ್ರೀತಿ ನಿನ್ನ ಹಿಂಬಾಲಿಸೆ."
ಪೌರರ ದೃಢಭಕ್ತಿಯನು ನಿಶ್ಚಯವನು ತನ್ನದನು
ರಾಘವನಾದಿನ ಕಾಣುತ ಅಂತೆಯಾಗಲೆಂದೊರೆದ.
ಕೋಸಲದೊಳು ವೀರಕುಶನ ಅಂತೆ ಲವನನುತ್ತರದೊಳು
ಅಭಿಷೇಚಿಸುತಾ ಮಹಾತ್ಮರಿಬ್ಬರನೂ ರಾಘವಂ
ಅಭಿಷಿಕ್ತರ ಸುತರನವರ ತನ್ನ ತೊಡೆಯೊಳೇರಿಸುತ
ಬಾರಿಬಾರಿಯಪ್ಪಿ ಮೂಸಿ ಮೂಸಿ ನೋಡಿ ಮುಂದಲೆಯ
ಕೊಟ್ಟನು ಸಾಸಿರತೇರಂ ದಶಸಹಸ್ರನಾಗಗಳಂ
ಹತ್ತುಹತ್ತುನೂರು ಕುದುರೆ ರಾಶಿ ಹೊನ್ನನೊಬ್ಬೊಬ್ಬಗು.
ಬಹುರತ್ನರ ಬಹುಧನರ ಹೃಷ್ಟಪುಷ್ಟಜನಾಶ್ರಯರ
ಅಣ್ಣತಮ್ಮ ಲವಕುಶರನು ತಂತಮ್ಮೂರಿಗೆ ಕಳುಹಿದ.
ಇಂತಭಿಷೇಚಿಸಿ ವೀರರನು ತಮ್ಮೂರೊಳು ನೆಲೆಗೊಳಿಸಿ
ಆ ಮಹಾತ್ಮ ಶತ್ರುಘ್ನನ ಬಳಿಗಟ್ಟಿದ ದೂತರನು.

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯ ಶ್ರೀಮದ್ರಾಮಾಯಣದ
ಉತ್ತರಕಾಂಡದಲ್ಲಿ ೧೦೭ನೆಯ ಸರ್ಗ.

೧೦ಲನೆಯ ಸರ್ಗ

ರಾಮನ ಮಾತನು ಕೊಂಡಾ ದೂತರಲಘುವಿಕ್ರಮರು
ಬಳಿಯೊಳು ತಂಗದೆ ಬೇಗದಿ ಮಧುರೆಯತ್ತ ಸಾರಿದರು.
ಮೂರು ಹಗಲು ಮೂರಿರುಳೊಳು ಮಧುರೆಯ ಸೇರುತ ಅವರು
ಶತ್ರುಘ್ನಗೆ ಬಿನ್ನವಿಸಿದರಲ್ಲಿ ನಡೆದುದೆಲ್ಲವನು;
ಲಕ್ಷ್ಮಣನಂ ತೊರೆದುದನು ರಾಮಗೈದ ಪ್ರೂಣ್ಕೆಯನು
ಪಟ್ಟಗಟ್ಟಿದುದ ಸುತರಿಗೆ ಪೌರರು ಹಿಂಬಾಲಿಪುದ.
“ ವಿಂಧ್ಯಗಿರಿಯ ತಪ್ಪಲಲ್ಲಿ ಹೊಳಲಕುಶಾವತಿಯ ರಚಿಸಿ
ಕುಶನಿಗಿತ್ತನಾ ನಗರಿಯ ಧೀಮಂತನು ರಾಘವ.
ಹೆಸರಾಂತಾ ಶ್ರಾವಸ್ತಿಯ ಚೆಂದುಳ್ಳದ ಲವನಿಗಿತ್ತ.
ರಾಮಭರತರಯೋಧ್ಯೆಯನು ಜನರಿಲ್ಲದೊಲಾಗಿಸುತ
ಸ್ವರ್ಗಕೆ ನಡೆವುದ್ಯೋಗವ ಕೊಂಡಿಹರಾ ಮಹಾರಥರು ”—
ಇಂತೆಲ್ಲವ ಬಿನ್ನವಿಸುತ ಮಹಾತ್ಮ ಶತ್ರುಘ್ನನಿಗೆ
ಸುಮ್ಮನಾದರಾ ದೂತರು “ದೊರೆ ಬೇಗನೆ ನಡೆ” ಎಂದರು.
ಕುಲದ ನಾಶವೊದಗಿತೆಂಬ ಘೋರ ವಾರ್ತೆಯನು ಕೇಳಿ
ಕರೆತರಿಸಿದ ಪ್ರಜೆಗಳನವ ಪುರೋಹಿತನ ಕಾಂಚನನ.
ರಘುನಂದನನವರಿಗೆಲ್ಲ ಯಥಾವೃತ್ತವರುಹಿದನು
ಮುಂದೆ ತಾನುಮಣ್ಣಂದಿರ ಸಂಗಡ ವಿಷಮಕೆ ಸಲುವುದ.
ಬಳಿಕ ವೀರ ತನ್ನಿಬ್ಬರು ಮಕ್ಕಳಿಗಭಿಷೇಚಿಸಿದ;
ಮಧುರೆಯಾಯ್ತು ಸುಬಾಹುವಿಗೆ ಶತ್ರುಘಾತಿಗಾಯ್ತು ವಿದಿಶೆ.
ಸುತರಿಬ್ಬರಿಗಿಬ್ಭಾಗಿಸಿ ಕೊಟ್ಟು ಮಧುರೆ ಸೈನ್ಯವನು
ಹಣವನಿತ್ತು ಸಾಕಾದುದ, ನೆಲೆಗೊಳಿಸಿದನವರ ನೃಪ.
ಇಂತು ಮಧುರೆಯೊಳು ಸುಬಾಹು ಶತ್ರುಘ್ನ ವೈದಿಶೆಯೊಳು
ರಾಜ್ಯವಾಳಲಿಟ್ಟಯೋಧ್ಯೆಗರಸ ನಡೆದನೊಂದೆ ರಥದಿ.
ಕಂಡನಾ ಮಹಾತ್ಮನವನ ಅಕ್ಷಯಮುನಿಗಳ ಸಂಗಡ
ತೆಳ್ಳ ನಾರುಮಡಿಯನುಟ್ಟು ಬೆಂಕಿಯಂತೆಯುರಿವವನ.
ಬಳಿಕ ರಾಮಗಭಿವಂದಿಸಿ ಕೈಮುಗಿದೊಮ್ಮನದೊಳಗೆ

ಧರ್ಮವನೇ ಚಿಂತಿಸುತಲಿ ಧರ್ಮಜ್ಞನಿಗಿಂತೆಂದನು :
" ಸುತರಿರ್ವರಿಗಭಿಷೇಚನ ಗೈಯುತ ರಘುನಂದನನೆ,
ನಿನ್ನ ಬೆನ್ನ ಹಿಂದೆ ನಡೆಯೆ ಮನಗೈದಿಹೆನೆಂದು ತಿಳಿ.
ಇದಕೆದುರಂ ನುಡಿಯದಿರೈ—ಏಕೆನೆ ನಿನ್ನಾಣತಿಗೆ
ಭಂಗವ ತರೆ—ಆದರೊಳಗೂ ನನ್ನಂಥವ—ಆಶಿಸೆನು."
ಅವನ ದಿಟ್ಟಮನವನರಿತು ರಘುನಂದನ ಇಂತೆಂದನು
" ನಿನ್ನಿಷ್ಟದ ತೆರನಾಗಲಿ " ಎಂದು ರಾಮ ಶತ್ರುಘ್ನಗೆ.
ಅವನ ಮಾತು ಮುಗಿವುದರೊಳೆ ಕಾಮರೂಪಿವಾನರರ
ಋಕ್ಷ ರಾಕ್ಷಸರಸಂಘಗಳಲ್ಲಿ ನೆರೆದವಪರಿಮಿತ.
ಸುಗ್ರೀವನ ಮುಂಗೊಳ್ಳುತ ಬಂದರಲ್ಲಿಗವರೆಲ್ಲರು
ಸರ್ಗದತ್ತ ಸಾರೆ ನಿಂತ ರಾಘವನಂ ಕಾಣ ಬಗೆದು.
ದೇವ ಸುತರು ಋಷಿಪುತ್ರರು ಗಂಧರ್ವರ ತನುಜಾತರು
ರಾಮನಳಿವ ಸುದ್ದಿಯರಿತು ಅವರೆಲ್ಲರು ನೆರೆದರಲ್ಲಿ.
ರಾಮುಗೆಂದರಭಿವಂದಿಸಿ ವಾನರ ರಾಕ್ಷಸರೆಲ್ಲರು
" ನಿನ್ನ ಬೆನ್ನ ಹಿಂದೆ ಬರಲು ಮನವಗೈದು ಬಂದಿಹೆವೈ
ಪುರುಷೋತ್ತಮ ಕಾಕುತ್ಸ್ಥನೆ, ನಮ್ಮನುಳಿದು ಹೊರಡುವೊಡೆ
ಯಮದಂಡವನೆತ್ತಿ ನೀನು ನಮ್ಮ ಹೊಯ್ದ ತೆರವಹುದು "
ಅವರಿಂತೆನೆ ಕಾಕುತ್ಸ್ಥನು ಅಂತೆಯಾಗಲೆಂದ ತಾನೆ.
ಇದರ ನಡುವೆ ಮಹಾಬಲನು ಸುಗ್ರೀವನು ಉಚಿತವರಿತು
ಮಣಿಯುತ ರಾಮಗೆ ವೀರಗೆ ವಿಜ್ಞಾಪಿಸಲನುವಾದನು :
" ಪಟ್ಟಗಟ್ಟಿಯಂಗದನಿಗೆ ಬಂದಿಹೆನೈ ನರೇಶ್ವರನೆ
ನಿನ್ನ ಬೆನ್ನ ಹಿಂದೆ ಬರಲು ಮನಮಾಡಿಹೆನೆಂದು ತಿಳಿ"
ಆತನ ನೇಹವ ನೆನೆಯುತ ವಾನರೇಂದ್ರಗವನೊರೆದಂ :
" ಕೇಳು, ಗೆಳೆಯ ಸುಗ್ರೀವ, ನಿನ್ನ ಬಿಟ್ಟು ಹೊರಡೆನು ನಾ
ದೇವಲೋಕಕೊಂದಕೇಕೆ ಮಹಾ ಪರಮಪದಕಾದರು "
ಬಳಿಕ ಮಹಾಯಶನು ರಾಕ್ಷಸೇಂದ್ರ ವಿಭೀಷಣಗೆ ನುಡಿದ:
" ಎಲ್ಲಿ ತನಕ ಪ್ರಜೆಗಳಿಹರೋ ಅಲ್ಲಿ ತನಕ, ವಿಭೀಷಣ,

ರಾಕ್ಷಸೇಂದ್ರ, ಮಹಾವೀರ್ಯ, ಲಂಕೆಯೊಳಗೆ ನೆಲೆಸಿರು ನೀ
ಚಂದ್ರಸೂರ್ಯರಿರುವ ತನಕ, ಈ ಮೇದಿನಿಯಿರುವ ತನಕ,
ನನ್ನೀ ಕತೆ ಜಗದೊಳಿರುವ ತನಕ ನಿನಗೆ ರಾಜ್ಯವಿಲ್ಲಿ.
ಸಖನೆಂದಾಣತಿಯಿತ್ತೆನು ನಡಸೆನ್ನೀ ಶಾಸನವನು.
ಪ್ರಜೆಗಳ ಪಾಲಿಸು ಧರ್ಮದಿ, ಇದಕೆದುರನು ನುಡಿಯದಿರು.
ಇನ್ನುಮುಂಟು ನಿನಗೊರೆವುದು, ರಾಕ್ಷಸೇಂದ್ರ, ಮಹಾಮತಿ,
ಇಕ್ಷ್ವಾಕುವಿನನ್ವಯದ ಜಗನ್ನಾಥನಾರಾಧಿಸು
ವಾಸವಾದಿಸುರರೆಲ್ಲರ ಪೂಜೆಗೊಳ್ಳತಕ್ಕುದನು."
ಅಂತೆಯಾಗಲೆಂದು ರಾಮನಾಜ್ಞೆಯ ಮನದೊಳು ನೆನೆದು
ರಾಕ್ಷಸೇಂದ್ರ ವಿಭೀಷಣನು ತಳೆದನವನ ನುಡಿಗಳನು.
ಇಂತವಗೆನ್ನುತ ರಾಘವ ಹನುಮಂತನ ಕುರಿತೆಂದಂ :
" ಬಾಳಲು ಮನಗೈದವ ನೀ, ಬಯಲಾಗಿಸದಿರು ಪೂಣ್ಕೆಯ
ನನ್ನ ಕತೆಗಳೆಲ್ಲಿವರೆಗೆ ನಡೆವುವೋ ಈ ಲೋಕದೊಳು
ಆವರೆಗಿರು ಪ್ರೀತನಾಗಿ ನನ್ನ ನುಡಿಯ ನಡೆಗೊಳಿಸುತ"
ಇಂತೊರೆಯೆ ಮಹಾತ್ಮ ರಾಮ ಹನುಮಂತಗೆ ಹರೀಶ್ವರಗೆ
ಪರಮಹರ್ಷವಾಂತನವನು, ಬಿನ್ನವಿಸಿದನಿಂತು ನುಡಿಯ :
" ಎಲ್ಲಿವರೆಗೆ ಜಗದಿ ನಿನ್ನ ಪಾವನಕಥೆ ನಡೆವುದೋ
ಅಲ್ಲಿವರೆಗೆ ನಾನಿಲ್ಲಿಹೆ ನಿನ್ನ ಮಾತ ನಡೆಸುತ"
ಬಳಿಕ ವೃದ್ಧ ಬ್ರಹ್ಮಪುತ್ರ ಜಾಂಬವತನ ಅವನ ಜತೆಗೆ
ಮೈಂದ ದ್ವಿವಿದ ಜಾಂಬವತನ ಸುತರೈವರ ಕುರಿತೆಂದನು
" ಎಂದಿಗಿಲ್ಲಿ ಕಲಿಬಹನೋ ಆವರೆಗಿಲ್ಲಿರಿಯೆಂದಿಗು"
ಇಂತೊರೆದವರಿಗೆ ರಾಘವ, ಸರ್ವಋಕ್ಷವಾನರರಿಗು
ನುಡಿದನಿಂತು " ಹೊರಡಿರಿನ್ನು ಬಯಸಿದಂತೆ ನನ್ನೊಂದಿಗೆ."

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯ ಶ್ರೀಮದ್ರಾಮಾಯಣದ
ಉತ್ತರಕಾಂಡದಲ್ಲಿ ೧೦೮ನೆಯ ಸರ್ಗ.

೧೦೯ ನೆಯ ಸರ್ಗ

ಇರುಳು ಕಳೆದು ಬೆಳಗಾಗಲು ಪೃಥುವಕ್ಷನು ಮಹಾಯಶನು
ರಾಮ ಕಮಲದಳಲೋಚನ ಪುರೋಹಿತನ ಕುರಿತೆಂದನು :
“ ದ್ವಿಜರ ಜತೆಗೆ ಮುಂದೆ ಸಾಗಲುರಿಯಿಂದೆಸೆವಗ್ನಿಹೋತ್ರ,
ವಾಜಪೇಯದಾತಪತ್ರ, ಸಿಂಗರಿಸುತ ಮಹಾಪಥವ.”
ಬಳಿಕ ಮಹಾಪ್ರಸ್ಥಾನಿಕ ವಿಧಿಯನು ನೆರವೇರಿಸಿದನು
ವಸಿಷ್ಠನೊಂದನು ಬಿಡದೆಯೆ ವಿಧಿಪೂರ್ವಕ ತೇಜಸ್ವಿ.
ಸೂಕ್ಷ್ಮಾಂಬರಧಾರಿಯಾಗಿ ಪರಂಬ್ರಾಹ್ಮವುಚ್ಚರಿಸುತ
ಕರಗಳಲ್ಲಿ ಕುಶವ ಹಿಡಿದು ರಾಮ ನಡೆದ ಸರಯುವಿಗೆ.
ಆದನಿದನೇನನು ನುಡಿಯದೆ ಬಳಿಯೊಳು ಸುಮ್ಮನೆ ನಡೆದನು
ನಿಃಸುಖನಂದಾ ಮನೆಯಿಂ ಕಿರಣಮಾಲಿಯಂತೆಸೆದು.
ರಾಮನ ಬಲಪಾರ್ಶ್ವದೊಳು ಎಡೆಗೊಂಡಳು ಸಿರಿಪದ್ಮೆ
ಅಂತೆಡದೊಳು ಮಹೀದೇವಿ, ದೃಢೋದ್ಯಮವು ಮುಂದುಗಡೆ.
ಬಲುಬಗೆ ಬಾಣಗಳಂತೆಯೆ ಉತ್ತಮಧನು ನಿಡಿದಾದುದು
ಸರ್ವಾಯುಧಗಳು ನಡೆದುವು ಮನುಜರಂತೆ ಮೈವೆತ್ತು.
ಬ್ರಾಹ್ಮಣರೊಲು ವೇದಂಗಳು ಸರ್ವರಕ್ಷೆ ಗಾಯತ್ರಿ
ಓಂಕಾರ ವಷಟ್ಕಾರ ಎಲ್ಲ ರಾಮನನುಸರಿಸಿ.
ಋಷಿಗಳು ಮಹಾತ್ಮರಂತೆಯೆ ಎಲ್ಲ ಮಹೀಸುರರ ಕೂಡಿ
ನಡೆದರವನ ಹಿಂದೆ ದಿವದ ಕದವ ತೆರದ ಮಹಾತ್ಮನ.
ನಡೆವಾತನ ಹಿಂದೆ ನಡೆದರಂತವುರದ ಹೆಂಗಳೆಲ್ಲ
ಮುದಿಯರೆಳೆಯರೂಳಿಗದವರಾಳು ಕೊಜ್ಜೆಗಳನು ಕೂಡಿ
ಜತೆಗೆ ಬರಲು ಶತ್ರುಘ್ನ, ಭರತ ಸಾಗ್ನಿಹೋತ್ರನಾಗಿ
ಅಂತವುರದ ಮಂದಿಯೊಡನೆ ರಾಮನ ದಾರಿಯ ಹಿಡಿದನು.
ಇಂತು ಆ ಮಹಾತ್ಮರೆಲ್ಲ ಬಂದರಗ್ನಿಹೋತ್ರದೊಡನೆ
ಹೆಂಡಿರು ಮಕ್ಕಳ ಸಂಗಡ ಮಹಾಮತಿಯ ಬೆಂಗಡೆಯೆ.
ಪುತ್ರಬಂಧುಪಶುಗಳೊಡನೆ ಸಚಿವರಂತೆ ಭೃತ್ಯವರ್ಗ
ಸಪರಿವಾರರಾಗಿ ನಡೆದರತಿ ಹರ್ಷದಿ ರಾಮನೊಡನೆ.

ಹೃಷ್ಟಪುಷ್ಟಜನ ತುಂಬಿದ ಪ್ರಜೆಗಳ ನೆರವಿಯದೆಲ್ಲವು
ರಾಮ ನಡೆಯೆ ಹಿಂದೆ ಬಂದರವನ ಗುಣಕೆ ಮರುಳಾಗಿ.
ಪಾಪವಳಿದು ಸಮ್ಮುದದೊಳು ಪಕ್ಷಿ ಬಂಧು ಪಶುಗಳೊಡನೆ
ಗಂಡಸು ಹೆಂಗುಸರೆಲ್ಲರು ರಾಮನ ಹಿಂಬಾಲಿಸಿದರು.
ಮಿಂದು ಮುದದಿ ವಾನರರು ನಲಿವೆಳೆ ಮಕ್ಕಳ ಸಂಗಡ
ಕಿಲಕಿಲ ದನಿಯಂ ಗೈಯುತ ರಾಮನ ಹಿಂಬಾಲಿಸಿದರು.
ದೀನನೊಬ್ಬನಿಲ್ಲವಲ್ಲಿ ನಾಚಿದವನು ದುಃಖಿತನು;
ಹೃಷ್ಟರು ಸಮ್ಮುದಿತರೆಲ್ಲ, ಪರಮಾದ್ಭುತವಾದುದಲ್ಲಿ.
ನೋಡೆ ರಾಮುಗಮನವನು ಬಂದು ನೆರೆದ ನಾಡಜನ
ನೋಡಿದೊಡನೆ ಸ್ವರ್ಗಕೆಂದೆ ಮುದದಿ ನಡೆವರನುಸರಿಸಿ.
ಋಕ್ಷರಕ್ಷವಾನರರು ಪುರದಿ ನೆಲಸಿದೆಲ್ಲ ಮಂದಿ
ದೃಢಭಕ್ತಿಯೊಳೊಂದೆ ಮನದಿ ಬಂದರವನ ಬೆನ್ನುಗಡೆ.
ಕಣ್ಣಿಗೆ ಕಾಣದ ತೆರದೊಳು ನಗರದೊಳಿಹ ಭೂತಂಗಳು
ಸರ್ಗದತ್ತ ನಡೆಯುತಿರುವ ರಾಮನ ಹಿಂಬಾಲಿಸಿದುವು.
ಕಾಕುತ್ಸ್ಥನ ಕಾಣುತ್ತಲೆ ಸ್ಥಾವಿರ ಜಂಗಮವೆಲ್ಲವು
ರಾಮ ನಡೆಯೆ ಅನುವರ್ತಿಸಿ ಬೆಂಗಡೆಯೇ ಬಂದವಲಾ!
ಉಸಿರಾಡುವುದೊಂದು ಕಾಣದಯೋಧ್ಯೆಯೊಳು ಅಣುವಾದರು
ಅಂದು ಜಂತುಜಾತವೆಲ್ಲ ರಾಮನ ಹಿಂಬಾಲಿಸಿದುವು.

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯ ಶ್ರೀ ಮದ್ರಾಮಾಯಣದ ಉತ್ತರ ಕಾಂಡದಲ್ಲಿ ೧೦೯ ನೆಯ ಸರ್ಗ.

೧೧೦ ನೆಯ ಸರ್ಗ

ಇಂತು ಯೋಜನಾರ್ಧ ನಡೆದು ಕಂಡನು ರಘುನಂದನ
ಪಡುವ ಮೊಗಕೆ ಹರಿವ ನದಿಯ ಪುಣ್ಯಸಲಿಲೆ ಸರಯುವನು.
ಬಲುಸುಳಿಗಳ ಆ ಹೊಳೆಯನು ನೃಪನೆಲ್ಲೆಡೆಯನುಸರಿಸಿ
ಪ್ರಜೆಗಳೊಂದಿಗಾ ತಾಣಕೆ ಬಂದ ರಾಮ ರಘುನಂದನ.
ಬಳಿಕ ಆ ಮುಹೂರ್ತದಲ್ಲಿ ಬ್ರಹ್ಮ, ಲೋಕಪಿತಾಮಹನು,

ಬಳಸಿಬಹ ಮಹಾತ್ಮರೊಡನೆ ಸಿಂಗರಗೊಂಡಮರರೊಡನೆ
ನೂರು ಕೋಟಿಯೆಣಿಕೆ ದಿವ್ಯ ವಿಮಾನಗಳು ಬರೆ ಸಂಗಡ
ಬಂದನಲ್ಲಿಗೆಲ್ಲಿ ರಾಮ ದಿವಕೆ ನಡೆವನಾಯೆಡೆಗೆ.
ತೇಜದಿಂದ ತುಂಬಿತು ಬಾನ್ ತಾನೆ ತೇಜವಾದಂತೆ
ಸ್ವಪ್ರಭೆಯಿಂ ಬೆಳಗುತಿರುವ ಪುಣ್ಯಕರ್ಮಸ್ವರ್ಗಿಗಳಿಂ.
ಪುಣ್ಯದೆಲರು ಬೀಸಿತಲ್ಲಿ ಕಂಪುವೆತ್ತು ಸೊಗವಿತ್ತು.
ಬಲ್ಸರಿ ಬೀಳುವುದೋ ಎನೆ ಹೂಮಳೆಗರೆದರು ದೇವರು.
ಅಪ್ಸರೆಯರ ಗಂಧರ್ವರ ನೂರು ಕಹಳೆ ದನಿ ಮೊಳಗಲು
ಮೊದಲಿಟ್ಟನು ಹೆಜ್ಜೆಯಿಡಲು ರಾಮ ಸರಯು ಹೊಳೆಯೊಳಗೆ.
ಆಗಳಂತರಿಕ್ಷದಿಂದ ಪಿತಾಮಹನು ನುಡಿದನಿಂತು
“ ಬಾ ವಿಷ್ಣು, ಲೇಸು ಲೇಸು, ಸುದೈವದಿಂ ಬಂದೆ, ರಾಮ ;
ದೇವರೊಲೆಸೆವೀ ತಮ್ಮರ ಜತೆಗೆ ಸ್ವಂತ ತನುವ ಹೊಗು
ಆವೊಡಲೊಳು ನಿನಗಾಸೆಯೊ ಮಹಾಬಾಹು ಆ ಮೈ ಹೊಗು.
ವೈಷ್ಣವವನೆ, ಇಲ್ಲದಿರಲು ಸನಾತನಾಕಾಶವನೆ.
ನೀ ಅಂಚಿತ್ಯ ಮಹದ್ಭೂತ ಅಕ್ಷಯ ಎಲ್ಲರ ರಕ್ಷಕ
ನೀನೆ, ದೇವ, ಲೋಕಗತಿ ; ನಿನ್ನನರಿತನೊಬ್ಬನಿಲ್ಲ.
ನೀನೆ ಮೊದಲು ಕೈವಿಡಿದಾ ವಿಶಾಲಾಕ್ಷಿ ಮಾಯೆಯುಳಿದು
ಆವ ಮೈಯ ಹೊಗಲಿಚ್ಛೆಯೊ ಆ ಮೈಯನು ನೀನೆ ಹೊಗು.”
ಪಿತಾಮಹನ ನುಡಿಯಾಲಿಸಿ ಮನವ ಮಾಡಿ ಮಹಾಮತಿಯು
ವೈಷ್ಣವತೇಜವ ಹೊಕ್ಕನು ಸಶರೀರಂ ಸಹಾನುಜಂ.
ಬಳಿಕಾ ದೇವನ ದೇವರು ಪೂಜಿಸಿದರು ವಿಷ್ಣುಮಯನ
ಇಂದ್ರನಗ್ನಿ ಮೊದಲುಗೊಂಡು ಸಾಧ್ಯರಂತೆ ಮರುದ್ಗಣ.
ದಿವ್ಯರೆನಿಸುವೆಲ್ಲ ಋಷಿಗಳಪ್ಸರೆಯರು ಗಂಧರ್ವರು
ಗರುಡನಾಗಯಕ್ಷದೈತ್ಯದಾನವರಾಕ್ಷಸರೆಲ್ಲರು
ಆದರು ಪುಷ್ಟರು ಮುದಿತರು ಬಯಕೆಯೆಲ್ಲ ಸಂದವರು.
“ ಲೇಸು ಲೇಸು ” ಎನ್ನೆ ಸುರರು ಗತಕಲ್ಮಷವಾಯ್ತು ದಿವ.
ಬಳಿಕ ವಿಷ್ಣು ಮಹಾತೇಜನೊರೆದನಿಂತು ಪಿತಾಮಹಗೆ:

“ ಸುವ್ರತ, ನೀನೀ ಜನಕೂ ಲೋಕವನೀಯಲು ತಕ್ಕುದು
ನೇಹದಿಂದಲೆನ್ನ ಜತೆಗೆ ಬಂದಿಹರೀ ಜಸವಂತರು
ಭಕ್ತರಿವರು, ಭಜಿತವ್ಯರು, ಎನಗೆಂದಸುವುಳಿದವರು.”
ವಿಷ್ಣು ವಿನಾ ನುಡಿಯಾಲಿಸಿ ಬ್ರಹ್ಮ, ಪ್ರಭು, ಲೋಕಗುರು,
ಇಂತೆಂದನು : “ ಸಂತಾನಿಕ ಲೋಕಗಳನು ಪಡೆವರಿವರು ;
ನಿನ್ನನೆ ನೆನೆಯುತಲಸುವನು ಭಕ್ತಿಯಿಂದ ತೊರವ ಮಿಗಕೆ
ಎಲ್ಲ ಬ್ರಹ್ಮಗುಣದಿಕೂಡಿ ಬ್ರಹ್ಮಲೋಕದಾಚೆಗಿರುವ
ಸಂತಾನದಿ ನೆಲೆಯುವಕೆ.” ಇಂತೆನೆ ವಾನರ ಋಕ್ಷರು
ಸುರರಿಂದೊಗೆದಮರಸುತರು ಸೇರಿದರಾಯಾ ತವರಂ
ದೇವರೆಲ್ಲ ಕಾಣುವಂದೆ ತಮ್ಮ ತಮ್ಮ ತಂದೆಗಳಂ :
ಅಂತೆ ಹೊಕ್ಕನಾದಿತ್ಯನ ಮಂಡಲವಂ ಸುಗ್ರೀವಂ.
ದೇವೇಶನ ನುಡಿಯಾಲಿಸಿ ಗೋಪ್ರತಾರದೆಡೆಗೆ ಬಂದ
ಎಲ್ಲರು ಸರಯುವ ಹೊಕ್ಕರು ಹರ್ಷದ ಕಂಬನಿಯುದುರೆ.
ಅಲ್ಲಿ ಮುಳುಗಿ ಹೃಷ್ಟನಾಗಿ ಆವನಸುವ ತೊರೆದನವಂ
ಮಾನುಷದೇಹವ ನೀಗುತಲೇರಿದನು ವಿಮಾನವನು.
ಸರಯೂ ನದಿಯೊಳು ಮುಳುಗಿದ ಎಲ್ಲ ಜಂತು ಜಾತಗಳೂ
ಹೊಳೆವ ಮೈಗಳಿಂದ ಕೂಡಿ ನಡೆದುವು ದಿವಕೈತಂದು ;
ದೇವರಂತೆ ಎಸೆದುವವು ದಿವ್ಯದೇಹಗಳನು ಧರಿಸಿ.
ಸರಯೂ ಹೊಳೆಯನು ಸೇರುತ ಸ್ಥಾವರ ಜಂಗಮವೆಲ್ಲವು
ಆ ನೀರಿನ ಮೀಹದಿಂದ ದೇವಲೋಕಕ್ಕೈದಿದುವು.
ಅಲ್ಲಿಗೆ ಬಂದಾ ಋಕ್ಷರು ರಾಕ್ಷಸರೂ ವಾನರರೂ
ನೀರೊಳು ಮೈಗಳ ಚೆಲ್ಲುತ ಹೊಕ್ಕರವರು ಸ್ವರ್ಗವನು.
ಬಂದವರೆಲ್ಲರ ದಿವದೊಳು ನೆಲೆಗೊಳಿಸುತ ಲೋಕಗುರು
ಬಳಿಕ ನಡೆದ ಮಹಾದಿವಕೆ ಹೃಷ್ಟಮುದಿತ ಸುರರೊಡನೆ.

ಇಂತು ಆರ್ಷ ವಾಲ್ಮೀಕೀಯ ಆದಿಕಾವ್ಯ ಶ್ರೀಮದ್ರಾಮಾಯಣದ
ಉತ್ತರಕಾಂಡದಲ್ಲಿ ೧೧೦ ನೆಯ ಸರ್ಗ.

ಶುದ್ಧಿ ಪತ್ರಿಕೆ

ಪುಟ	ಸಾಲು	ಅಶುದ್ಧ	ಶುದ್ಧ
೫	೩	ದೈತರನು	ದೈತ್ಯರನು
೫	೩	ಕೊಂದುದಾಯಿತ್ತು	ಕೊಂದುದಾಯಿತು
೮	೮–೯	ಹೊಡೆದರೊಬ್ಬಬ್ಬೊರನಂದ	ಹೊಡೆದರೊಬ್ಬರೊಬ್ಬರನಂದು
೧೧	೩	ರುಕ್ಮಿಣೀ	ರುಕ್ಮಿಣಿಯು
೧೨	೮	ಪಂಜನದ	ಪಂಚನದ
೧೪	೨೪	ಬರಿಗೈಯೊಳಿಟ್ಟದೆಯು	ಬರಿಗೈಯೊಳೆಟ್ಟದೆಯು
೧೬	೧	ಅಂಗರಾಜನದಂತೆ	ಅಂಗರಾಜನುಮಂತೆ
೧೬	೨೩	ಅಳವಿಗೂ	ಅಳಿವಿಗೂ
೧೭	೬	ಕೃಷ್ಣಮಹಾತ್ಮ್ಯ	ಕೃಷ್ಣಮಾಹಾತ್ಮ್ಯ
೨೫	೧೭	ಅಶ್ವಿನೀಸುತರೆ	ಅಶ್ವಿನೀಸುತರ
೨೮	೧೪	ಧುರಾಧರ್ಷಂ	ದುರಾಧರ್ಷಂ
೩೭	೧೧	ಕಾಣಸರಿಲ್ಲಿ	ಕಾಣೆಸರಿಲ್ಲಿ
೩೯	೧	ಧರ್ಮರಾಜನೆ	ಧರ್ಮರಾಜಗೆ
೪೧	೨೬	ಎಚ್ಚೆತ್ತಿಹೆನೊ	ಎಚ್ಚತ್ತಿಹನೊ
೫೩	೧	ಸ್ಥಾವಿರ	ಸ್ಥಾವರ
೫೪	೨೨	ವಾಲ್ಮಿಕಿ	ವಾಲ್ಮೀಕಿ
೫೮	೨೬	ಕೊರಗಿಡಿದರೆ	ಕೊರಗಿಡಿದಿರೆ
೬೩	೧	ದೂತರಲಘುವಿಕ್ರಮರು	ದೂತರಲಘುವಿಕ್ರಮರು
೬೫	೮	ಪೂಜೆಗೊಳ್ಳತಕ್ಕುದನು	ಪೂಜೆಗೊಳ್ಳತಕ್ಕನನು
೬೭	೧೩	ಸರ್ಗದತ್ತ	ಸ್ವರ್ಗದತ್ತ
೬೯	೬	ತೊರವ	ತೊರೆವ

ನಮ್ಮ ಪ್ರಕಟನೆಗಳು

		ಕ್ಯಾಲಿಕೋ ಪ್ರತಿ		ಸಾಧಾರಣ ಪ್ರತಿ	
೧	ಭೀಮ ದುರ್ಯೋಧನೀಯ—ಕುಮಾರವ್ಯಾಸ				
೨	ನಳಚರಿತ್ರೆಯ ಸಂಗ್ರಹ—ಕನಕದಾಸ	೨	೫೦	೧	೧೨
೩	ಒಲುಮೆ (ಪ್ರೇಮಗೀತೆಗಳು)—ಪ್ರೊ. ತೀ. ನಂ. ಶ್ರೀಕಂಠಯ್ಯ			೧	೫೦
೪	ರಸಸರಸ್ವತಿ—ಶ್ರೀ ಪು. ತಿ. ನರಸಿಂಹಾಚಾರ್			೧	೫೦
೫	ಮಹಾಪ್ರಸ್ಥಾನ— ,,	೨	೫೦	೧	೫೦
೬	ಕನ್ನಡ ಕಿರಾತಾರ್ಜುನೀಯ—ಡಾ. ಕೆ. ಕೃಷ್ಣಮೂರ್ತಿ			೨	೨೫
೭	ಮೇಘದೂತ—ಶ್ರೀ ಎಸ್. ವಿ. ಪರಮೇಶ್ವರಭಟ್ಟ			೧	೦೦
೮	ಕನ್ನಡ ಕುಮಾರ ಸಂಭವ— ,,			೨	೫೦
೯	ಕನ್ನಡ ರಘುವಂಶ— ,,	೬	೦೦	೪	೦೦
೧೦	ಪ್ರೇಮಾರಾಧನೆ— ,, (ಅಮರುಶತಕದ ಅನುವಾದ)			೨	೦೦
೧೧	ಗಾಥಾಸಪ್ತಶತಿ—೧			೦	೫೦
೧೨	ಉಂಗುರ—ಶ್ರೀ ಕೆ. ಎಸ್. ನರಸಿಂಹಮೂರ್ತಿ			೧	೨೫
೧೩	ದೇವಶಿಲ್ಪಿ—ಶ್ರೀ ಜಿ. ಎಸ್. ಶಿವರುದ್ರಪ್ಪ	೨	೨೫	೧	೨೫
೧೪	ಅಮರು ಶತಕಮ್—ಅಮರುಕವಿ			೧	೫೦
೧೫	ಹರಿಶ್ಚಂದ್ರ—ಪ್ರೊ. ಎಸ್. ವಿ. ರಂಗಣ್ಣ	೨	೫೦	೧	೫೦
೧೬	ಹರಿಣಾಭಿಸರಣ—ಶ್ರೀ ಪು. ತಿ. ನರಸಿಂಹಾಚಾರ್			೧	೨೫
೧೭	ಕನ್ನಡ ಪ್ರತಿಮಾ ನಾಟಕ—ಡಾ. ಕೆ. ಕೃಷ್ಣಮೂರ್ತಿ			೨	೨೫
೧೮	ಕನ್ನಡ ಉತ್ತರರಾಮ ಚರಿತ್ರೆ— ,,	೪	೦೦	೨	೮೦
೧೯	ಕನ್ನಡ ಮೃಚ್ಛಕಟಿಕ ಪ್ರಕರಣ— ,,	೬	೦೦	೪	೦೦
೨೦	ಕನ್ನಡ ಯಜ್ಞಫಲ— ,,	೩	೫೦	೨	೦೦
೨೧	ಕನ್ನಡ ಮಾಳವಿಕಾಗ್ನಿಮಿತ್ರ— ಶ್ರೀ ಎಸ್. ವಿ. ಪರಮೇಶ್ವರಭಟ್ಟ	೨	೦೦	೧	೦೦
೨೨	ಕನ್ನಡ ಶಾಕುಂತಳ— ,,	೩	೫೦	೨	೦೦
೨೩	ಗಂಡನ ಜುಲ್ಮಾನೆ ಮತ್ತು ಇತರ ನಾಟಕಗಳು— ಶ್ರೀ ಕೈವಾರ ರಾಜಾರಾವ್ (೧೨ ನಾಟಕಗಳ ಸಂಪುಟ)			೩	೫೦
೨೪	ಚಿತ್ರಪ್ರಮಾದ—ಶ್ರೀ ಎಂ. ರಾಮರಾವ್	೧	೫೦	೦	೭೫

[illegible] ಎಸ್. [illegible]

೨೬	ವಡ್ಡಾರಾಧನೆ—ಪ್ರೊ. ಡಿ. ಎಲ್. ನರಸಿಂಹಾಚಾರ್			[illegible]	
೨೭	ಶಬ್ದಮಣಿದರ್ಪಣಂ— ,,			೫	೦೦
೨೮	ಶಬ್ದವಿಹಾರ— ,,			೧	೨೫
೨೯	ಸಾಹಿತ್ಯೋಪಾಸನೆ—ಡಾ. ರಂ. ಶ್ರೀ ಮುಗುಳಿ			೨	೦೦
೩೦	ಕನ್ನಡ ಕಾವ್ಯಾಲಂಕಾರ—ಡಾ. ಕೆ. ಕೃಷ್ಣಮೂರ್ತಿ	೮	೦೦	೬	೦೦
೩೧	ಕನ್ನಡ ಕಾವ್ಯಪ್ರಕಾಶ—ಭಾಗ-೧ ,,			೬	೦೦
೩೨	ಸಮಾಲೋಕನ—ಪ್ರೊ. ತೀ. ನಂ. ಶ್ರೀಕಂಠಯ್ಯ			೫	೦೦
೩೩	ಚಂದ್ರಗುಪ್ತ ವಿಜಯ—ಶ್ರೀ ಎಚ್. ಎಂ. ಶಂಕರನಾರಾಯಣ ರಾವ್			೧	೫೦
೩೪	ರೋಮಿಯೋ ಮತ್ತು ಜೂಲಿಯಟ್— ,,			೦	೭೫
೩೫	ಯಶೋಧರನ ಕಥೆ— ,,			೧	೩೭
೩೬	ಕೆನಿಲ್‌ವರ್ತ್—ಶ್ರೀ ಎಚ್. ಎಲ್. ನಾಗೇಗೌಡ	೪	೫೦	೩	೦೦
೩೭	ರಾಗಜಯಂತಿ—ಕ. ವೆಂ. ರಾಜಗೋಪಾಲ್	೨	೫೦	೧	೫೦
೩೮	ಕರುಣಾಲಹರಿ—ಶ್ರೀ ಎಂ. ವಿ. ಸೀತಾರಾಮಯ್ಯ	೨	೫೦	೧.	೫೦
೩೯	ಕರ್ಮಯೋಗಿ—ಶ್ರೀ ಜಿ. ಎಸ್. ಶಿವರುದ್ರಪ್ಪ	೨	೫೦	೧	೫೦
೪೦	ಪಾಂಪೆಯ ಕೊನೆಯ ದಿನಗಳು—ಶ್ರೀ ಎ. ಕೃಷ್ಣಮೂರ್ತಿ			೧	೫೦
೪೧	ಶಿಲ್ಪಿಸಂಕುಲನ—ಶ್ರೀ ಆನಂದ			೧	೫೦
೪೨	ಮುರುಕು ಮಂಟಪ—ಶ್ರೀ ಎಸ್. ಅನಂತನಾರಾಯಣ			೧	೫೦
೪೩	ಅಪಸ್ವರ—ಶ್ರೀಮತಿ ತ್ರಿವೇಣಿ	೩	೦೦	೧	೫೦
೪೪	ಹೆಂಡತಿಯ ಹೆಸರು— ,,				
೪೫	ಪುಸ್ತಕವನ್ನು ಬಿಡು—ಶ್ರೀ ಎಸ್, ಮಂಜುನಾಥ್			೧	೫೦
೪೬	ಮಾರ್ಕೋಪೋಲೋ ಪ್ರವಾಸಕಥನ—				
	[illegible] ನಾಗೇಗೌಡ	೩	೫೦	೨	೫೦
	[illegible] ಗೋವಿಂದರಾವ್			೧	೨೫

ನಮ್ಮ ಹೊಸ ಪ್ರಕಟನೆಗಳು

ಶಬ್ದವಿಹಾರ—ಪ್ರೊ. ಡಿ.ಎಲ್. ನರಸಿಂಹಾಚಾರ್, ಎಂ.ಎ. ೧

ಜಾನ್‌ಸ್ಟ್ಯುಯರ್ಟ್‌ಮಿಲ್
—ಪ್ರೊ. ಎಚ್. ಕೃಷ್ಣರಾವ್.

ಕನ್ನಡ ಮೃಚ್ಛಕಟಿಕ (ಶೂದ್ರಕ ಕವಿಯ ನಾಟಕದ ಸಮಗ್ರಾನು
—ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ೪

ಕನ್ನಡ ಗಾಥಾಸಪ್ತಶತಿ (ಭಾಗ ೧)
—ಶ್ರೀ ಎಸ್.ವಿ. ಪರಮೇಶ್ವರಭಟ್ಟ ೦

ಈ ಗ್ರಂಥಗಳು ಅಚ್ಚಿನಲ್ಲಿದ್ದು ಬೇಗ ಹೊರಬೀಳುತ್ತವೆ

ಸಮಾಲೋಕನ—ಪ್ರೊ. ತೀ. ನಂ. ಶ್ರೀಕಂಠಯ್ಯ, ಎಂ.ಎ.
(ಶ್ರೀಯುತರ ವಿದ್ವತ್ ಲೇಖನಗಳ ಸಂಗ್ರಹ)

ಶಬ್ದಮಣಿದರ್ಪಣ—ಸಂ. ಪ್ರೊ. ಡಿ. ಎಲ್. ನರಸಿಂಹಾಚಾರ್, ಎಂ

ಯಜ್ಞಫಲ—ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.
(ಭಾಸನ ನಾಟಕದ ಮೊಟ್ಟಮೊದಲ ಅನುವಾದ)

ಕನ್ನಡ ಶಾಕುಂತಳ—ಶ್ರೀ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

* * * *

ಶ್ರೀ ಎಸ್. ವಿ. ಪರಮೇಶ್ವರಭಟ್ಟರ
ಕಾಳಿದಾಸನ ಕೃತಿಗಳ ಸಮಗ್ರಾನುವಾದಗಳಿಗೆ
ನಮಗೆ ಬರೆಯಿರಿ.

ಶಾರದಾ ಮಂದಿರ ★ ರಾಮಯ್ಯರ್ ರಸ್ತೆ ★ ಮೈ